Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–3 | ಜನವರಿ 15–21, 2024 | ಪುಟ 16 | ರೂ. 10/–
Volume-18 | Issue-3 | January 15-21, 2024 | Pages:16 | Price: 10/-



ಬಿಲ್ಕಿಸ್ ಬಾನು ಪ್ರಕರಣ :

ಸುಪ್ರೀಂಕೋರ್ಟಿನ ಸಮಾಧಾನಕರ ತೀರ್ಪು

ಬಿಡುಗಡೆಯಾಗಿದ್ದ ಅತ್ಯಾಚಾರಿ ಕೊಲೆಗಡುಕರು ಮತ್ತೆ ಜೈಲಿಗೆ



ಸೌಹಾರ್ದ ಪರಂಪರೆಯ ರಕ್ಷಣೆ ಒಂದು ಸವಾಲು

ಜನವರಿ 30 ಸೌಹಾರ್ದ ಮಾನವ ಸರಪಳಿ



ಹಿಟ್ & ರನ್ ಪ್ರಕರಣ ಕ್ರಿಮಿನಲ್ ಕಾನೂನು

ಪಿ.ಎಂ. ಕೇರ್ಸ್ ಫಂಡ್: ಸಾರ್ವಜನಿಕರಿಗೋ, ಸಂಘ ಪರಿವಾರಕ್ಕೋ

‘ಒಂದು ರಾಷ್ಟ್ರ, ಒಂದು ಚುನಾವಣೆ’–ಅಕ್ಷರಶಃ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ವಿಚಾರ

‘ಒಂದು ರಾಷ್ಟ್ರ, ಒಂದು ಚುನಾವಣೆ’ ಕುರಿತಂತೆ ಕೇಂದ್ರ ಸರಕಾರ ರಚಿಸಿದ ಉನ್ನತ ಮಟ್ಟದ ಸಮಿತಿ (ಹೆಚ್‌ಎಲ್‌ಸಿ) ಸಲಹೆ-ಸೂಚನೆಗಳನ್ನು ಕೇಳಿದ್ದ 18 ಅಕ್ಟೋಬರ್, 2023 ರ ಪತ್ರಕ್ಕೆ ಉತ್ತರವಾಗಿ ಡಿಸೆಂಬರ್ 7 ರಂದು ಬರೆದಿರುವ ಪತ್ರವನ್ನು ಜನವರಿ 7 ರಂದು ಸಿಪಿಐ(ಎಂ) ಬಿಡುಗಡೆ ಮಾಡಿದೆ.

ಈ ಪರಿಕಲ್ಪನೆಯನ್ನು ಹೇರಲು ಪ್ರಯತ್ನಿಸುತ್ತಿರುವ ವಿಧಾನದ ಬಗ್ಗೆಯೇ ತನ್ನ ಪತ್ರದ ಆರಂಭದಲ್ಲಿ ಸಿಪಿಐ(ಎಂ) ಬಲವಾದ ಆಕ್ಷೇಪಣೆಯನ್ನು ದಾಖಲಿಸಿದೆ.

ಉನ್ನತ ಮಟ್ಟದ ಸಮಿತಿಯ (ಎಚ್‌ಎಲ್‌ಸಿ) ಪರಾಮರ್ಶೆಗೆಂದು ಉಲ್ಲೇಖಿಸಿದ ವಿಷಯವೇ ಏಕಕಾಲದ ಚುನಾವಣೆಗಳ ಬಗ್ಗೆ ಈಗಾಗಲೇ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಮತ್ತು ಅದರ ಅನುಷ್ಠಾನದ ಪ್ರಶ್ನೆಯಷ್ಟೇ ಈಗಿರುವುದು ಎಂದು ಸಾಕಷ್ಟು ಸ್ಪಷ್ಟಪಡಿಸುತ್ತದೆ. ಅಕ್ಟೋಬರ್ 18 ರ ಪತ್ರವು "ಏಕಕಾಲದಲ್ಲಿ ಚುನಾವಣೆಗಳನ್ನು ಆಯೋಜಿಸಲು ಸೂಕ್ತವಾದ ಕಾನೂನು ಮತ್ತು ಆಡಳಿತಾತ್ಮಕ ಚೌಕಟ್ಟನ್ನು ನಿರ್ಮಿಸಲು ಶಿಫಾರಸುಗಳನ್ನು" ಮಾಡುವುದಷ್ಟೇ ಹೆಚ್‌ಎಲ್‌ಸಿಯ ಕೆಲಸ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಎಚ್‌ಎಲ್‌ಸಿಯ ಅಜೆಂಡಾ ಮತ್ತು ಉದ್ದೇಶ ಪೂರ್ವ-ನಿರ್ಧಾರಿತ ಎಂದು ಸಿಪಿಐ(ಎಂ) ತನ್ನ ಬಲವಾದ ಪ್ರತಿಭಟನೆಯನ್ನು ಈ ಪತ್ರದ ಮೂಲಕ ದಾಖಲಿಸಿದೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಪ್ರಸ್ತಾಪ ಮುಂದಿಟ್ಟಾಗಿನಿಂದ ಸಿಪಿಐ(ಎಂ) ತನ್ನ ವಿರೋಧ ಮತ್ತು ಕಳವಳವನ್ನು ವ್ಯಕ್ತಪಡಿಸಿದೆ.



ಈ ಹಿಂದೆ ಇದೇ ವಿಷಯದ ಬಗ್ಗೆ ರಾಜಕೀಯ ಪಕ್ಷಗಳ ಅಭಿಪ್ರಾಯವನ್ನು ಕೋರಿದ್ದಕ್ಕೆ ಪ್ರತಿಕ್ರಿಯೆಯಾಗಿ ಸಿಪಿಐ(ಎಂ) ಜುಲೈ 4, 2018 ರಂದು ಭಾರತೀಯ ಕಾನೂನು ಆಯೋಗಕ್ಕೆ ಟಿಪ್ಪಣಿಯಲ್ಲೇ ಏಕಕಾಲದಲ್ಲಿ ಚುನಾವಣೆಯ ಪ್ರಸ್ತಾಪದ ಪರಿಗಣನೆಯು ನಮ್ಮ ಸಂವಿಧಾನಕ್ಕೆ ಅಕ್ಷರಶಃ ಮತ್ತು ದರ ಅಭಾವ ಎರಡಕ್ಕೂ ವಿರುದ್ಧವಾಗಿದೆ ಎಂಬ ಅಭಿಪ್ರಾಯವನ್ನು ತಿಳಿಸಿತ್ತು ಎಂದು ಹೆಚ್‌ಎಲ್‌ಸಿಗೆ ಈ ಪತ್ರದಲ್ಲಿ ನೆನಪಿಸಲು ಆ ಪತ್ರವನ್ನು ಲಗತ್ತಿಸಿದೆ.

ಭಾರತೀಯ ಸಂವಿಧಾನವು ಜನರ ಇಚ್ಛೆಯನ್ನು ಕೇಂದ್ರದಲ್ಲಿಟ್ಟುಕೊಂಡಿದೆ. ಇದನ್ನು ಸಂವಿಧಾನದ ಪೀಠಿಕೆ "ನಾವು, ಭಾರತದ ಜನರು" ಎಂದು ಸ್ಪಷ್ಟವಾಗಿ ಸಾರಿದೆ. ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ಜನರು ತಮ್ಮ ಸಾರ್ವಭೌಮತ್ವವನ್ನು ಚಲಾಯಿಸುತ್ತಾರೆ, ಈ ಚುನಾಯಿತ ಪ್ರತಿನಿಧಿಗಳು ಜನರಿಗೆ ಜವಾಬುದಾರರಾಗಿರುತ್ತಾರೆ, ಮತ್ತು ಕಾರ್ಯಾಂಗ ಅಥವ ಚುನಾವಣೆಯ ಮೂಲಕ ರಚಿಸಿದ ಸರಕಾರ ಶಾಸಕಾಂಗಕ್ಕೆ ಜವಾಬುದಾರವಾಗಿರುತ್ತದೆ. ನಮ್ಮ ಸಂವಿಧಾನದ ಈ ಅಂಶಗಳನ್ನು ತಿರುಚುವುದು ಅಥವ ದುರ್ಬಲಗೊಳಿಸುವುದು ಸಾಧ್ಯವಿಲ್ಲ; ಅಷ್ಟೇ ಅಲ್ಲ, ಅಂತಹ ಪ್ರಸ್ತಾಪವು ಪ್ರಜಾಪ್ರಭುತ್ವ ವಿರೋಧಿ ಮತ್ತು ನಮ್ಮ ಸಂವಿಧಾನದ ಮೂಲಭೂತ ಲಕ್ಷಣವಾದ ಒಕ್ಕೂಟ ತತ್ವವನ್ನು ನಿರಾಕರಿಸುವಂತದ್ದು ಎಂದು ಸಿಪಿಐ(ಎಂ) ಹೆಚ್‌ಎಲ್‌ಸಿಗೆ ತಿಳಿಸಿದೆ.

ಜುಲೈ 4, 2018 ರಂದು ಭಾರತದ ಕಾನೂನು ಆಯೋಗಕ್ಕೆ ಸಲ್ಲಿಸಲಾದ ಟಿಪ್ಪಣಿಯನ್ನು ಈ ಮುಂದೆ ಕೊಡಲಾಗಿದೆ:

ಏಕಕಾಲದಲ್ಲಿ ಚುನಾವಣೆಯ ಬಗ್ಗೆ ಸಿಪಿಐ(ಎಂ) ನಿಲುವು

ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ಜಾರಿಗೊಳಿಸುವುದರ ವಿರುದ್ಧದ ತರ್ಕ ತಾಂತ್ರಿಕ ಸ್ವರೂಪದ್ದು ಅಥವಾ ಅದು ಅಪ್ರಾಯೋಗಿಕವಾಗಿದೆ ಎಂಬುದಷ್ಟೇ ಅಲ್ಲ. ಮೂಲ ಆಕ್ಷೇಪಣೆಯೆಂದರೆ, ಇದು ಮೂಲಭೂತವಾಗಿ ಪ್ರಜಾಪ್ರಭುತ್ವ ವಿರೋಧಿಯಾಗಿದೆ ಮತ್ತು ಸಂವಿಧಾನದಲ್ಲಿ ಆದೇಶಿಸಿರುವ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಬೇರಿಗೇ ಹೊಡೆಯುತ್ತದೆ ಎಂಬುದು.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಚುನಾವಣೆಗಳನ್ನು ಒಟ್ಟಿಗೆ ನಡೆಸಬೇಕಾದರೆ ಸರ್ಕಾರವು ಶಾಸಕಾಂಗಕ್ಕೆ ಜವಾಬುದಾರಿಯಾಗಿರಬೇಕು ಎಂಬ ಸಾಂವಿಧಾನಿಕ ಯೋಜನೆಗೆ ಕೈಹಾಕಬೇಕಾಗುತ್ತದೆ. ಕಲಮು 75(3) ಮಂತ್ರಿ ಮಂಡಲದ ಸಾಮೂಹಿಕ ಜವಾಬ್ದಾರಿಯು ಲೋಕಸಭೆಗೆ, ಅದೇ ರೀತಿ, ರಾಜ್ಯಗಳಿಗೆ ಸಂಬಂಧಪಟ್ಟಂತೆ, ಕಲಮು 164(1) ರಾಜ್ಯದ ಶಾಸಕಾಂಗ ಸಭೆಗೆ ಸಾಮೂಹಿಕವಾಗಿ ಜವಾಬುದಾರಿಯಾಗಿರುತ್ತದೆ ಎಂದು ಹೇಳುತ್ತದೆ.

ಸಂವಿಧಾನದ ಪ್ರಕಾರ, ಅವಿಶ್ವಾಸ ನಿರ್ಣಯದ ಮೇಲೆ ಮತ ಚಲಾಯಿಸುವ ಮೂಲಕ ಅಥವಾ ಹಣಮಸೂದೆಯಲ್ಲಿ ಮತವನ್ನು ಕಳೆದುಕೊಳ್ಳುವ ಮೂಲಕ ಸರ್ಕಾರವು ಶಾಸಕಾಂಗದ ವಿಶ್ವಾಸವನ್ನು ಕಳೆದುಕೊಂಡರೆ, ಅದು ರಾಜೀನಾಮೆ ನೀಡಲು ಬದ್ಧವಾಗಿದೆ. ಪರ್ಯಾಯ ಸರ್ಕಾರ ರಚನೆಯಾಗದಿದ್ದರೆ ಸದನವನ್ನು ವಿಸರ್ಜಿಸಿ ಮಧ್ಯಂತರ ಚುನಾವಣೆ ನಡೆಸಲಾಗುವುದು.

ಲೋಕಸಭೆಗೆ ಅಥವಾ ರಾಜ್ಯ ಶಾಸಕಾಂಗಗಳಿಗೆ ಸಂವಿಧಾನದಲ್ಲಿ ಯಾವುದೇ ಅಧಿಕಾರಾವಧಿಯನ್ನು ನಿಗದಿಪಡಿಸಲಾಗಿಲ್ಲ. ಕಲಮು 83(2) ಮತ್ತು ಕಲಮು 172(1) ಎರಡೂ ಲೋಕಸಭೆ ಮತ್ತು ವಿಧಾನಸಭೆಯ ಅವಧಿಯು ಐದು ವರ್ಷಗಳ "ಮೊದಲು ವಿಸರ್ಜಿಸದಿದ್ದರೆ" ಐದು ವರ್ಷಗಳವರೆಗೆ ಇರುತ್ತದೆ ಎಂದು ನಿರ್ದಿಷ್ಟಪಡಿಸುತ್ತದೆ.

ಲೋಕಸಭೆ ಅಥವಾ ಶಾಸಕಾಂಗದ ಜೀವಿತಾವಧಿಯನ್ನು ವಿಸ್ತರಿಸುವ ಯಾವುದೇ ಪ್ರಯತ್ನವು ಸಂವಿಧಾನ ವಿರೋಧಿ ಮಾತ್ರವಲ್ಲದೆ ಪ್ರಜಾಪ್ರಭುತ್ವ ವಿರೋಧಿಯೂ ಆಗಿರುತ್ತದೆ. ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ಜನರ ಇಚ್ಛೆಯೇ ಮೇಲುಗೈ ಸಾಧಿಸಬೇಕು.

ಏಕಕಾಲಕ್ಕೆ ಚುನಾವಣೆ ನಡೆಸುವ ನಿಟ್ಟಿನಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಲು ಹಲವು ಸಲಹೆಗಳನ್ನು ನೀಡಲಾಗುತ್ತಿದೆ. ನೀತಿ ಆಯೋಗವು ಬಿಡುಗಡೆ ಮಾಡಿದ ಚರ್ಚಾ ಪ್ರಬಂಧದ ಒಂದು ಸಲಹೆಯೆಂದರೆ, ಲೋಕಸಭೆಯ ವಿಸರ್ಜನೆಯನ್ನು ತಪ್ಪಿಸಲು ಸಾಧ್ಯವಾಗದಿದ್ದರೆ ಮತ್ತು ಲೋಕಸಭೆಯ ಉಳಿದ ಅವಧಿಯು ದೀರ್ಘವಾಗಿಲ್ಲದಿದ್ದರೆ, ರಾಷ್ಟ್ರಪತಿಗಳು ಮುಂದಿನ ಸದನ ರಚನೆಯಾಗುವವರೆಗೆ ನೇಮಿಸುವ ಮಂತ್ರಿ ಮಂಡಳಿಯ ನೆರವು ಮತ್ತು ಸಲಹೆಯ ಮೇರೆಗೆ ದೇಶದ ಆಡಳಿತವನ್ನು ನಿರ್ವಹಿಸಬಹುದು ಎಂಬ ನಿಬಂಧನೆಯನ್ನು ಸೇರಿಸಬಹುದು ಎಂದು. ಈ ಅತಿರೇಕದ ಪ್ರಸ್ತಾಪವು ರಾಷ್ಟ್ರಪತಿಗಳನ್ನು ಕಾರ್ಯಾಂಗದ ಮುಖ್ಯಸ್ಥರನ್ನಾಗಿ ಮಾಡುತ್ತದೆ. ಇದು ಹಿಂಬಾಗಿಲಿನ ಮೂಲಕ ಕಾರ್ಯಕಾರಿ ಅಧ್ಯಕ್ಷ ವ್ಯವಸ್ಥೆಯನ್ನು ತರುತ್ತದೆ.

ಇನ್ನೊಂದು ಸಲಹೆಯೆಂದರೆ, ಸದನದ ವಿಸರ್ಜನೆಯ ಸಮಯದಲ್ಲಿ, ಉಳಿದ ಅವಧಿಯು ದೀರ್ಘವಾಗಿದ್ದರೆ, ನಂತರ ಹೊಸ ಚುನಾವಣೆಗಳನ್ನು ನಡೆಸಲಾಗುವುದು ಮತ್ತು ಸದನದ ಅವಧಿಯು ಉಳಿದ ಉಳಿದ ಅವಧಿಗೆ ಮಾತ್ರ ಇರುತ್ತದೆ, ಅಂದರೆ, ಸದನದ ವಿಸರ್ಜನೆಯು ಅದರ ಅವಧಿಯ ಎರಡು ವರ್ಷಗಳ ನಂತರ ನಡೆದರೆ, ನಂತರದ ಚುನಾವಣೆಯು ಮೂರು ವರ್ಷಗಳ ಅವಧಿಗೆ ನಡೆಯಲಿದೆ. ಆದ್ದರಿಂದ, ವಾಸ್ತವವಾಗಿ, ಹೆಚ್ಚು ಬಾರಿ ಲೋಕಸಭೆ ಚುನಾವಣೆಗಳು ನಡೆಯುತ್ತವೆ, ಇದು ಯಾವ ಉದ್ದೇಶದಿಂದ ಏಕಕಾಲದಲ್ಲಿ ಚುನಾವಣೆಗಳನ್ನು ಪ್ರತಿಪಾದಿಸಲಾಗುತ್ತಿದೆಯೋ ಅದನ್ನೇ ವಿಫಲಗೊಳಿಸುತ್ತದೆ.

ಏಕಕಾಲಿಕ ಚುನಾವಣೆಗಳನ್ನು ತುರುಕುವ ಪ್ರಯತ್ನಗಳಿಗೆ ಮತ್ತೊಂದು ಬಲಿಯೆಂದರೆ, ಒಕ್ಕೂಟ ತತ್ವ. ಹಂತ ಹಂತವಾಗಿ ಕೆಲವು ವಿಧಾನಸಭೆಗಳ ಜೀವಿತಾವಧಿಯನ್ನು ವಿಸ್ತರಿಸುವುದು ಅಥವಾ ಕೆಲವು ವಿಧಾನಸಭೆಗಳ ಅಧಿಕಾರಾವಧಿಯನ್ನು ಮೊಟಕುಗೊಳಿಸುವುದು ಸಂಸತ್ತಿನ ಸ್ಥಾಯಿ ಸಮಿತಿ, 2015 ರ 79 ನೇ ವರದಿ ಮತ್ತು ನೀತಿ ಆಯೋಗದ ಪ್ರಬಂಧವು ಲೋಕಸಭೆ ಮತ್ತು ರಾಜ್ಯ ವಿಧಾನಸಭೆ ಚುನಾವಣೆಗಳನ್ನು ಒಟ್ಟುಗೂಡಿಸಲು ಮಂಡಿಸಿದ ಪ್ರಸ್ತಾಪಗಳಲ್ಲಿ ಒಂದು. ವಿಧಾನಸಭೆಯ ಅಧಿಕಾರಾವಧಿಯನ್ನು ಕಡಿತಗೊಳಿಸುವುದು ಅಥವಾ ಅದರ ವಿಸ್ತರಣೆಯು ರಾಜ್ಯಗಳ ಹಕ್ಕುಗಳ ಮೇಲಿನ ಆಕ್ರಮಣವಾಗಿದೆ ಮತ್ತು ತಮ್ಮ ಶಾಸಕರನ್ನು ಆಯ್ಕೆ ಮಾಡುವ ನಾಗರಿಕರ ಹಕ್ಕುಗಳನ್ನು ಮೊಟಕುಗೊಳಿಸುತ್ತದೆ.

ರಾಜ್ಯ ಶಾಸಕಾಂಗಗಳ ಸಂದರ್ಭದಲ್ಲಿ ಮತ್ತೊಂದು ಸಲಹೆಯೆಂದರೆ, ಅಧಿಕಾರಾವಧಿಯ ಹೆಚ್ಚಿನ ಅವಧಿ ಮುಗಿದ ನಂತರ ವಿಸರ್ಜನೆಯಾದರೆ, ರಾಜ್ಯಪಾಲರು ಸದನದ ಉಳಿದ ಅವಧಿಗೆ ರಾಜ್ಯವನ್ನು ನಡೆಸಬಹುದು. ಇದರ ಅರ್ಥ ಕೂಡ ಕೇಂದ್ರದ ಆಡಳಿತ ಎಂದಾಗುತ್ತದೆ.

ಶಾಸಕಾಂಗದ ಹೊಣೆಗಾರಿಕೆಯನ್ನು ತಪ್ಪಿಸಲು ಮತ್ತು ಸದನದ ನಿಗದಿತ ಅಧಿಕಾರಾವಧಿಯನ್ನು ಖಚಿತಪಡಿಸಿಕೊಳ್ಳಲು ವಿವಿಧ ಪ್ರಸ್ತಾಪಗಳನ್ನು ಮುಂದಿಡಲಾಗಿದೆ. ಭಾರತದ ಕಾನೂನು ಆಯೋಗದ ಕರಡು ಕಾರ್ಯಪ್ರಬಂಧ ಸೇರಿದಂತೆ ಪ್ರಸ್ತಾಪಿಸಲಾದ ಒಂದು ಪ್ರಸ್ತಾಪವೆಂದರೆ, ಅವಿಶ್ವಾಸ ನಿರ್ಣಯವನ್ನು ಮಂಡಿಸಿದಾಗ, ಸದನದ ಹೊಸ ನಾಯಕನನ್ನು ಆಯ್ಕೆ ಮಾಡಲು ಅದರೊಂದಿಗೆ ನಿರ್ಣಯವನ್ನು ಮಂಡಿಸಬೇಕು. ಇದರರ್ಥ ಒಂದು ಸರ್ಕಾರವನ್ನು ಮತ ಹಾಕುವ ಮೂಲಕ ಇಳಿಸುವ ಶಾಸಕರ ಹಕ್ಕನ್ನು ಅವರು ಹೊಸ ಸರ್ಕಾರವನ್ನು ಆಯ್ಕೆ ಮಾಡಬೇಕೆಂಬ ಷರತ್ತು ಹಾಕಿ ಮೊಟಕುಗೊಳಿಸಿದಂತಾಗುತ್ತದೆ.

ಚುನಾಯಿತ ಶಾಸಕರು ಮತ್ತು ಲೋಕಸಭೆಯ ಸದಸ್ಯರು ಯಾವುದೇ ಸರ್ಕಾರವನ್ನು ಮತ ಚಲಾಯಿಸಿ ಇಳಿಸುವ ಹಕ್ಕನ್ನು ಅಥವಾ ಸದನದಲ್ಲಿ ಸ್ಥಿರ ಬಹುಮತವನ್ನು ಹೊಂದಿರುವ ಆಡಳಿತ ಪಕ್ಷವು ಸದನವನ್ನು ವಿಸರ್ಜಿಸುವಂತೆ ಶಿಫಾರಸು ಮಾಡುವ ಮತ್ತು ಅವಧಿಗೆ ಮುಂಚಿತವಾಗಿ ಚುನಾವಣೆಗಳನ್ನು ನಡೆಸುವ ಹಕ್ಕನ್ನು ಮೊಟಕುಗೊಳಿಸಲಾಗುವುದಿಲ್ಲ.

ಲೋಕಸಭೆ ಚುನಾವಣೆಗೆ ಹೊಂದಿಕೆಯಾಗಿ ರಾಜ್ಯ ವಿಧಾನಸಭಾ ಚುನಾವಣೆಗಳನ್ನು ತರುವ ಎಲ್ಲಾ ಪ್ರಸ್ತಾಪಗಳು ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳ ಬಗ್ಗೆ ನಿರ್ಲಕ್ಷ್ಯವನ್ನು ಬಹಿರಂಗಪಡಿಸುತ್ತವೆ. ಮೊದಲನೆಯದಾಗಿ, ಕೇಂದ್ರ ಸರ್ಕಾರವು 356 ನೇ ವಿಧಿಯನ್ನು ಮನಬಂದಂತೆ ದುರುಪಯೋಗಪಡಿಸಿಕೊಂಡಿದ್ದರಿಂದ ರಾಜ್ಯ ವಿಧಾನಸಭೆಗಳ ಅನೇಕ ಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳಿಂದ ಬೇರ್ಪಟ್ಟವು ಎಂಬುದನ್ನು ಮರೆಯಬಾರದು. 1959 ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಮಂತ್ರಿಮಂಡಲವನ್ನು ವಜಾಗೊಳಿಸುವುದರೊಂದಿಗೆ ಈ ಪ್ರಕ್ರಿಯೆಯು ಪ್ರಾರಂಭವಾಯಿತು.

ಚುನಾವಣೆಗಳ ಏಕಕಾಲಿಕತೆಯನ್ನು ಖಾತ್ರಿಪಡಿಸುವ ಹೆಸರಿನಲ್ಲಿ, ಈ ಎಲ್ಲಾ ಪ್ರಸ್ತಾಪಗಳು ರಾಜ್ಯಪಾಲರ ಪಾತ್ರ ಮತ್ತು ಕೇಂದ್ರದ ಹಸ್ತಕ್ಷೇಪವನ್ನು ಹೆಚ್ಚಿಸುತ್ತವೆ.

ಭಾರತವು ಅಸಂಖ್ಯಾತ ವೈವಿಧ್ಯತೆಗಳನ್ನು ಹೊಂದಿರುವ ವಿಶಾಲ ದೇಶವಾಗಿದೆ ಮತ್ತು ಕೇವಲ ಒಕ್ಕೂಟ ವ್ಯವಸ್ಥೆ ಮಾತ್ರವೇ ರಾಜಕೀಯ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬಲ್ಲದು. ವಿವಿಧ ಸಮಯಗಳಲ್ಲಿ ರಾಜ್ಯಗಳಲ್ಲಿ ಚುನಾವಣೆಗಳನ್ನು ನಡೆಸುವುದು ಒಕ್ಕೂಟ ವ್ಯವಸ್ಥೆಯ ಒಂದು ಅಂಶವಾಗಿದೆ.

ಆದ್ದರಿಂದ, ಸಿಪಿಐ(ಎಂ) ಸಂಸದೀಯ ಪ್ರಜಾಪ್ರಭುತ್ವದ ಅಸ್ತಿತ್ವದಲ್ಲಿರುವ ಸಾಂವಿಧಾನಿಕ ಯೋಜನೆಯನ್ನು ತುಳಿಯುವ ಮೂಲಕ ಮಾತ್ರವೇ ಏಕಕಾಲದಲ್ಲಿ ಚುನಾವಣೆಗಳನ್ನು ತರಲು ಸಾಧ್ಯವಾದ್ದರಿಂದ, ಇಂತಹ ಯಾವುದೇ ಕೃತಕ ಪ್ರಯತ್ನವನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ.

ಜನಶಕ್ತಿ ಕನ್ನಡ ವಾರಪತ್ರಿಕೆ ಜನವರಿ 15-21, 2024 2 January 15-21, 2024 JANASHAKTHI KANNADA VARA PATRIKE

ಸಂಪಾದಕೀಯ

ಒಕ್ಕೂಟ ತತ್ವದ ಉಲ್ಲಂಘನೆ

ಗಣರಾಜ್ಯೋತ್ಸವದ ದಿನದಂದು ನವದೆಹಲಿಯಲ್ಲಿ ನಡೆಯುವ ಪಥಸಂಚಲನದಲ್ಲಿ ಕರ್ನಾಟಕದ ಪ್ರಸ್ತಾವಿತ ಸ್ತಬ್ಧಚಿತ್ರದ ಭಾಗವಹಿಸುವಿಕೆಯನ್ನು ಭಾರತ ಸರ್ಕಾರ ನಿರಾಕರಿಸಿರುವುದು ಅತ್ಯಂತ ಖೇದದ ಸಂಗತಿ. ಇದು ಖಂಡನೆಗೆ ಅರ್ಹವಾದ ನಡೆಯಾಗಿದೆ. ಭಾರತ ಒಂದು ಪ್ರಜಾಸತ್ತಾತ್ಮಕ ಗಣರಾಜ್ಯ. ವಿಶೇಷವಾಗಿ ನಮ್ಮ ಸಂವಿಧಾನವೇ ಪ್ರತಿಪಾದಿಸಿರುವಂತೆ ಒಕ್ಕೂಟ ವ್ಯವಸ್ಥೆ ಸಂರಚನೆಯ ಆಧಾರ ನಮ್ಮದಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಭಾರತ ಸರ್ಕಾರ ಒಂದು ಇರುವಂತೆ ಹಲವಾರು ಭಾಷಾವಾರು ಪ್ರಾಂತ್ಯಗಳನ್ನು ಹೊಂದಿರುವ ಭಾರತದಲ್ಲಿ ರಾಜ್ಯ ಸರ್ಕಾರಗಳು ಅಸ್ತಿತ್ವದಲ್ಲಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಂಬಂಧ ಸಮಾನವಾಗಿ ಮತ್ತು ಪರಸ್ಪರ ಸಹಕಾರದೊಂದಿಗೆ ವರ್ತಿಸಬೇಕು ಬೆಳೆಯಬೇಕು ಎನ್ನುವ ಆಶಯವನ್ನು ಹೊಂದಿದೆ. ಈ ಸಮಾನ ಸ್ಥಾನಮಾನ ಮತ್ತು ಸಮನ್ವಯತೆ ಭಾರತ ಬಲಿಷ್ಠವಾಗಿ ಇರಲು ಅತ್ಯಂತ ಮೂಲ ಅವಶ್ಯಕತೆಯಾಗಿದೆ.

ಆದರೆ ಬಿಜೆಪಿ ಮೋದಿ ಯವರ ನೇತೃತ್ವದ ಭಾರತ ಒಕ್ಕೂಟ ಸರ್ಕಾರ ಈ ಮೂಲಭೂತ ತತ್ವವನ್ನೇ ಉಲ್ಲಂಘಿಸುತ್ತಿದೆ. ಮಾತ್ರವಲ್ಲ, ಭಾರತ ಸರ್ಕಾರದ ಯಜಮಾನಿಕೆ ಮತ್ತು ಸರ್ವಾಧಿಕಾರತ್ವವನ್ನು ತನ್ನ ಹಕ್ಕು ಎನ್ನುವಂತೆ ವರ್ತಿಸುತ್ತಿದೆ. ರಾಜ್ಯಗಳ ಸ್ಥಾನಮಾನವನ್ನು ಹೀಗಳೆಯುವ ಈ ಪ್ರವೃತ್ತಿ ಪ್ರಮಾದಕರವಾಗಿದೆ.

ಗಣರಾಜ್ಯೋತ್ಸವ ಎನ್ನುವುದು ಸ್ವಾತಂತ್ರ್ಯೋತ್ತರದಲ್ಲಿ ಆಧುನಿಕ ಭಾರತದ ನಿರ್ಮಾಣ, ಪ್ರಜಾಪ್ರಭುತ್ವ ವ್ಯವಸ್ಥೆಯ ಸಾಧನೆ, ಸಾಗಿ ಬಂದ ಹಾದಿಯ ಅವಲೋಕನ ಮತ್ತು ಬಲಿಷ್ಠ ಜನಪರ ಭಾರತ ಕಟ್ಟುವ ಹೊಸತರ ಸಂಕಲ್ಪದ ಸಂದರ್ಭವಾಗಿದೆ. ದೇಶದಲ್ಲಿನ ಪ್ರಜಾಪ್ರಭುತ್ವ-ಸಂವಿಧಾನ ಬದ್ಧ ಆಡಳಿತವನ್ನು ಬಲಗೊಳಿಸುವುದರತ್ತ ಗಣರಾಜ್ಯೋತ್ಸವದ ಈ ಆಚರಣೆ ಇಂಬು ಕೊಡುವಂತಿರಬೇಕು.

ಗಣರಾಜ್ಯೋತ್ಸವದ ದಿನದಂದು ದೆಹಲಿಯಲ್ಲಿ ಒಕ್ಕೂಟದ ಎಲ್ಲಾ ರಾಜ್ಯಗಳ ಸಾಧನೆಗಳನ್ನು ಪಥಸಂಚಲನದಲ್ಲಿ ಪ್ರತಿಬಿಂಬಿತವಾಗುವುದು ಕೇವಲ ರಾಜ್ಯಗಳ ಹೆಗ್ಗಳಿಕೆ ಮಾತ್ರ ಅಲ್ಲ. ಅದು ಒಟ್ಟು ಭಾರತ ಗಣರಾಜ್ಯದ ಹಿರಿಮೆಯೂ ಕೂಡ ಎನ್ನುವ ವಾಸ್ತವನ್ನು ಒಕ್ಕೂಟದ ಸರಕಾರ ನಿರಾಕರಿಸುತ್ತಿದೆ. ಕರ್ನಾಟಕ ಸರಕಾರ ಕೋರಿದ್ದ ಐದು ವಿಷಯಗಳಲ್ಲಿ ' ಬ್ರಾಂಡ್ ಬೆಂಗಳೂರು' ಆಯ್ಕೆಯಾಗಿದ್ದು ಕೊನೆಯ ಸುತ್ತಿನಲ್ಲಿ ತಿರಸ್ಕಾರಗೊಂಡಿದೆ. ಇದರಲ್ಲಿ ದಕ್ಷಿಣ ಕರ್ನಾಟಕದ-ಮೈಸೂರು ರಾಜ್ಯದ ಆಧುನಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯದ ಪ್ರತಿಪಾದಕ ನಾಲ್ವಡಿ ಕೃಷ್ಣರಾಜ ಒಡೆಯರ್, ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ಹೋರಾಡಿದ ವೀರ ರಾಣಿ ಕಿತ್ತೂರು ಚೆನ್ನಮ್ಮ ಮತ್ತು ಕರ್ನಾಟಕದ ನೈಸರ್ಗಿಕ ಚಿತ್ರಣಗಳು-ಬ್ರಾಂಡ್ ಬೆಂಗಳೂರು ಆ ಸ್ಥಬ್ದಚಿತ್ರದಲ್ಲಿರುವ ಬಗ್ಗೆ ರಕ್ಷಣಾ ಸಚಿವಾಲಯ ಕರೆದ ಸಭೆಯಲ್ಲಿ ಮಂಡಿತವಾಗಿತ್ತು. ಇದನ್ನು ನಿರಾಕರಿಸಲು ಆಕ್ಷೇಪಿಸುವಂತಹದ್ದೇನಿದೆ ಎನ್ನುವುದನ್ನು ಸರಕಾರ ಹೇಳಿಲ್ಲ. ಈ ನಿರಾಕರಣೆಯಲ್ಲಿ ಒಂದು ರಾಜಕೀಯ ನಿರ್ಧಾರವೇ ಪ್ರಭಾವಿಸಿದಂತೆ ಕಾಣುತ್ತದೆ. ಪ್ರಮುಖವಾಗಿ ಕರ್ನಾಟಕದಲ್ಲಿರುವುದು ವಿರೋಧ ಪಕ್ಷದ ಸರಕಾರ. ಉತ್ತರ ಭಾರತದ ಬಹುತೇಕ ರಾಜ್ಯಗಳು ಅತ್ಯಂತ ಹಿಂದುಳಿದ, ಜಾತೀಯತೆ, ಕೋಮುವಾದ, ನಿರುದ್ಯೋಗ, ಬಡತನ, ಹಿಂಸೆ ಮುಂತಾದ ಸ್ಥಿತಿಯನ್ನು ಎದುರಿಸುತ್ತಿರುವಾಗ ಹಲವು ಮಿತಿಗಳ ನಡುವೆಯೂ ದಕ್ಷಿಣದ ರಾಜ್ಯಗಳು ಅಭಿವೃದ್ಧಿ ಹೊಂದಿರುವುದನ್ನು ಪ್ರೊಜೆಕ್ಟ್ ಮಾಡುವುದು ಕೇಂದ್ರಕ್ಕೆ ಇಷ್ಟವಾಗುತ್ತಿಲ್ಲ ಎಂದೂ ಹೇಳಲಾಗುತ್ತಿದೆ. ಅದನ್ನು ಖಂಡಿತಕ್ಕೂ ಒಪ್ಪುವಂತಹುದಲ್ಲ.

ಹೀಗೆ ಟ್ಯಾಬ್ಲೋಗಳು ಗಣರಾಜ್ಯೋತ್ಸವದಲ್ಲಿ ಭಾಗವಹಿಸದಂತೆ ನಿರಾಕರಿಸಿರುವುದು ಹಿಂದೆಯೂ ನಡೆದಿದೆ. ಈ ಪ್ರವೃತ್ತಿ, ಕ್ರಮಗಳೇ ಅಸಿಂಧುವಾಗಬೇಕು. ಸೈದ್ಧಾಂತಿಕ, ಸಂಕುಚಿತ ರಾಜಕಾರಣದ ಕಾರಣದಿಂದಲೇ ಕರ್ನಾಟಕ, ಕೇರಳ ಮುಂತಾದ ರಾಜ್ಯಗಳ ಭಾಗವಹಿಸುವಿಕೆಯನ್ನು ಆಗೀಗ ನಿರಾಕರಿಸುತ್ತಲೇ ಬರಲಾಗಿದೆ. ಇದು ಒಕ್ಕೂಟ ವ್ಯವಸ್ಥೆಗೆ ವ್ಯತಿರಿಕ್ತವಾದುದು. ಗಣರಾಜ್ಯೋತ್ಸವದ ಸಂದರ್ಭ ನಮ್ಮ ಒಕ್ಕೂಟದ ವ್ಯವಸ್ಥೆಯಲ್ಲಿ ವಿಭಿನ್ನ ಸಂಸ್ಕೃತಿ, ಆರ್ಥಿಕ, ಸಾಮಾಜಿಕ, ನೈಸರ್ಗಿಕ ವೈಶಿಷ್ಟ್ಯಗಳನ್ನು ತೆರೆದು ತೋರಿಸುವ ವೈವಿಧ್ಯತೆ, ಬಹುತ್ವದ ಮಾದರಿ, ಐಕ್ಯತೆಯ ಬಲ ಮತ್ತು ಚೆಲುವನ್ನು ಸಾರಿ, ಬಲಗೊಳಿಸುವಂತೆ ಇರಬೇಕು. ಆದರೆ ಮೋದಿಯವರ ನೇತೃತ್ವದ ಸರಕಾರ ಅಂತರವನ್ನು ಇನ್ನಷ್ಟೂ ಹೆಚ್ಚಿಸುವ, ರಾಜಕೀಯ ಸೇಡನ್ನು ಸಾಧಿಸುವ ಸಂದರ್ಭವನ್ನಾಗಿ ಬಳಸುತ್ತಿದೆ. ಇದು ಅಪಾಯಕಾರಿಯಾಗಿದೆ.

ಭಾರತ ಸರ್ಕಾರವು ಕೂಡ ರಾಜ್ಯಗಳನ್ನು ಅತ್ಯಂತ ತಾರತಮ್ಯದಿಂದಲೇ ನೋಡುತ್ತಿದೆ. ಸಂವಿಧಾನದಲ್ಲಿರುವ ಭಾಷೆಯ ಸಮಾನತೆಯ ವಿಷಯದಲ್ಲೂ ಹಿಂದಿ ಹೇರಿಕೆಯನ್ನು ಮಾಡಲು ನಿರಂತರವಾಗಿ ಪ್ರಯತ್ನಿಸುತ್ತಲೇ ಬಂದಿದೆ. ಅಷ್ಟು ಮಾತ್ರವಲ್ಲ ರಾಜ್ಯಗಳಿಗೆ ಸಿಗಬೇಕಾದ ತೆರಿಗೆಯ ಪಾಲನ್ನು ನೀಡಲು ನಿರಾಕರಿಸಿ ರಾಜ್ಯ ಸರ್ಕಾರಗಳು ಹಣಕಾಸಿನ ಕೊರತೆಯಿಂದ ನರಳುವಂತೆ ಮಾಡುತ್ತಿದೆ. ಇದು ಒಂದು ರೀತಿಯ ಆರ್ಥಿಕ ದಿಗ್ಬಂಧನವೇ ಆಗಿದೆ. ಪ್ರಕೃತಿ ವಿಕೋಪದಿಂದ, ತೀವ್ರ ಬರಗಾಲವನ್ನು ಕರ್ನಾಟಕ ಎದುರಿಸುತ್ತಿದ್ದು ರಾಜ್ಯ ಸರ್ಕಾರ ಕೇಂದ್ರದಿಂದ ಧನ ಸಹಾಯವನ್ನು ಕೋರಿ ಮನವಿ ಮಾಡಿದ್ದರೂ ಇದುವರೆಗೂ ಅದು ಬಿಡುಗಡೆಯಾಗಲಿಲ್ಲ. ಇದು ಅತ್ಯಂತ ಸರ್ವಾಧಿಕಾರತ್ವದ ವರ್ತನೆಯಾಗಿದೆ.

ಭಾರತ ಒಕ್ಕೂಟ ಸರಕಾರ ತನ್ನ ನಿಲುಮೆಯನ್ನು ಬದಲಾಯಿಸಬೇಕು. ಬದಲಾಯಿಸುವಂತೆ ಕೇವಲ ರಾಜ್ಯದ ಮುಖ್ಯಮಂತ್ರಿಗಳು ಪತ್ರ ಬರೆದರಷ್ಟೇ ಸಾಲದು ಜನತೆಯೂ ತೀವ್ರ ಒತ್ತಡ ಹಾಕಬೇಕು, ರಾಜ್ಯದ ಹಕ್ಕನ್ನು ಧೃಡವಾಗಿ ಪ್ರತಿಪಾದಿಸಬೇಕು.



50 ದಿನಗಳ ಇನ್ಸಾಫ್ ಯಾತ್ರೆಯ ಸಮಾರೋಪ ಕೋಲ್ಕತ್ತಾದಲ್ಲಿ ಲಕ್ಷಾಂತರ ಯುವಜನರ ಯುವ ಬ್ರಿಗೇಡ್ ರ್‍ಯಾಲಿ

ಮುಖ್ಯವಾಹಿನಿಯ ಮಾಧ್ಯಮಗಳ ಕಡೆಗಣನೆಯನ್ನು ಬದಿಗಿಟ್ಟು, ಡಿವೈಎಫ್‌ಐ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಜನವರಿ 7 ರಂದು ಕೋಲ್ಕತ್ತಾದಲ್ಲಿ ಆಯೋಜಿಸಿದ್ದ ಬ್ರಿಗೇಡ್ ಪರೇಡ್ ಗ್ರೌಂಡ್ ರ್‍ಯಾಲಿಯಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ್ದ ಸಹಸ್ರಾರು ವಿದ್ಯಾರ್ಥಿಗಳು ಮತ್ತು ಯುವಜನರ ಉಪಸ್ಥಿತಿಯೊಂದಿಗೆ ಅಸಾಧಾರಣ ಸಂಖ್ಯೆವನ್ನು ದಾಖಲಿಸಿತು. ರಾಜ್ಯದ ಎಲ್ಲಾ ಭಾಗಗಳಿಂದ ಬಂದಿದ್ದ ವಿದ್ಯಾರ್ಥಿ, ಯುವಜನರು ಕೋಲ್ಕತ್ತಾ ಪ್ರವೇಶಿಸಿ, ಅಲ್ಲಿಂದಲೇ ಮೆರವಣಿಗೆ ನಡೆಸಿದರು. ಮಧ್ಯಾಹ್ನದ ಹೊತ್ತಿಗೆ, ನಗರದ ವಿವಿಧ ಮೂಲೆಗಳಿಂದ ಮೆರವಣಿಗೆಗಳು ಒಟ್ಟುಗೂಡಿದವು ಮತ್ತು ವಿಶಾಲವಾದ ಮೈದಾನವು ಸ್ವಲ್ಪ ಸಮಯದಲ್ಲೇ ತುಂಬಿ ತುಳುಕಿತು. ಸಾವಿರಾರು ಯುವ ಡಿವೈಎಫ್‌ಐ ಬೆಂಬಲಿಗರು "ಹೋರಾಡುತ್ತೇವೆ, ಗೆಲ್ಲುತ್ತೇವೆ, ಡಿವೈಎಫ್‌ಐ ಜಿಂದಾಬಾದ್" ಎಂಬ ಘೋಷಣೆಗಳನ್ನು ಉತ್ಸಾಹದಿಂದ ಕೂಗಿದರು. ವೇದಿಕೆಯು ಡಿವೈಎಫ್‌ಐನ ಕೆಂಪು ನಕ್ಷತ್ರ-ಗುರುತಿಸಲಾದ ಬಿಳಿ ಧ್ವಜಗಳ ಶ್ರೇಣಿಯಿಂದ ಸುತ್ತುವರೆದಿರುವ ಗಣ್ಯರ ವೇದಿಕೆಯ ಹಿಂದೆ ಭಾರತೀಯ ರಾಷ್ಟ್ರಧ್ವಜದಿಂದ ಅಲಂಕರಿಸಲಾಗಿತ್ತು.

ನ್ಯಾಯಕ್ಕಾಗಿ ಧ್ವನಿ

ಬಂಗಾಳದಲ್ಲಿ ವಿಭಜಕ ರಾಜಕಾರಣಕ್ಕೆ ಅವಕಾಶ ಕೊಡುವುದಿಲ್ಲ ಎಂದು ಘೋಷಿಸಿದ ಡಿವೈಎಫ್‌ಐ ರಾಜ್ಯಾಧ್ಯಕ್ಷ ಧ್ರುಬಜ್ಯೋತಿ ಸಹಾ ಅವರು, "50 ದಿನಗಳ ಇನ್ಸಾಫ್ ಯಾತ್ರೆಯಲ್ಲಿ ನಾವು ಜನರ ಗುಳಿಬಿದ್ದ ಕಣ್ಣುಗಳಲ್ಲಿ ಅಸಹಾಯಕತೆ, ಅಪೌಷ್ಟಿಕತೆ, ಹಸಿವು ಮತ್ತು ಹತಾಶೆಯನ್ನು ನೋಡಿದ್ದೇವೆ. ಇದು ನಮಗೆ ಒಮ್ಮೆ ನಾವು ತಿಳಿದಿದ್ದ ಅದ್ಭುತ ಬಂಗಾಳವಲ್ಲ. ಇದು ಈಗ ಭ್ರಷ್ಟಾಚಾರ, ಅಪರಾಧೀಕರಣ ಮತ್ತು ಶೋಷಣೆಯ ಬಂಗಾಳವಾಗಿದೆ. ಕಳೆದು ಹೋದ ನಮ್ಮ ರಾಜ್ಯದ ಪ್ರತಿಷ್ಠೆಯನ್ನು ಮರಳಿ ಪಡೆಯಬೇಕು. ತಾಯಂದಿರು ತೋಟಗಳಿಗೆ ಕೆಲಸಕ್ಕೆ ಹೋಗುವಾಗ, ಚಹಾ ತೋಟದ ಕಾರ್ಮಿಕರ ಮಕ್ಕಳು ಉಸಿರುಗಟ್ಟಿಸುವ ಪಂಜರದಂತಹ ಕೋಣೆಯಲ್ಲಿ ಹೇಗೆ ಕಾಲ ಕಳೆಯುತ್ತಾರೆ ಎಂಬುದನ್ನು ನಾವು ಬೆಟ್ಟ ಪ್ರದೇಶಗಳಲ್ಲಿ ನೋಡಿದ್ದೇವೆ. ನಿಯಮಿತ ಪಡಿತರ ಲಭ್ಯವಿಲ್ಲ. ಅನೇಕರು ತಮ್ಮ ಹಕ್ಕಿನ ಆವಾಸ್ ಯೋಜನೆ ಮನೆಗಳಿಂದ ವಂಚಿತರಾಗಿದ್ದಾರೆ. ಅವರಿಗೆ ಪಟ್ಟಾ (ಭೂಮಿ ಹಕ್ಕು) ನೀಡಿಲ್ಲ. ಈ ದುಡಿಯುವ ಜನರು ವರ್ಣನಾತೀತ ಜೀವನ ಪರಿಸ್ಥಿತಿಗಳಲ್ಲಿ ನರಳುತಿದ್ದಾರೆ" ಎಂದು ತಾವು ಇನ್ಸಾಫಾ ಯಾತ್ರೆಯಲ್ಲಿ ಕಂಡ ನೋವಿನ ಕ್ಷಣಗಳನ್ನು ಜನಸ್ತೋಮದ ಎದುರು ಹಂಚಿಕೊಂಡರು.

ಈ ಬೃಹತ್ ರ್‍ಯಾಲಿಯು 50 ದಿನಗಳ ಇನ್ಸಾಫ್ ಯಾತ್ರೆಯ ಪರಾಕಾಷ್ಠೆಯ ಘಟನೆಯಾಗಿದ್ದು, ಅದು ಕೂಚ್ ಬೆಹಾರ್‌ನಿಂದ ಕೋಲ್ಕತ್ತಾದವರೆಗೆ 2910 ಕಿ.ಮೀ. ದೂರದಿಂದ ಯುವಜನರು ಬಂದಿದ್ದರು. ಡಿವೈಎಫ್‌ಐ ಮುಖಂಡರು ರ್‍ಯಾಲಿ ವೇದಿಕೆಯಿಂದ ಮಾತನಾಡುತ್ತ, "ಎಡಪಕ್ಷಗಳು ರಾಜ್ಯದ ರಾಜಕೀಯವನ್ನು ಸ್ವಾಧೀನಪಡಿಸಿಕೊಳ್ಳಲಿವೆ, ಬಂಗಾಳದ ಭವಿಷ್ಯವನ್ನು ಲೂಟಿ ಮಾಡಲು ನಾವು ಬಿಡುವುದಿಲ್ಲ, ಬಂಗಾಳವನ್ನು ಉಳಿಸಲು ನಾವು ಕೊನೆಯವರೆಗೂ ಹೋರಾಡುತ್ತೇವೆ, ಪಶ್ಚಿಮ ಬಂಗಾಳದಲ್ಲಿ ಮತ್ತೆ 'ಎಡಪಂಥೀಯ ಪುನರುಜ್ಜೀವನ ಮತ್ತು ಪುನರುತ್ಥಾನ' ಇರುತ್ತದೆ" ಎಂದು ತುಂಬು ವಿಶ್ವಾಸದಿಂದ ಘೋಷಿಸಿದರು. ಈ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಡಿವೈಎಫ್‌ಐ ವತಿಯಿಂದ "ಡೈರಿ ಆಫ್ ಇನ್ಸಾಫ್ ಯಾತ್ರೆ" ಎಂಬ ಪುಸ್ತಕವನ್ನು ಪ್ರಕಟಿಸಲಾಯಿತು. ಇದಲ್ಲದೇ 50 ದಿನಗಳ ಕಾಲ ನಡೆದ ಪಾದಯಾತ್ರೆಯಲ್ಲಿ ಆರಂಭದಿಂದ ಅಂತ್ಯದವರೆಗೆ ಇದ್ದ ಪಾದಯಾತ್ರೆಯನ್ನು ಸನ್ಮಾನಿಸಲಾಯಿತು. ಇದೇ ವೇಳೆ ಹುತಾತ್ಮರಾದ ಯುವಜನರ ಕುಟುಂಬಸ್ಥರನ್ನು ಸನ್ಮಾನಿಸಲಾಯಿತು.



ಕೆಳಜಾತಿಗಳಿಗೆ ಅಕ್ಷರ ಕಲಿಸುವುದು ಧರ್ಮವಿರೋಧಿ ಎಂದು ಮೇಲ್ಜಾತಿಗಳು ವ್ಯಾಪಾರಿ ಗೋವಿಂದರಾವ್ ಜತೆ ಜಗಳ ತೆಗೆದಿದ್ದಾರೆ. ಇದರಿಂದಾಗಿ ಮಗ ಜ್ಯೋತಿಬಾ ಸೊಸೆ ಸಾವಿತ್ರಿಬಾಯಿ ಅವರು ಅಕ್ಷರ ಕಲಿಸುವುದನ್ನು ನಿಲ್ಲಿಸದ್ದಕ್ಕೆ ಉಟ್ಟ ಬಟ್ಟೆಯಲ್ಲಿಯೇ ಮನೆಯಿಂದ ಹೊರಹಾಕುತ್ತಾರೆ. ಗೋವಿಂದರಾವ್ ತಂಗಿ ಸುಗುಣಬಾಯಿ ಪರ್ಷಿಯನ್ ಶಿಕ್ಷಕ ಮುನ್ಷಿ ಗಫರ್ ಖಾನ್ ಅವರ ಬಳಿ ವಿಷಯ ತಿಳಿಸುತ್ತಾರೆ. ಗಫರ್ ಖಾನ್ ಫುಲೆ ದಂಪತಿಗಳನ್ನು ಉಸ್ಮಾನ್ ಶೇಕ್ ಅವರ ಮನೆಗೆ ಕರೆದೊಯ್ಯುತ್ತಾರೆ. ನಡೆದ ಘಟನೆಯನ್ನು ವಿವರಿಸುತ್ತಾರೆ. ಉಸ್ಮಾನ್ ಶೇಕ್ ತನ್ನ ಮನೆಯ ಎರಡು ಕೋಣೆಗಳನ್ನು ಬಿಟ್ಟುಕೊಡುತ್ತಾರೆ. ಮನೆಯ ಒಳಗಿಂದ ಒಂದು ಹುಡುಗಿ ಬಂದು ಸಾವಿತ್ರಿಬಾಯಿಯನ್ನು ಪರಿಚಯ ಮಾಡಿಕೊಳ್ಳುತ್ತಾಳೆ. ಆ ಹುಡುಗಿಯೇ ಉಸ್ಮಾನ್ ಶೇಕ್ ಅವರ ತಂಗಿ ಫಾತಿಮಾ ಶೇಕ್.

ಫಾತೀಮಾ ಶೇಖ್: ಆಧುನಿಕ ಭಾರತದ ಮೊದಲ ಮುಸ್ಲಿಂ ಶಿಕ್ಷಕಿ

ಅರುಣ್ ಜೋಳದಕೂಡ್ಲಿಗಿ

ಉಸ್ಮಾನ್ ಶೇಕ್ ಅವರ ಮನೆಯಲ್ಲಿ ಫುಲೆ ದಂಪತಿಗಳಿಂದ (1848) ಶಾಲೆಯೊಂದು ಆರಂಭವಾಗುತ್ತದೆ. ಇದೇ ಶಾಲೆಯಲ್ಲಿ ಸಾವಿತ್ರಿಬಾಯಿ ಮತ್ತು ಫಾತೀಮಾ ಶಿಕ್ಷಕಿಯರಾಗುತ್ತಾರೆ. ಆದರೆ ಸಾವಿತ್ರಿಬಾಯಿ ಅವರನ್ನು ಜನವರಿ 3 ರಂದು ದೇಶವ್ಯಾಪಿ ನೆನೆದು, ಫುಲೆ ದಂಪತಿಗಳ ಅಕ್ಷರಕ್ರಾಂತಿಯ ಭಾಗವಾಗಿದ್ದ ಫಾತೀಮಾ ಶೇಕ್ ಹುಟ್ಟಿದ ಜನವರಿ 9 ನ್ನು ಚಾರಿತ್ರಿಕವಾಗಿ ನೆನೆಯುವುದಿಲ್ಲ.

ಹಾಗೆ ನೋಡಿದರೆ, ಫುಲೆ ದಂಪತಿಗಳ ಜತೆ ಮುನ್ಷಿ ಗಫರ್ ಖಾನ್, ಸುಗುಣಬಾಯಿ, ಉಸ್ಮಾನ್ ಶೇಖ್ ಮತ್ತು ಫಾತೀಮಾ ಶೇಖ್ ಆಧುನಿಕ ಭಾರತದಲ್ಲಿ ದಮನಿತರಿಗೆ ಅಕ್ಷರದ ಬೆಳಕು ಬೀರಲು ಸಾಲುದೀಪದಂತೆ ಉರಿದವರು. ಹಾಗಾಗಿ ಈ ಕಾರ್ಯಾಚರಣೆಯ ಭಾಗವಾದ ಎಲ್ಲರನ್ನೂ ನೆನೆಯಬೇಕಿದೆ. ಈ ಶಿಕ್ಷಣ ಕ್ರಾಂತಿಗೆ 'ದಲಿತ-ದಮನಿತ-ಮಹಿಳೆ-ಮುಸ್ಲಿಂ' ಸಂಯುಕ್ತ ಅರಿವಿನ ಹೋರಾಟದ ಒಂದು ದೊಡ್ಡ ಮಾದರಿಯನ್ನು ಈ ಮೂಲಕ ತೋರಿಸಿದ್ದಾರೆ.

ಸೂಸಿ ತಾರು ಮತ್ತು ಲಲಿತ ಕೆ ಅವರು 1991 ರಲ್ಲಿ ಸಂಪಾದಿಸಿದ 'ವುಮನ್ ರೈಟಿಂಗ್ ಇನ್ ಇಂಡಿಯಾ' ಮೊದಲ ಸಂಪುಟದಲ್ಲಿ ಸಾವಿತ್ರಿಬಾಯಿ 1856 ರಲ್ಲಿ ಬರೆದ ಪತ್ರವೊಂದು ಪ್ರಕಟವಾಗುತ್ತದೆ. ಈ ಪತ್ರದಲ್ಲಿ ಫಾತೀಮಾ ಶೇಕ್ ಅವರ ಉಲ್ಲೇಖ ಗಮನ ಸೆಳೆಯುತ್ತದೆ. ನಂತರ ಫಾತೀಮಾಳ ಬಗ್ಗೆ ಕುತೂಹಲ ಮೂಡುತ್ತದೆ. 1831 ರ ಜನವರಿ 9 ರಂದು ಫಾತೀಮಾ ಶೇಕ್ ಪುಣೆಯಲ್ಲಿ ಜನಿಸುತ್ತಾಳೆ. ಅಣ್ಣ ಉಸ್ಮಾನ್ ಶೇಕ್ ಜತೆ ಪುಣೆಯ ಭಿಡೆವಾಡೆಯಲ್ಲಿ ಬೆಳೆಯುತ್ತಾಳೆ. ಉಸ್ಮಾನ್ ತಂಗಿಗೆ ಉರ್ದು ಶಿಕ್ಷಣ ಕೊಡಿಸುತ್ತಾರೆ. ಮುಸ್ಲೀಮರ ವಿರೋಧದ ನಡುವೆಯೂ ಫಾತಿಮಾಗೆ ಮರಾಠಿ ಶಿಕ್ಷಣ ಕೊಡಿಸುತ್ತಾರೆ. ಹಾಗಾಗಿ ಮರಾಠಿ ಕಲಿತ ಮೊದಲ ಮುಸ್ಲಿಂ ಮಹಿಳೆ.



ಅಮೇರಿಕನ್ ಮಿಷನರಿ ಸಿಂಥಿಯಾ ಫರಾರ್ ನಡೆಸುತ್ತಿದ್ದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಸಾವಿತ್ರಿಬಾಯಿ ಮತ್ತು ಫಾತೀಮಾ ತರಬೇತಿ ಪಡೆಯುತ್ತಾರೆ. ಸಾವಿತ್ರಿಬಾಯಿ ಶಾಲೆಗಳಲ್ಲಿ ಕಲಿಸುತ್ತಿದ್ದರೆ ಫಾತೀಮಾ ಮನೆ ಮನೆಗೆ ತೆರಳಿ ಶಿಕ್ಷಣದ ಮಹತ್ವವನ್ನು ತಿಳಿಸಿ ಮಕ್ಕಳನ್ನು ಶಾಲೆಗೆ ಕರೆತರುತ್ತಿದ್ದಳು. ಮುಸ್ಲಿಂ ಬಾಲಕಿಯರನ್ನು ಶಾಲೆಗೆ ಪ್ರೇರೇಪಿಸಿದ್ದಕ್ಕೆ ಮುಸ್ಲೀಂ ಗಂಡಸರಿಂದ ಕಷ್ಟಗಳನ್ನು ಎದುರಿಸುತ್ತಾರೆ. ಮುಂದೆ ಮಹಿಳೆಯರಿಗಾಗಿ ಫುಲೆ ದಂಪತಿಗಳು ಆರಂಭಿಸಿದ ಹದಿನೆಂಟು ಶಾಲೆಗಳ ವ್ಯವಹಾರವನ್ನು ನಿರ್ವಹಿಸುತ್ತಾರೆ. ಮುಂಬೈನಲ್ಲಿ 1851 ರಲ್ಲಿ ಫಾತೀಮಾ ಸ್ವತಃ ಹುಡುಗಿಯರಿಗಾಗಿ ಎರಡು ಶಾಲೆಗಳನ್ನು ತೆರೆದರು. ಫುಲೆ ದಂಪತಿಗಳಂತೆ ಫಾತೀಮಾ ಸಾಹಿತ್ಯ ರಚಿಸದಿದ್ದ ಕಾರಣ ಬಹುಕಾಲ ತೆರೆಮರೆಯಲ್ಲೇ ಉಳಿದರು.

ಅಂಬೇಡ್ಕರ್ 1946 ರಲ್ಲಿ 'ಶೂದ್ರರು ಯಾರಾಗಿದ್ದರು?' ಕೃತಿಯನ್ನು ಜೋತಿಬಾ ಫುಲೆ ಅವರಿಗೆ ಅರ್ಪಿಸಿ, ಅವರು ನನ್ನ ಗುರು ಎನ್ನುತ್ತಾರೆ. ಹೀಗಾಗಿ ಅಂಬೇಡ್ಕರ್ ಕುರಿತ ಅಧ್ಯಯನದ ಜತೆಜತೆಗೆ ದಲಿತ-ಬಹುಜನ ಪಕ್ಷವು ಜ್ಯೋತಿಬಾ ಮತ್ತು ಸಾವಿತ್ರಿಬಾಯಿ ಅವರನ್ನು ಮುನ್ನಲೆಗೆ ತಂದಿತು. ಭಾರತದಲ್ಲಿ ಮುಸ್ಲಿಂ ಚಿಂತಕರು ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣರಾದ ಸರ್ ಸೈಯದ್ ಅಹ್ಮದ್ ಖಾನ್ ಮೂಲಕ ಆಧುನಿಕ ಭಾರತದ ಮುಸ್ಲಿಂ ಶಿಕ್ಷಣವನ್ನು ಗುರುತಿಸುತ್ತಾರೆ. ವಿರ್ಯಾಸವೆಂದರೆ, 1848 ರಲ್ಲಿಯೇ ಶಿಕ್ಷಕಿಯಾಗಿ ಅಕ್ಷರದ ಬೆಳಕಿಂಡಿ ತೆರೆದ ಫಾತೀಮಾ ಶೇಕ್ ಬಗ್ಗೆ ಮುಸ್ಲಿಂ ಚಿಂತಕರು ಚರಿತ್ರೆಯಲ್ಲಿ ಗುರುತಿಸುವುದಿಲ್ಲ.

ಫಾತೀಮಾ ಶೇಕ್ ಅವರ ಪರಿಚಯವನ್ನು 2016 ರಲ್ಲಿ ಮಹಾರಾಷ್ಟ್ರದ ಬಾಲಭಾರತಿಯ ಉರ್ದು ಪಠ್ಯದಲ್ಲಿಯೂ, 2022 ರಲ್ಲಿ ಆಂಧ್ರದ 8 ನೇ ತರಗತಿಯ ಪಠ್ಯದಲ್ಲಿಯೂ ಸೇರಿಸಲಾಗಿದೆ. 2022 ರಲ್ಲಿ ಫಾತೀಮಾಳ 191 ನೇ ಜನ್ಮದಿನಾಚರಣೆಗೆ ಗೂಗಲ್ ಡೂಡಲ್ ಮೂಲಕ ಗೌರವಿಸಿ ಗಮನಸೆಳೆಯಿತು. ಸೈಯದ್ ನಸೀರ್ ಅಹಮದ್ ಅವರು ತೆಲುಗಿನಲ್ಲಿ ಬರೆದ ಫಾತೀಮಾ ಶೇಕ್ ಜೀವನ ಚರಿತ್ರೆಯ ಕೃತಿಯನ್ನು ಲೇಖಕ ಕಾ.ಹು. ಚಾನ್ ಪಾಷ ಅವರು ಕನ್ನಡಕ್ಕೂ ತಂದಿದ್ದಾರೆ. ಭಾರತದ ಚರಿತ್ರೆಯಲ್ಲಿ ಮರೆಯಾಗಿರುವ ಫಾತೀಮಾ ಶೇಕ್ ಅವರನ್ನು ಇನ್ನಾದರೂ ನೆನೆಯೋಣ. ●

ಗುಜರಾತ್ ಸರಕಾರದ ಕ್ಷಮಾದಾನವನ್ನು ರದ್ದುಗೊಳಿಸಿದ ಸ್ವಾಗತಾರ್ಹ ತೀರ್ಪು

"ಗುಜರಾತ್ ಸರಕಾರದೊಂದಿಗೆ ಕೇಂದ್ರ ಸರ್ಕಾರ ಕೂಡ ಈ 'ಅಪರಾಧಿಗಳ ಜತೆಗೆ ಶಾಮೀಲಿ'ನಲ್ಲಿ ಶಾಮೀಲಾಗಿದೆ"

2002 ರ ಗುಜರಾತ್ ಕೋಮು ಹತ್ಯಾಕಾಂಡದಲ್ಲಿ ಗರ್ಭಿಣಿ ಬಿಲ್ಕಿಸ್ ಬಾನೊ ಮತ್ತು ಆಕೆಯ ಕುಟುಂಬದ ಸದಸ್ಯರ ಸಾಮೂಹಿಕ ಅತ್ಯಾಚಾರದ ಹಾಗೂ ಅವರಲ್ಲಿ ಕನಿಷ್ಠ 14 ಜನರ ಸಾಮೂಹಿಕ ಹತ್ಯೆಯ ಆರೋಪಗಳ ಮೇಲೆ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಹನ್ನೊಂದು ಅಪರಾಧಿಗಳಿಗೆ ಗುಜರಾತ್ ಸರ್ಕಾರದ ಕ್ಷಮಾದಾನ ಕಾನೂನುಬಾಹಿರ ಕ್ರಮ ಎಂದು ರದ್ದುಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸ್ವಾಗತಿಸಿದೆ. ಶಿಕ್ಷೆಗೆ ಗುರಿಯಾದವರು ಎರಡು ವಾರಗಳಲ್ಲಿ ಶರಣಾಗಿ ಮತ್ತೆ ಜೈಲಿಗೆ ಬರಬೇಕು ಎಂದು ನ್ಯಾಯಾಲಯವು ಸ್ಪಷ್ಟವಾಗಿ ಹೇಳಿದೆ.

ಸುಪ್ರಿಂ ಕೋರ್ಟ್ ವಿಭಾಗೀಯ ಪೀಠವು, ಗುಜರಾತ್ ಸರ್ಕಾರ ಕ್ಷಮಾದಾನದ ಆದೇಶವನ್ನು ನೀಡಲು ತನ್ನ 'ಅಧಿಕಾರಕ್ಷೇತ್ರ' ವನ್ನು ಮೀರಿ ಹೋಗಿ, ವಾಸ್ತವವಾಗಿ ಅಪರಾಧಿಗಳೊಂದಿಗೆ 'ಶಾಮೀಲಾಗಿ' ಈ ಕೃತ್ಯ ಮಾಡಿದೆ ಎಂದು ಹೇಳಿದೆ. ಕ್ಷಮಾದಾನ ಆದೇಶವನ್ನು ಸಮರ್ಥಿಸಿಕೊಳ್ಳಲು ಗುಜರಾತ್ ಸರ್ಕಾರ ವಾಸ್ತವಾಂಶವನ್ನು ಪ್ರಸ್ತುತಪಡಿಸುವಲ್ಲಿ ವಂಚನೆ ಮಾಡಿದೆ ಎಂದೂ ಪೀಠವು ಹೇಳಿದೆ. ಶಿಕ್ಷೆಗೆ ಗುರಿಯಾದವರು "ತಮ್ಮ ಶಿಕ್ಷೆಯ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾದರೆ, ಸಮಾಜದಲ್ಲಿ ಶಾಂತಿ ಮತ್ತು ನೆಮ್ಮದಿಯು ಒಂದು ಭೀಕರ ದುಸ್ವಪ್ನದ ಮಟ್ಟಕ್ಕೆ ಇಳಿಯುತ್ತದೆ" ಎಂದು ಈ ತೀರ್ಪು ಕಟುವಾಗಿ ಹೇಳಿದೆ. ಈ ನಿರ್ಧಾರವು ಕೇಂದ್ರ ಸರ್ಕಾರದ ಸಮ್ಮತಿಯನ್ನು ಆಧರಿಸಿದೆ ಎಂದು ಗುಜರಾತ್ ಸರ್ಕಾರವು ಒದಗಿಸಿರುವ ಮಾಹಿತಿಯು ಕೇಂದ್ರ ಸರ್ಕಾರ ಕೂಡ ಈ 'ಅಪರಾಧಿಗಳ ಜತೆಗೆ ಶಾಮೀಲಿ'ನಲ್ಲಿ ಶಾಮೀಲಾಗಿದೆ ಎಂಬುದನ್ನು ತೋರಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ, ಕ್ಷಮಾದಾನವು ಅಪರಾಧದ ಕ್ರೌರ್ಯ ಮತ್ತು ಸಮಾಜ ಹಾಗೂ ಕಾನೂನಿನ ಆಳ್ವಿಕೆಯ ಮೇಲೆ ಅದರ ಒಟ್ಟಾರೆ ಪರಿಣಾಮವನ್ನು ಗಮನಕ್ಕೆ ತಗೊಳ್ಳಲಿಲ್ಲ ಎಂಬುದು ಸ್ಪಷ್ಟವಾಗಿದೆ ಎಂದಿದೆ.

ಸರ್ಕಾರಗಳು ಸಾಂವಿಧಾನಿಕ ಸಂಸ್ಥೆಗಳು, ಅವು ತಮ್ಮ ಅಧಿಕಾರವ್ಯಾಪ್ತಿಯನ್ನು ಮತ್ತು ಕಾನೂನಿನ ಪರಿಗಣನೆಗಳನ್ನು ಉಲ್ಲಂಘಿಸುವುದಾದರೆ, ಅದು ಪ್ರಜಾಪ್ರಭುತ್ವವಾಗಿ ನಮ್ಮ ಅಸ್ತಿತ್ವವನ್ನೇ ಹಾಳುಗೆಡವುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ●

'ಕ್ಷಮಾದಾನ ಯೋಗ್ಯವಾಗಿರಲಿಲ್ಲ, ಕ್ರಿಮಿನಲ್‌ಗಳೊಂದಿಗೆ ಗುಜರಾತ್ ಸರ್ಕಾರದ ಶಾಮೀಲು:' ಸುಪ್ರಿಂ ನಿರ್ಧಾರ ಸ್ವಾಗತಿಸಿದ ಜನವಾದಿ ಮಹಿಳಾ ಸಂಘಟನೆ

2002 ರ ಗುಜರಾತ್ ಗಲಭೆಯಲ್ಲಿ ಸಂಭವಿಸಿದ ಬಿಲ್ಕಿಸ್ ಬಾನೋ ಸಾಮೂಹಿಕ ಅತ್ಯಾಚಾರದ ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ಅವಕಾಶ ನೀಡುವ ಗುಜರಾತ್ ಸರ್ಕಾರದ ನಿರ್ಧಾರವನ್ನು ರದ್ದುಗೊಳಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಸ್ವಾಗತಿಸಿದೆ. 14 ವರ್ಷಗಳ ಜೈಲುವಾಸದ ನಂತರ ಗುಜರಾತ್ ಸರ್ಕಾರವು ಅಪರಾಧಿಗಳನ್ನು ಬಿಡುಗಡೆ ಮಾಡಿತ್ತು. ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು ಹನ್ನೊಂದು ಅಪರಾಧಿಗಳು ಎರಡು ವಾರಗಳಲ್ಲಿ ಮತ್ತೆ ಜೈಲಿಗೆ ಹೋಗಬೇಕು ಮತ್ತು ಜೈಲಿನಲ್ಲಿ ಮುಂದುವರೆಯಬೇಕು ಎಂದು ಹೇಳಿದೆ.

ಕಾನೂನಿನ ಪ್ರಕಾರ, ಗುಜರಾತ್ ಸರ್ಕಾರವು ಕ್ಷಮಾದಾನದ ಆದೇಶವನ್ನು ನೀಡುವ ಅಧಿಕಾರವನ್ನು ಹೊಂದಿಲ್ಲ ಎಂದು ನ್ಯಾಯಾಲಯವು ಹೇಳಿದೆ, ಏಕೆಂದರೆ ಸರ್ಕಾರವು ವಿಚಾರಣೆ ನಡೆದು ಶಿಕ್ಷೆಯನ್ನು ಘೋಷಿಸಿರುವುದು ಮಹಾರಾಷ್ಟ್ರದಲ್ಲಿ, ಅಲ್ಲಿಯ ಸರಕಾರವಷ್ಟೇ ಕ್ಷಮಾದಾನ ನೀಡಲು ಸಾಧ್ಯ.

ವಾಸ್ತವ ಸಂಗತಿಯನ್ನು ಬಚ್ಚಿಟ್ಟು ಸುಪ್ರೀಂ ಕೋರ್ಟ್‌ಗೆ ವಂಚನೆ ಎಸಗಿ 2022ರ ಮೇ ತಿಂಗಳಿನಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ತನಗೆ ಅನುಕೂಲವಾದ ಆದೇಶವನ್ನು ಪಡೆದು ಮತ್ತು ಅಂತಿಮವಾಗಿ ಎಲ್ಲಾ ಹನ್ನೊಂದು ಅಪರಾಧಿಗಳ ಬಿಡುಗಡೆಗೆ ಕಾರಣವಾಯಿತು ಎಂದು ಅಪರಾಧಿ ರಾಧೇಶ್ಯಾಮ್‌ನ್ನು ನ್ಯಾಯಾಲಯ ತೀವ್ರವಾಗಿ ಟೀಕಿಸಿತು. ಗುಜರಾತ್ ಹೈಕೋರ್ಟ್ ಅದಾಗಲೇ ಅವರ ಅರ್ಜಿಯನ್ನು ವಜಾಗೊಳಿಸಿತ್ತು. ಮತ್ತು ಮಹಾರಾಷ್ಟ್ರ ಸರ್ಕಾರ ಮಾತ್ರ ಪರಿಹಾರದ ಮನವಿಯನ್ನು ನಿರ್ಧರಿಸಬಹುದು ಎಂದು ಹೇಳಿತ್ತು. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದೆ, ಇದನ್ನೆಲ್ಲ ಬಚ್ಚಿಟ್ಟು ಕಲಮು 32 ರ ಅಡಿಯಲ್ಲಿ ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿಯಲ್ಲಿ ಸಲ್ಲಿಸಿದ್ದಾರೆ, ಈ ಮೂಲಕ ನ್ಯಾಯಾಲಯಕ್ಕೆ ವಂಚನೆ ಎಸಗಿದ್ದಾರೆ ಎಂದು ಸುಪ್ರಿಂ ಕೋರ್ಟ್ ತೀರ್ಪು ಗಮನಿಸಿದೆ.

ಗುಜರಾತ್ ಸರ್ಕಾರವೂ ಮೇ 2022 ರ ತೀರ್ಪಿನ ವಿರುದ್ಧ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸುವ ಬದಲು, ಅಪರಾಧಿಗಳೊಂದಿಗೆ ಶಾಮೀಲಾಗಿ, ಮಹಾರಾಷ್ಟ್ರ ಸರ್ಕಾರದ ಅಧಿಕಾರವನ್ನು ಕಸಿದುಕೊಂಡು ಮತ್ತು ಅಪರಾಧಿಗಳಿಗೆ ಕ್ಷಮಾದಾನ ನೀಡಿದೆ ಎಂದೂ ಸುಪ್ರಿಮ ಕೋರ್ಟ್ ಟೀಕಿಸಿದೆ.

ಗುಜರಾತ್ ಗಲಭೆಯ ಸಂದರ್ಭದಲ್ಲಿ ನಡೆದ ಸಾಮೂಹಿಕ ಅತ್ಯಾಚಾರದ ಈ ಹೇಯ ಪ್ರಕರಣದಲ್ಲಿ ಬಿಜೆಪಿ ಗುಜರಾತ್ ಸರ್ಕಾರವು ನೀಡಿದ ಆಕ್ರೋಶಕಾರಿ ಕ್ಷಮಾದಾನದ ವಿರುದ್ಧ ಹಲವಾರು ಅರ್ಜಿಗಳನ್ನು ಸಲ್ಲಿಸಲಾಯಿತು. ಸಾಮಾನ್ಯವಾಗಿ ಇಂತಹ ಘೋರ ಅಪರಾಧಗಳಲ್ಲಿ ಕ್ಷಮಾದಾನವನ್ನು ನೀಡುವುದಿಲ್ಲವಾದ್ದರಿಂದ, ಈ ಪ್ರಕರಣವು ಕ್ಷಮಾದಾನಕ್ಕೆ ಯೋಗ್ಯವಲ್ಲ ಎಂದು ಕಾನೂನು ಪಂಡಿತರು ಮತ್ತು ಇತರರ ಅಭಿಪ್ರಾಯವಾಗಿತ್ತು ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಆಶ್ಚರ್ಯವೆಂದರೆ ಅಪರಾಧಿಗಳು ತಮ್ಮ ಶಿಕ್ಷೆಯ ಸಮಯದಲ್ಲಿ ಪದೇ ಪದೇ ಪೆರೋಲ್ ಪಡೆದಿದ್ದರು, ಬಿಲ್ಕಿಸ್ ಬಾನೊ ಅವರು ಪೆರೋಲ್‌ನಲ್ಲಿ ಹೊರಬಂದಾಗಲೆಲ್ಲ ಅಪರಾಧಿಗಳಿಂದ ತನಗೆ ಹೇಗೆ ಜೀವ ಬೆದರಿಕೆ ಹಾಕಲಾಯಿತು ಎಂದು ತಿಳಿಸಿದ್ದರು ಕೂಡ ಎಂದೂ ನೆನಪಿಸಿದೆ. ●

ಬಿಎಸ್‌ಎನ್‌ಎಲ್‌ಇಯು ಹಿರಿಯ ಮುಖಂಡ ಜಿ.ಜಿ. ಪಾಟೀಲ ನಿಧನ: ಭಾವಪೂರ್ಣ ಶ್ರದ್ಧಾಂಜಲಿ

ಬಿಎಸ್ಎನ್ಎಲ್ಇಯು ಕರ್ನಾಟಕ ವಲಯದ ಹಿರಿಯ ಮುಖಂಡರಾಗಿದ್ದ ಹುಬ್ಬಳ್ಳಿಯ ಸಂಗಾತಿ ಜಿ.ಜಿ. ಪಾಟೀಲ (80) 2023 ಡಿಸೆಂಬರ್ 30 ರಂದು ನಿಧನರಾದರು. ಮೆದುಳು ಹೊಡೆತಕ್ಕೀಡಾಗಿ ಹುಬ್ಬಳ್ಳಿಯಲ್ಲಿ ಚಿಕಿತ್ಸೆ ಪಡೆದಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಟೋ ಆಸ್ಪತ್ರೆಗೆ ದಾಖಲಾಗಿದ್ದರು. ಮತ್ತೆ ಮೆದುಳಿನ ತೀವ್ರ ರಕ್ತಸ್ರಾವವಾಗಿ ಮಿದುಳಿನ ಶಸ್ತ್ರ ಚಿಕಿತ್ಸೆ ಫಲಿಸದೇ ಅವರು ಕೊನೆಯುಸಿರೆಳೆದರು.



ಜಿ.ಜಿ. ಪಾಟೀಲರು ಡಿಓಟಿ ಕಾಲದಿಂದಲೂ ಎನ್‌ಎಫ್‌ಟಿಇಯ ಇ-3ಮತ್ತುಇ-4 ಸಂಘಟನೆಯ ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳ ಜಿಲ್ಲಾ ಕಾರ್ಯದರ್ಶಿಯಾಗಿದ್ದ ಅವರು ಹಿರಿಯ ಸಂಗಾತಿ ಎಂ. ಸದಾನಂದ್ ಅವರೊಟ್ಟಿಗೆ ಇ.3 ನಂಬೂದರಿ ಸಂಘಟನೆಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಅವರು ಬಿಎಸ್‌ಎನ್‌ಎಲ್‌ಇಯು ಸಂಘಟನೆಯ ಪ್ರಾರಂಭಿಕ ವರುಷಗಳಲ್ಲಿ ವಲಯ ಖಜಾಂಚಿಯಾಗಿ, ಎಐಬಿಡಿಪಿಎ ಸಂಘಟನೆಯ ವಲಯ ಕಾರ್ಯದರ್ಶಿಯಾಗಿ, ಅಖಿಲ ಭಾರತ ಸಹಾಯಕ ಕಾರ್ಯದರ್ಶಿಯಾಗಿ ಸಂಘಟನೆ ಮತ್ತು ಚಳುವಳಿಗಳಲ್ಲಿ ತಮ್ಮನ್ನು ಸಕ್ರಿಯವಾಗಿ ಗುರುತಿಸಿಕೊಂಡವರು.

ಅವರ ಸಂಘಟನಾತ್ಮಕ ಶಿಸ್ತು, ಅವಶ್ಯಕತೆ ಬಿದ್ದಾಗ ತೆಗೆದುಕೊಳ್ಳುತ್ತಿದ್ದ ಬಿಗಿಯಾದ ನಿಲುವು ಮತ್ತು ತೀರ್ಮಾನಗಳು ಹಾಗೂ ನಿರಂತರ ಸಂಘಟನಾ ಪ್ರವಾಸ, ಕ್ರಿಯಾಶೀಲತೆ, ಅನುಭವ ಸಂಘಟನೆಯನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖವಾಗಿದ್ದರು. ಹಲವು ಹೋರಾಟಗಳನ್ನು ಹಾಗೂ ಸಮ್ಮೇಳನಗಳನ್ನು ಸಂಘಟಿಸುವಲ್ಲಿ ಹಾಗೂ ನಿವೃತ್ತಿ ನಂತರ ನಿವೃತ್ತ ನೌಕರರ ಸಂಘಟನೆ ಕಟ್ಟುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದರು.

ಕಾರ್ಮಿಕ ಸಂಘಟನೆಗೆ ತಮ್ಮ ಜೀವಿತಾವಧಿಯನ್ನು ಮುಡಪಾಗಿಟ್ಟಿದ್ದ ನಮ್ಮನ್ನಗಲಿದ ಸಂಗಾತಿ ಜಿ.ಜಿ. ಪಾಟೀಲ ಅವರಿಗೆ ಬಿಎಸ್‌ಎನ್‌ಎಲ್‌ಇಯು ಹಾಗೂ ಸಿಐಟಿಯು ಸಂಘಟನೆಗಳು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿವೆ.



ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ 3ನೇ ರಾಜ್ಯ ಸಮ್ಮೇಳನ

ಅಂಗವಿಕಲರಿಗೆ ಹಕ್ಕುಗಳಿಗಾಗಿ ಸಂವಿಧಾನದ ತಿದ್ದುಪಡಿ ಬೇಕು–ನಂಬುರಾಜನ್

ಸಂವಿಧಾನದ 14ನೇ ವಿಧಿಯ ಸಮಾನತೆಯ ಹಕ್ಕಿನಲ್ಲಿ ನೇರವಾಗಿ ಅಂಗವಿಕಲರ ಪ್ರಸ್ತಾಪವಿಲ್ಲ. 15ನೇ ವಿಧಿಯಲ್ಲಿ ಕೂಡ ತಾರತಮ್ಯದ ವಿರುದ್ಧದ ಮೂಲಭೂತ ಹಕ್ಕಿನಲ್ಲೂ ಅಂಗವಿಕಲರನ್ನು ಸೇರ್ಪಡೆ ಮಾಡಿಲ್ಲ. ಸಂವಿಧಾನ ತಿದ್ದುಪಡಿಯಾದರೆ ಮಾತ್ರ ಅಂಗವಿಕಲರಿಗೆ ಹಕ್ಕುಗಳು ದೊರೆಯಲು ಸಾಧ್ಯ. 2019ರ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷ ಸಂವಿಧಾನ ತಿದ್ದುಪಡಿಯ ಭರವಸೆ ನೀಡಿತ್ತು. ಆದರೆ ಆಗ ಕಾಂಗ್ರೆಸ್ ಅಧಿಕಾರಕ್ಕೆ ಬರಲಿಲ್ಲ. ಮುಂದೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಂವಿಧಾನ ತಿದ್ದುಪಡಿಯ ಮೂಲಕ ಅಂಗವಿಕಲರಿಗೆ ಮೂಲಭೂತ ಹಕ್ಕು ದೊರೆಯುವಂತೆ ಮಾಡಬೇಕು ಎಂದು ಅಂಗವಿಕಲರ ಹಕ್ಕುಗಳ ರಾಷ್ಟ್ರೀಯ ವೇದಿಕೆ ಕಾರ್ಯಾಧ್ಯಕ್ಷ ನಂಬುರಾಜನ್ ಒತ್ತಾಯಿಸಿದ್ದಾರೆ. ಅವರು ಮಂಡ್ಯದಲ್ಲಿ ಜನವರಿ 7ರಂದು ನಡೆದ ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ 3ನೇ ರಾಜ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಶೇ. 40ರಷ್ಟು ಅಂಗವಿಕಲತೆ ಹೊಂದಿದವರಿಗೆ ಮಾಸಿಕ ರೂ. 3,000 ಹಾಗೂ ಶೇ. 75 ಮೀರಿ ಅಂಗವೈಕಲ್ಯವುಳ್ಳವರಿಗೆ ರೂ. 5,000 ನೀಡಬೇಕು, ಶಾಸಕರು, ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ವರ್ಷಕ್ಕೆ ರೂ. 20 ಲಕ್ಷ ಹಣವನ್ನು ಅಂಗವಿಕಲರ ಸಾಧನ, ಸಲಕರಣೆಗಳಿಗೆ ನೀಡಬೇಕು, ಸರ್ಕಾರದ ಎಲ್ಲಾ ಇಲಾಖೆಗಳ ಯೋಜನೆಗಳಲ್ಲಿ ಅಂಗವಿಕಲರಿಗೆ ಮೀಸಲಾತಿ ದೊರೆಯಬೇಕು, ಕೋರ್ಟ್ ನಿರ್ದೇಶನದಂತೆ 'ಅಂತ್ಯೋದಯ ಅನ್ನ ಯೋಜನೆ' ಪಡಿತರ ಚೀಟಿ ನೀಡಬೇಕು, ಕೇಂದ್ರ ಸರ್ಕಾರ ಅಂಗವಿಕಲರ ಹಕ್ಕುಗಳ ಕಾಯಿದೆ–2016 ಜಾರಿಗೆ ಅಗತ್ಯವಾದ ಬಜೆಟ್ ಅನುದಾನ ಮೀಸಲಿಡಬೇಕು ಎಂಬುದೂ ಸೇರಿದಂತೆ 8 ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಅಧ್ಯಕ್ಷರಾಗಿ ಜಿ.ಎನ್.ನಾಗರಾಜ್ ಪುನರಾಯ್ಕೆ

ಒಕ್ಕೂಟದ ಅಧ್ಯಕ್ಷರಾಗಿ ಜಿ.ಎನ್. ನಾಗರಾಜ್ ಅವರು ಪುನರಾಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಬಳ್ಳಾರಿಯ ರಂಗಪ್ಪ ದಾಸರ್, ಉಪಾಧ್ಯಕ್ಷರಾಗಿ ಉಡುಪಿಯ ವೆಂಕಟೇಶ್ ಕೋಣಿ, ಮಂಜುನಾಥ್ ಹೆಬ್ಬಾರ್, ರಾಯಚೂರಿನ ಕರಿಯಪ್ಪ ಅಚ್ಚೊಳ್ಳಿ, ಯಾದಗಿರಿಯ ಸಿದ್ದಪ್ಪ ಹಿರೇಮಠ, ಕಾರ್ಯದರ್ಶಿಗಳಾಗಿ ಮಂಡ್ಯದ ದೊಡ್ಡ ಮರಿಗೌಡ, ರಾಜ್ಯ ಕೇಂದ್ರದ ಎ. ರಾಜನ್, ವೆಂಕಟೇಶ್, ಯಶಸ್ವಿ, ಕೊಪ್ಪಳದ ಬಸವರಾಜ್ ಗೋನಾಳ್ ಆಯ್ಕೆಯಾಗಿದ್ದಾರೆ. ವಿವಿಧ ಜಿಲ್ಲೆಗಳನ್ನು ಒಳಗೊಂಡ 31 ಜನರ ರಾಜ್ಯ ಸಮಿತಿ ರಚಿಸಲಾಯಿತು.

ನಂಬುರಾಜನ್ ಅವರ ಭಾಷಣದ ಸಾರಾಂಶ ಇಲ್ಲಿದೆ

ಭಾರತದಲ್ಲಿ 2.68 ಕೋಟಿ ಅಂಗವಿಕಲರು

2011 ರ ಜನಗಣತಿಯ ಪ್ರಕಾರ ಭಾರತದಲ್ಲಿ 2.68 ಕೋಟಿ ಅಂಗವಿಕಲರಿದ್ದಾರೆ. ಈ ಸಮೀಕ್ಷೆಯನ್ನು ಅವೈಜ್ಞಾನಿಕವಾಗಿ ನಡೆಸಲಾಗಿದ್ದು ಗ್ರಾಮೀಣ ಪ್ರದೇಶದ, ಕುಗ್ರಾಮಗಳ, ಅತೀ ಹಿಂದುಳಿದ ಪ್ರದೇಶಗಳ ಅಂಗವಿಕಲರನ್ನು ಗಣನೆಗೆ ತೆಗೆದುಕೊಂಡಿಲ್ಲ. 2011 ರಲ್ಲಿ ಜನಗಣತಿ ನಡೆಸುವಾಗ ಇದ್ದ 1995 ರ ಅಂಗವಿಕಲ ವ್ಯಕ್ತಿಗಳ ಕಾಯ್ದೆಯನ್ನು ಅನುಸರಿಸಲಾಗಿದೆ. ಅದರಲ್ಲಿ ಕೇವಲ ಏಳು ವೈಕಲ್ಯಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿತ್ತು. ಈಗಿರುವ 2016 ರ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ ಪ್ರಕಾರ 21 ವೈಕಲ್ಯಗಳನ್ನು ನಮೂದಿಸಲಾಗಿದ್ದು ಅದರ ಆಧಾರದಲ್ಲಿ ಸಮೀಕ್ಷೆ ನಡೆಸಬೇಕಾಗಿದೆ. ಆದರೆ, ಸರ್ಕಾರ 2021 – 22 ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಮಾದರಿಯಲ್ಲಿ ಅಂಗವಿಕಲರ ಬಗೆಗಿನ ಮಾಹಿತಿ ಸಂಗ್ರಹದ ಕಾಲಂ ತೆಗೆಯುವ ಮೂಲಕ ಅಂಗವಿಕಲರ ನಿಜವಾದ ಸಂಖ್ಯೆಯನ್ನು ಮರೆಮಾಚುವ ಹುನ್ನಾರ ಮಾಡಿದೆ.



ಸರ್ಕಾರ ಸರಿಯಾಗಿ ಸಮೀಕ್ಷೆ ನಡೆಸಿದರೆ ಭಾರತದಲ್ಲಿ ಜಾಗತಿಕ ಸರಾಸರಿಗಿಂತ ಹೆಚ್ಚಿನ ಅಂಗವಿಕಲರಿದ್ದಾರೆ. ಆದರೆ ಸರ್ಕಾರಗಳು ಹೆಚ್ಚಿನ ಅನುದಾನ ಕೊಡಬೇಕಾಗುತ್ತದೆ ಎಂಬ ಭಯದಿಂದ ಅಂಕಿ ಅಂಶಗಳನ್ನು ಮರೆಮಾಚುತ್ತಿವೆ. ಇವತ್ತು ಒಂದು ಪ್ರಮಾಣಪತ್ರಕ್ಕೆ, ಒಂದು ಗುರುತಿನ ಕಾರ್ಡಿಗೆ ಅಂಗವಿಕಲರು ಪರದಾಡಬೇಕಾಗಿದೆ. ಕರ್ನಾಟಕದಲ್ಲಿ ಗುರುತಿನ ಕಾರ್ಡುಗಳನ್ನು ಬೇರೆ ರಾಜ್ಯಗಳಿಗಿಂತ ಹೆಚ್ಚು ವಿತರಿಸಲಾಗಿದೆ ಎಂಬುದು ಸತ್ಯವಾದರೂ, ಒಂದು ಕಾರ್ಡ್ ವಿತರಿಸಲು 60 ರೂಪಾಯಿ ಖರ್ಚು ಬೀಳುತ್ತದೆ. ಎಲ್ಲಾ ಅಂಗವಿಕಲರಿಗೆ ಕಾರ್ಡ್ ನೀಡಲು ಸಾವಿರಾರು ಕೋಟಿ ರೂಪಾಯಿ ಹಣ ಖರ್ಚು ಮಾಡಬೇಕಾಗುತ್ತದೆ. ಹಣ ಖರ್ಚು ಮಾಡಬೇಕಾಗುತ್ತದೆ ಎಂಬ ಕಾರಣದಿಂದ ಕಾರ್ಡುಗಳನ್ನೇ ಸರ್ಕಾರಗಳು ನಿರಾಕರಿಸುತ್ತಿವೆ.

ಹಲವರ ಅಂಗವೈಕಲ್ಯತೆಗೆ ಹಸಿವು ಕೂಡಾ ಕಾರಣ

ಹಸಿವು ಹಲವಾರು ಅಂಗವೈಕಲ್ಯವನ್ನು ಉಂಟುಮಾಡುತ್ತದೆ. ಕೇಂದ್ರ ಸರ್ಕಾರವೇ ಹೇಳುವಂತೆ ಮಕ್ಕಳು ಮತ್ತು ಮಹಿಳೆಯರಲ್ಲಿ ಶೇ. 68 ರಷ್ಟು ಅಪೌಷ್ಟಿಕತೆ ಇದೆ. ಇದರಿಂದಾಗಿ ಮಹಿಳೆಯರು ಮತ್ತು ಮಕ್ಕಳನ್ನು ವಿಪರೀತ ರಕ್ತಹೀನತೆ ಕಾಡುತ್ತಿದೆ. ನಮ್ಮ ಜನಸಂಖ್ಯೆಯ ಶೇ. 78 ಜನರಿಗೆ ಪೌಷ್ಟಿಕ ಆಹಾರ ಲಭ್ಯವಾಗುತ್ತಿಲ್ಲ. ಇದರಿಂದಾಗಿ ಅಂಗವಿಕಲತೆ ಹೆಚ್ಚುತ್ತದೆ. ಇದನ್ನು ಪರಿಹರಿಸಲು ಕೇಂದ್ರ ಸರ್ಕಾರ ಯಾವುದೇ ಮುತುವರ್ಜಿ ತೋರುತ್ತಿಲ್ಲ. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ವಿಶ್ವ ಹಸಿವಿನ ಸೂಚ್ಯಂಕ ಬಿಡುಗಡೆಯಾಯಿತು. ಅದರಲ್ಲಿ ಭಾರತದ ಸ್ಥಾನ 122 ದೇಶಗಳ ಪೈಕಿ 111 ನೇಯದು.

2013 ರ ಆಹಾರ ಸಂರಕ್ಷಣಾ ಕಾಯ್ದೆ ಪ್ರಕಾರ ಎಲ್ಲಾ ಅಂಗವಿಕಲರ ಕುಟುಂಬಗಳಿಗೆ ಸ್ವಯಂಚಾಲಿತವಾಗಿ ಅಂತ್ಯೋದಯ ಅನ್ನ ಯೋಜನೆಯ ಪಡಿತರ ಕಾರ್ಡುಗಳನ್ನು ನೀಡಿ, ಕಾರ್ಡೊಂದಕ್ಕೆ ಉಚಿತವಾಗಿ 35 ಕೆ.ಜಿ. ಆಹಾರ ಧಾನ್ಯ ನೀಡಬೇಕು. ಆದರೆ ಬಿಪಿಎಲ್ ಕಾರ್ಡ್ ಕೂಡಾ ನೀಡುತ್ತಿಲ್ಲ. ಒಂದು ಕಡೆ ಎಲ್ಲಾ ಅಂಗವಿಕಲರಿಗೆ ಅಂತ್ಯೋದಯ ಕಾರ್ಡ್ ನೀಡಬೇಕು ಎಂದು ಅಂಗವಿಕಲರ ಸಂಘಟನೆ ಒತ್ತಾಯಿಸುತ್ತಿದ್ದರೆ, ಕೇಂದ್ರ ಸರ್ಕಾರ ಪಡಿತರ ವ್ಯವಸ್ಥೆಯನ್ನು ನಾಶ ಮಾಡಲು ಹೊರಟಿದೆ.

ಉದ್ಯೋಗ ಖಾತರಿ ಯೋಜನೆಯಲ್ಲಿ ಅಂಗವಿಕಲರಿಗೆ ವಿಶೇಷ ವಿನಾಯಿತಿ ನೀಡಬೇಕು. ಅರ್ಧ ಕೆಲಸಕ್ಕೆ ಪೂರ್ತಿ ವೇತನ ನೀಡಬೇಕು ಮತ್ತು ಅಂಗವಿಕಲರ ಪ್ರತ್ಯೇಕ ಗುಂಪುಗಳನ್ನು ರಚಿಸಬೇಕು ಎಂದು ಕಾಯ್ದೆ ಹೇಳುತ್ತದೆ. ಆದರೆ ಉದ್ಯೋಗ ಖಾತರಿ ಯೋಜನೆಗೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 30 ರಷ್ಟು ಅನುದಾನ ಕಡಿತ ಮಾಡಲಾಗಿದೆ. ಮೋದಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಪಡಿತರ ವ್ಯವಸ್ಥೆ ಮತ್ತು ಉದ್ಯೋಗ ಖಾತರಿ ಯೋಜನೆಗಳನ್ನು ನಾಶಮಾಡುತ್ತಾರೆ.

ಗಾಲಿ ಕುರ್ಚಿಗೂ ತೆರಿಗೆ

ಒಂದೆಡೆ ತಮ್ಮ ಹಕ್ಕುಗಳಿಗೆ ಅಂಗವಿಕಲರು ಹೋರಾಟ ಮಾಡುತ್ತಿದ್ದರೆ, ಅಂಗವಿಕಲರು ಬಳಸುವ ಕನ್ನಡಕ, ಊರುಗೋಲು, ಗಾಲಿ ಕುರ್ಚಿ, ಶ್ರವಣ ಸಾಧನ ಎಲ್ಲದರ ಮೇಲೂ ಕೇಂದ್ರ ಸರ್ಕಾರ ಶೇ.18 ರಷ್ಟು ತೆರಿಗೆ ವಿಧಿಸುತ್ತಿದೆ. ಇವ್ಯಾವುದೂ ವಸ್ತುಗಳನ್ನು ಶೋಕಿಗೆ ಬಳಸುವ ವಸ್ತುಗಳಲ್ಲ, ಅವು ಅಂಗವಿಕಲರ ದೇಹದ ಭಾಗವೇ ಆಗಿವೆ. ಅಂದರೆ ಕೇಂದ್ರ ಸರ್ಕಾರ ಅಂಗವಿಕಲರ ದೇಹದ ಅಂಗಗಳ ಮೇಲೆ ತೆರಿಗೆ ವಿಧಿಸುವ ಕ್ರೂರ ಸರ್ಕಾರವಾಗಿದೆ. ಸುದೀರ್ಘ ಹೋರಾಟದ ನಂತರ ತೆರಿಗೆಯನ್ನು ಶೇ. 18 ರಿಂದ ಶೇ. 5 ಕ್ಕೆ ಇಳಿಸಲು ಸಾಧ್ಯವಾಗಿದೆ.

ಯುದ್ದಗಳು ಹೊಸ ಅಂಗವಿಕಲರನ್ನು ಸೃಷ್ಟಿಸುತ್ತಿವೆ

ಅಂಗವೈಕಲ್ಯಕ್ಕೆ ಹಲವು ಕಾರಣಗಳಿವೆ. ಜೈವಿಕ, ಆಕಸ್ಮಿಕ, ಸಾಮಾಜಿಕ, ಅಪೌಷ್ಟಿಕತೆ ಇವೆಲ್ಲವೂ ಅಂಗವೈಕಲ್ಯಕ್ಕೆ ಕಾರಣಗಳಾಗಿವೆ. ಆದರೆ ಇವೆಲ್ಲಕ್ಕಿಂತ ಭೀಕರವಾದುದು ಯುದ್ದ. ಯಾವುದೇ ಯುದ್ಧ ಹೊಸ ಅಂಗವಿಕಲರನ್ನು ಸೃಷ್ಟಿಸುವ ಮೂಲಕ ಅಂಗವಿಕಲರ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಸಾಮ್ರಾಜ್ಯಶಾಹಿ ಯಾವಾಗಲೂ ಯುದ್ದದ ಪರ, ನಾವು ಯಾವಾಗಲೂ ಯುದ್ಧದ ವಿರೋಧಿಗಳು.

ಮೇಲಿನ ಯಾವುದೇ ಬೇಡಿಕೆ ತಾನಾಗೇ ಈಡೇರುವುದಿಲ್ಲ ಅದಕ್ಕಾಗಿ ಸಮರಶೀಲ ಹೋರಾಟಗಳನ್ನು ನಡೆಸಬೇಕು. ಹೋರಾಟ ನಡೆಸಲು ಬಲವಾದ ಸಂಘಟನೆ ಬೇಕು. ಸಂಘಟನೆಯೇ ಅಂಗವಿಕಲರ ಅಸ್ತ್ರ. ಎಲ್ಲರೂ ಸೇರಿ ಸಂಘಟನೆ ಎಂಬ ಅಸ್ತ್ರವನ್ನು ಬಲಗೊಳಿಸೋಣ ಎಂದು ನಂಬುರಾಜನ್ ಹೇಳಿದರು.

ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಅಂಗವಿಕಲರ ಪಿಂಚಣಿಯನ್ನು 3,000 ರೂಪಾಯಿ ಮಾಡುವುದಾಗಿ ಭರವಸೆ ನೀಡಿತ್ತು. ಅದಿನ್ನೂ ಕಾಗದದಲ್ಲೇ ಉಳಿದಿದೆ. ಆಂಧ್ರ, ತೆಲಂಗಾಣ, ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಅಂಗವಿಕಲರಿಗೆ ಸಿಗುತ್ತಿರುವ ಪಿಂಚಣಿ ತುಂಬಾ ಕಡಿಮೆ ಇದೆ. ರಾಜ್ಯ ಸರ್ಕಾರ ಈ ಕೂಡಲೇ 3,000 ರೂ ಪಿಂಚಣಿ ಜಾರಿಗೊಳಿಸಬೇಕು ಎಂದು ಸಮಾವೇಶ ಒತ್ತಾಯಿಸಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಂಗವಿಕಲರು, ಒಕ್ಕೂಟದ ಪದಾಧಿಕಾರಿಗಳು ಈ ಸಮಾವೇಶದಲ್ಲಿ ಭಾಗಿಯಾಗಿದ್ದರು.

ಸಮ್ಮೇಳನದ ಮೊದಲ ದಿನ ಬೆಳಗ್ಗೆ 10.30 ಕ್ಕೆ ಜಿಲ್ಲಾಧಿಕಾರಿಯವರು ಆಗಮಿಸಿ ಅಂಗವಿಕಲರ ಮೆರವಣಿಗೆಯನ್ನು ಸಂಘಟನೆಯ ಧ್ವಜದ ಮೇಲೆ ಕೆಳಗೆ ಹಾಯಿಸುವುದರ ಮೂಲಕ ಉದ್ಘಾಟಿಸಿದರು. ಅವರು ಮಾತನಾಡುತ್ತಾ ಅಂಗವಿಕಲರಿಗೆ ಸಮಾನತೆ, ಬದುಕಿನ ಅವಕಾಶಗಳು ದೊರಕಿಸಿಕೊಡಬೇಕಾದುದು, ಅನುಕಂಪ ವ್ಯಕ್ತಪಡಿಸುವುದಕ್ಕಿಂತ ಮುಖ್ಯ ಎಂದು ಹೇಳಿದರು.

ಸಮ್ಮೇಳನಕ್ಕೆ ಗ್ರಾಮ ಪಂಚಾಯತಿ ನೌಕರರ ಸಂಘಟನೆಯ ಪರವಾಗಿ ಕಾಂ.ಜಿ.ರಾಮಕೃಷ್ಣ, ಕೃಷಿಕೂಲಿಕಾರ ಸಂಘಟನೆಯ ಪರವಾಗಿ ಕಾಂ.ಪುಟ್ಟಮಾದು, ಪ್ರಾಂತ ರೈತ ಸಂಘದ ಪರವಾಗಿ ಕಾಂ.ಕೃಷ್ಣೇಗೌಡ ಸಮ್ಮೇಳನಕ್ಕೆ ಶುಭಕೋರಿದರು. ಕಾಂ.ಸಿ ಕುಮಾರಿ ನಿರೂಪಣೆ, ಕಾಂ.ದೊಡ್ಡ ಮರಿಗೌಡರು ಸ್ವಾಗತ ಮಾಡಿದರು.

ಸಮಾರೋಪ ಸಮಾರಂಭದಲ್ಲಿ ನಿಧನರಾದ ಅಂಗವಿಕಲರ ಹಾಗೂ ಪಾಲಕರ ಸಂಘಟನೆಯ ಜಿಲ್ಲಾಧ್ಯಕ್ಷರ ತಾಯಿಗೆ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷರೂ ಹಾಗೂ ಅಂಗವಿಕಲರೊಬ್ಬರ ಪಾಲಕರೂ ಆದ ಎನ್ ನಾಗರಾಜ್ ಪಾಲಕರ ಪರವಾಗಿ ಸನ್ಮಾನ ಮಾಡಲಾಯಿತು. ಅದೇ ಸಮಾರಂಭದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಜಯಪ್ರಕಾಶ ಗೌಡರಿಗೂ ಸನ್ಮಾನ ಮಾಡಲಾಯಿತು.



‘ಹಿಟ್ ಅಂಡ್ ರನ್’ ಪ್ರಕರಣದಲ್ಲಿ ಚಾಲಕರಿಗೆ 10 ವರ್ಷ ಜೈಲು ಶಿಕ್ಷೆ

ಮೋಟಾರು ವಾಹನ ಕಾಯ್ದೆ: ಅಪಾಯಕಾರಿ ಕ್ರಿಮಿನಲ್ ಕಾನೂನು

2023 ಡಿಸೆಂಬರ್ 21 ರಂದು ಭಾರತೀಯ ನ್ಯಾಯ ಸಂಹಿತೆ–2023 (BNS) ನ್ನು ಸಂಸತ್ತು ಅಂಗೀಕರಿಸಿದೆ. IPC ಗೆ ತಿದ್ದುಪಡಿ ತರುವ ನೆಪದಲ್ಲಿ “ದುಡುಕಿನ ಮತ್ತು ಅಜಾಗರೂಕ ಚಾಲನೆ” ಶಬ್ದಗಳನ್ನು ಸೇರಿಸಲಾಗಿದೆ. ಈ ಮೂಲಕ ‘ಹಿಟ್ ಅಂಡ್ ರನ್’ ಪ್ರಕರಣದಲ್ಲಿ ಚಾಲಕರನ್ನು 10 ವರ್ಷ ಜೈಲಿಗೆ ಹಾಕಲು ಮತ್ತು 7 ಲಕ್ಷ ರೂಗಳವರೆಗೆ ದಂಡ ವಿಧಿಸಲು ತೀರ್ಮಾನಿಸಲಾಗಿದೆ. ಈ ಅಂಶದಿಂದಾಗಿ, ಕೇವಲ ವಾಣಿಜ್ಯ ಮತ್ತು ಪ್ರಯಾಣಿಕರ ವಾಹನಗಳೂ ಸೇರಿದಂತೆ ಸ್ವಂತ ವಾಹನಗಳ ಚಾಲಕರೂ ಭಾಧಿತರಾಗಿದ್ದಾರೆ. ದ್ವಿಚಕ್ರ, ತ್ರಿಚಕ್ರ ವಾಹನಗಳು, ಕಾರುಗಳು, ಲಾರಿ, ಟ್ರಕ್, ಬಸ್ ಮುಂತಾದ ಎಲ್ಲಾ ವಾಹನಗಳ ಚಾಲಕರನ್ನು ನಿರಂತರ ಭೀತಿಯೊಳಗೆ ಬದುಕುವಂತೆ ಇದು ಮಾಡುತ್ತದೆ.

ಸಂಸತ್ತು 2023 ರ ಡಿಸೆಂಬರ್ 21 ರಂದು ಭಾರತೀಯ ದಂಡ ಸಂಹಿತೆ, ಕ್ರಿಮಿನಲ್ ಸಂಹಿತೆಗೆ ಬದಲಿಯಾಗಿ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್), ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ (ಬಿಎನ್‌ಎಸ್‌ಎಸ್) ಮತ್ತು ಭಾರತೀಯ ಸಾಕ್ಷಿ ಸಂಹಿತಾ ಎಂಬ ಮೂರು ಹೊಸ ದಂಡ ಶಾಸನಗಳನ್ನು ಜಾರಿಗೊಳಿಸಲಾಗಿದೆ. ಕಾರ್ಯವಿಧಾನ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯನ್ನು ಸಂಸತ್ತಿನ ಚರ್ಚೆಯಿಲ್ಲದೆ ನಡೆಸಲಾಯಿತು.

ಸಂಸತ್ತಿನ ಭದ್ರತಾ ವೈಫಲ್ಯದ ಹಿನ್ನೆಲೆಯಲ್ಲಿ ಉತ್ತರ ನೀಡಲು ನಿರಾಕರಿಸಿದ ಒಕ್ಕೂಟ ಸರ್ಕಾರ, ವಿರೋಧ ಪಕ್ಷದ 146 ಸಂಸದರನ್ನು ಅಮಾನತ್ತುಗೊಳಿಸಿ, ಯಾರ ವಿರೋಧವೂ ಇಲ್ಲದ ಹಾಗೆ ನೋಡಿಕೊಂಡು BNS-23 ನ್ನು ಅಂಗೀಕರಿಸಿದೆ. ಈ ಕಾಯ್ದೆಗೆ ಭಾರತದ ರಾಷ್ಟ್ರಪತಿಗಳು ತಕ್ಷಣವೇ ಸಹಿ ಹಾಕುವ ಮೂಲಕ ಒಪ್ಪಿಗೆ ನೀಡಿದರು. ಇದನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಆದರೆ, ಅದರ ಅನುಷ್ಠಾನದ ದಿನಾಂಕವನ್ನು ತಿಳಿಸಿಲ್ಲ.

ಹಿಂದಿನ ಐಪಿಸಿ

ಹಿಂದಿನ IPC ಯ u/s 304A ನಿರ್ಲಕ್ಷ್ಯದಿಂದ ಸಾವಿಗೆ ಕಾರಣವಾಗುತ್ತದೆ ಎಂದು ವ್ಯಾಖ್ಯಾನಿಸಲಾಗಿದೆ. ಅದು ಹೀಗೆ ಹೇಳುತ್ತದೆ, "ಯಾವುದೇ ದುಡುಕಿನ ಅಥವಾ ನಿರ್ಲಕ್ಷ್ಯದ ಕ್ರಿಯೆಯನ್ನು ಮಾಡುವ ಮೂಲಕ ಯಾವುದೇ ವ್ಯಕ್ತಿಯ ಸಾವಿಗೆ ಕಾರಣರಾದವರು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ವಿವರಣೆಯ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ". ಚಾಲನೆಯ ಮಾತಿಲ್ಲ.

ಅದೇ ರೀತಿ, ಮೋಟಾರು ವಾಹನ ಕಾಯ್ದೆಯಲ್ಲಿ, ಮೊದಲ ಅಪರಾಧಕ್ಕೆ ಶಿಕ್ಷೆ: 6 ತಿಂಗಳವರೆಗೆ ಜೈಲು ಶಿಕ್ಷೆ, ಮತ್ತು/ ಅಥವಾ ರೂ 5,000 ವರೆಗೆ ದಂಡ. ಮೂರು ವರ್ಷಗಳ ನಂತರದ ಅಪರಾಧ: 2 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು/ ಅಥವಾ ರೂ 10,000 ವರೆಗೆ ದಂಡ ವಿಧಿಸಬಹುದಾಗಿದೆ.

ಹೊಸದಾಗಿ ಬಂದಿರುವ ಮೋಟಾರು ವಾಹನ ಕಾಯ್ದೆ(BNS) ನ ಸೆಕ್ಷನ್ 106 (1) ಹೇಳುತ್ತದೆ, “ಯಾವುದೇ ದುಡುಕಿನ ಅಥವಾ ನಿರ್ಲಕ್ಷ್ಯದ ಕ್ರಿಯೆಯನ್ನು ಮಾಡುವ ಮೂಲಕ ಯಾವುದೇ ವ್ಯಕ್ತಿಯ ಸಾವಿಗೆ ಕಾರಣರಾದವರು ಅಪರಾಧಿ ನರಹತ್ಯೆಗೆ ಸಮನಾಗಿರುವುದಿಲ್ಲ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ವಿವರಣೆಯ ಜೈಲುವಾಸದಿಂದ ಶಿಕ್ಷೆಗೆ ಒಳಗಾಗುತ್ತಾರೆ ಮತ್ತು ದಂಡ ವಿಧಿಸಲು ಸಹ ಹೊಣೆಗಾರರಾಗಿರುತ್ತೀರಿ.

ಮತ್ತು ಸೆಕ್ಷನ್ 106 (2) ಹೇಳುತ್ತದೆ, “ಅಪರಾಧ ನರಹತ್ಯೆಗೆ ಸಮನಾಗದ ವಾಹನವನ್ನು ದುಡುಕಿನ ಮತ್ತು ನಿರ್ಲಕ್ಷ್ಯದ ಚಾಲನೆಯಿಂದ ಯಾವುದೇ ವ್ಯಕ್ತಿಯ ಸಾವಿಗೆ ಕಾರಣವಾದವನು ಮತ್ತು ಘಟನೆಯ ನಂತರ ಅದನ್ನು ಪೊಲೀಸ್ ಅಧಿಕಾರಿ ಅಥವಾ ಮ್ಯಾಜಿಸ್ಟ್ರೇಟ್‌ಗೆ ವರದಿ ಮಾಡದೆ ಪರಾರಿಯಾದವನು ಜೈಲು ಶಿಕ್ಷೆಗೆ ಗುರಿಯಾಗುತ್ತಾನೆ. ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ವಿವರಣೆ ಮತ್ತು ದಂಡಕ್ಕೆ ಸಹ ಹೊಣೆಗಾರನಾಗಬಹುದು.”

ಚಾಲಕರ ದಿಢೀರ್ ಮುಷ್ಕರ

ಕೇಂದ್ರ ಸರ್ಕಾರ ತರಾತುರಿಯಿಂದ ತಂದ ಭಾರತೀಯ ದಂಡ ಸಂಹಿತೆಯನ್ನು ಬದಲಿಸುವ ಭಾರತೀಯ ನ್ಯಾಯ ಸಂಹಿತೆಯ (ಬಿ.ಎನ್. ಎಸ್.–23) ಕಾರಣದಿಂದ ಆಕ್ರೋಶಗೊಂಡು, ಈ ಕಾಯ್ದೆಯನ್ನು ಹಿಂಪಡೆಯಬೇಕೆಂದು ಒತ್ತಾಯಿಸಿ, 2024ರ ಹೊಸ ವರ್ಷದ ಮೊದಲ ದಿನವೇ ದೇಶದ ಹಲವು ರಾಜ್ಯಗಳಲ್ಲಿ ವಿವಿಧ ವಾಹನ ಚಾಲಕರು ದಿಢೀರ್ ಪ್ರತಿಭಟನೆಗೆ ಇಳಿದರು. ಜನವರಿ 1 ರಂದು ಅನಿರ್ಧಿಷ್ಟ ಕಾಲದ ಮುಷ್ಕರವನ್ನು ಘೋಷಿಸಿದರು. ರಾಜಸ್ಥಾನ, ಮಹಾರಾಷ್ಟ್ರ, ಪಂಜಾಬ್, ಹರಿಯಾಣ, ಮಧ್ಯಪ್ರದೇಶ, ಛತ್ತೀಸ್‌ಗಢ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಆಂಧ್ರಪ್ರದೇಶ ಮತ್ತು ಕರ್ನಾಟಕ ಸೇರಿದಂತೆ ರಾಜ್ಯಗಳಾದ್ಯಂತ ಹಲವಾರು ಸ್ಥಳಗಳಲ್ಲಿ ಟ್ರಕ್‌ಗಳು, ಬಸ್‌ಗಳ ಚಾಲಕರು ಮತ್ತು ತೈಲ ಟ್ಯಾಂಕರ್‌ಗಳು ಪ್ರತಿಭಟನೆ ನಡೆಸಿ ರಸ್ತೆಗಳನ್ನು ನಿರ್ಬಂಧಿಸಿದವು.

ತಡೆಹಿಡಿಯುವ ಭರವಸೆ

ಮುಷ್ಕರ ಎರಡನೇ ದಿನವೂ ಮುಂದುವರಿಯುತ್ತಿದ್ದಂತೆ ಮತ್ತು ಮುಷ್ಕರಕ್ಕೆ ದೇಶಾದ್ಯಂತ ಬೆಂಬಲ ಹೆಚ್ಚಾಗುತ್ತಿದ್ದಂತೆ ಬೆಚ್ಚಿಬಿದ್ದ ಕೇಂದ್ರದ ಗೃಹ ಸಚಿವಾಲಯವು, ಜನವರಿ 2ರಂದು ಆಲ್ ಇಂಡಿಯಾ ಮೋಟಾರ್ ಟ್ರಾನ್ಸ್‌ಪೋರ್ಟ್



ಕಾಂಗ್ರೆಸ್ (ಎಐಎಂಟಿಸಿ) ಮುಖಂಡರ ಜೊತೆ ಮಾತುಕತೆ ನಡೆಸಿತು. “ಭಾರತೀಯ ನ್ಯಾಯ ಸಂಹಿತೆಯ ನಿಬಂಧನೆಗಳು ಇಲ್ಲಿಯವರೆಗೆ ಜಾರಿಗೆ ಬಂದಿಲ್ಲ. ನಾವು [ಸರ್ಕಾರ] ಅಖಿಲ ಭಾರತ ಮೋಟಾರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್‌ನೊಂದಿಗೆ ಚರ್ಚೆ ನಡೆಸಿದ ನಂತರವೇ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 106 (2) ಅನ್ನು ಕಾರ್ಯಗತಗೊಳಿಸುತ್ತೇವೆ" ಎಂಬ ಸರ್ಕಾರದ ಭರವಸೆಯೊಂದಿಗೆ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ. ಆದರೂ, ಕೇಂದ್ರದ ಇಂತಹ ಭರವಸೆಗಳನ್ನು ನಂಬಲಾಗದು ಮತ್ತು ಯಾವುದೇ ಸಮಯದಿಂದ ಈ ಕಾನೂನುಗಳನ್ನು ಜಾರಿಮಾಡಬಹುದು ಎಂಬುದನ್ನು ಇದುವರೆಗಿನ ಅದರ ನಡೆಗಳು ತೋರಿಸುತ್ತವೆ. ಚಾಲಕರು ಮತ್ತೆ ದೊಡ್ಡ ಮಟ್ಟದ ಹೋರಾಟಕ್ಕೆ ಸಿದ್ದತೆ ಮಾಡಿಕೊಳ್ಳತೊಡಗಿದ್ದಾರೆ.

ಬ್ರಿಟಿಷರ ಕಾಲದ ಕಾಯಿದೆಗಿಂತ ಹೆಚ್ಚು ಕಠಿಣ

ಈ ಕಾನೂನಿನಿಂದಾಗಿ, ವಾಣಿಜ್ಯ ಮತ್ತು ಪ್ರಯಾಣಿಕರ ವಾಹನಗಳ ಚಾಲಕರು ಮಾತ್ರವಲ್ಲದೆ, ಸಾಮಾನ್ಯ ವಾಹನ ಚಲಾಯಿಸುವ ಸಾರ್ವಜನಿಕರು ಮತ್ತು ಇಡೀ ರಸ್ತೆ ಸಾರಿಗೆ ಕ್ಷೇತ್ರದ ಜನರು ಅತ್ಯಂತ ಭಯಭೀತರಾಗಿದ್ದಾರೆ ಮತ್ತು ಸದಾ ತೂಗುಗತ್ತಿಯಂತಿರುವ ಭಾರೀ ದಂಡ ಮತ್ತು ಶಿಕ್ಷೆಯಿಂದಾಗಿ ನಿರಂತರವಾಗಿ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಹೊಸ ಕಾಯಿದೆಯ ಶಿಕ್ಷೆಗಳು ಬ್ರಿಟಿಷರ ಕಾಲದ ಕಾಯಿದೆಗಿಂತ ಹೆಚ್ಚು ಕಠಿಣವಾಗಿವೆ. ಭಾರತೀಯತೆ ಎಂದರೆ ಇದೇ ಏನೋ!!

ದಂಡದ ಮೊತ್ತ ಹೆಚ್ಚಾದರೆ ಅಪಘಾತಗಳು ಕಡಿಮೆಯಾಗುತ್ತವೆಯೇ?

ಮೋಟಾರು ವಾಹನ ಕಾಯ್ದೆ ತಿದ್ದುಪಡಿ–2019 ರ ಗುರಿ ರಸ್ತೆ ಅಪಘಾತಗಳು ಮತ್ತು ಸಾವುಗಳನ್ನು ಕಡಿಮೆ ಮಾಡುವುದು ಎಂದು ಸರ್ಕಾರ ಹೇಳಿದೆ. ಇದನ್ನು ಸಂಸತ್ತಿನ ಒಳಗೆ ಮತ್ತು ಹೊರಗೆ ಸಾರಿಗೆ ತಜ್ಞರು ಪದೇ ಪದೇ ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಒಂದು ಸಂದರ್ಭದಲ್ಲಿ ಸಂಸತ್ತಿನಲ್ಲಿ ಮಾತನಾಡಿ, ಅಪಘಾತಗಳನ್ನು ಕಡಿಮೆ ಮಾಡಲು ಮತ್ತು ಜೀವ ಉಳಿಸಲು ಸರ್ಕಾರ ಕಾನೂನಿಗೆ ತಿದ್ದುಪಡಿ ತರುತ್ತಿದ್ದರೆ, ವಿರೋಧ ಪಕ್ಷಗಳು ಅದಕ್ಕೆ ಅಡ್ಡಿಪಡಿಸುತ್ತಿವೆ ಎಂದು ವಿರೋಧ ಪಕ್ಷಗಳ ಸದಸ್ಯರ ಮೇಲೆ ಆರೋಪ ಹೊರಿಸಿದರು. ದಂಡದ ಮೊತ್ತ ಹೆಚ್ಚಾದರೆ, ಶಿಕ್ಷೆಯ ಪ್ರಮಾಣ ಹೆಚ್ಚಾದರೆ ರಸ್ತೆ ಅಪಘಾತಗಳು ಕಡಿಮೆಯಾಗುತ್ತವೆಯೇ?

ಮೋಟಾರು ವಾಹನ ಕಾಯ್ದೆ ತಿದ್ದುಪಡಿ–2019 ಕಾಯ್ದೆಯ ಭಾರಿ ಹೆಚ್ಚಿಸಿದ ದಂಡಗಳು ಜಾರಿಗೆ ಬಂದು 4 ವರ್ಷಗಳಾಗಿವೆ. ಆದರೆ ಅಪಘಾತಗಳು ಕಡಿಮೆಯಾಗಿಲ್ಲ, 2022 ರಲ್ಲಿ ಅವು ಹೆಚ್ಚಾಗಿವೆ ಎಂದು ಸರ್ಕಾರದ ಅಂಕಿಅಂಶಗಳು ತೋರಿಸುತ್ತವೆ. ಆದ್ದರಿಂದ, ಅಪಘಾತಗಳ ನೈಜ ಕಾರಣಗಳನ್ನು ತಿಳಿಸದೆ ದಂಡವನ್ನು ಹೆಚ್ಚಿಸುವುದು ಅಪಘಾತಗಳನ್ನು ಕಡಿಮೆ ಮಾಡುತ್ತದೆ ಎಂದು ಹೇಳುವುದು ಒಂದು ವಂಚನೆ ಎಂದು ಅನುಭವವು ಸಾಬೀತುಪಡಿಸುತ್ತದೆ.

ಇಷ್ಟೊಂದು ತರಾತುರಿ ಏಕೆ?

ಯಾವುದೇ ಕಾನೂನನ್ನು ಮಾಡುವ ಮೊದಲು ಅಥವಾ ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ ಯಾವುದೇ ತಿದ್ದುಪಡಿಗಳನ್ನು ಮಾಡುವ ಮೊದಲು ಸರ್ಕಾರ ಮೊದಲು ಭಾರತದ ಕಾನೂನು ಆಯೋಗವನ್ನು ಸಂಪರ್ಕಿಸಬೇಕು. ಕಾನೂನು ಯಾರಿಗೆ ಅನ್ವಯಿಸುತ್ತದೆಯೋ ಆ ವರ್ಗದ ಸಂಘಟನೆಗಳು ಮತ್ತು ತಜ್ಞರೊಂದಿಗೆ ಸಮಾಲೋಚಿಸಬೇಕು. ಈ ಹೊಸ ಕ್ರಿಮಿನಲ್ ಕಾನೂನುಗಳನ್ನು ಜಾರಿಗೊಳಿಸುವ ಮೊದಲು ಈ ಎಲ್ಲಾ ಸಂಪ್ರದಾಯಗಳನ್ನು ಮುರಿಯಲಾಯಿತು. ಸಂಸತ್ತಿನಲ್ಲಾದರೂ ವಿಸ್ತೃತ ಚರ್ಚೆಯಾಗಬೇಕಿತ್ತು. ಆದರೆ, ಸರ್ಕಾರ ಈ ಯಾವ ಕ್ರಮಗಳನ್ನೂ ಅನುಸರಿಸದೆ ಈ ಕಾನೂನುಗಳನ್ನು ಅಂಗೀಕರಿಸಿತು. ಈ ಕಾಯ್ದೆ ಜಾರಿಗೆ ಮೋದಿ ಸರ್ಕಾರಕ್ಕೆ ಇಷ್ಟೊಂದು ತರಾತುರಿ ಏಕೆ ಎಂಬ ಪ್ರಶ್ನೆ ಮೂಡುತ್ತದೆ.

ರಸ್ತೆ ನಿರ್ಮಾಣ ದೋಷಗಳೂ ಅಪಘಾತಗಳಿಗೆ ಕಾರಣ

ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಯಲ್ಲಿ ಅಪಘಾತಗಳ ಕುರಿತು ಅಧ್ಯಯನ ಮಾಡುತ್ತಿರುವ ಪ್ರಮುಖ ಪ್ರಾಧ್ಯಾಪಕ ಗೀತಮ್ ತಿವಾರಿ, ದೇಶದಲ್ಲಿ ಸಂಭವಿಸುವ ಶೇ. 90 ರಷ್ಟು ರಸ್ತೆ ಅಪಘಾತಗಳು ಮಾನವೇತರ ಅಂಶಗಳಿಂದ ಉಂಟಾಗುತ್ತವೆ ಎಂದು ಸಾಬೀತುಪಡಿಸಿದ್ದಾರೆ. ಅವರು ಭಾರತದಲ್ಲಿ ಮಾತ್ರವಲ್ಲದೆ ವಿವಿಧ ದೇಶಗಳಲ್ಲಿ ರಸ್ತೆ ಅಪಘಾತಗಳ ಬಗ್ಗೆ ಅನೇಕ ಭಾಷಣಗಳನ್ನು ನೀಡುತ್ತಾರೆ. ರಸ್ತೆ ಅಪಘಾತಗಳಿಗೆ 3 ಮುಖ್ಯ ಕಾರಣಗಳಿವೆ.

ಜಗತ್ತಿನಲ್ಲಿ ರಸ್ತೆ ನಿರ್ಮಾಣ ನಿಯಮಗಳಿಗೆ ವಿರುದ್ಧವಾಗಿ ನಮ್ಮ ದೇಶದಲ್ಲಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಹಳ್ಳಿಗಳು/ಪಟ್ಟಣಗಳು/ವಸತಿ ಪ್ರದೇಶಗಳ ನಡುವೆ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವಂತಿಲ್ಲ. ಆದರೆ ನಮ್ಮ ದೇಶದಲ್ಲಿ ಇದಕ್ಕೆ ವಿರುದ್ಧವಾಗಿ ನಡೆಯುತ್ತಿದೆ. ಆದರೆ ನಮ್ಮ ದೇಶದಲ್ಲಿ ಅಂತಹ ಉಲ್ಲಂಘನೆಗಳು ಕಾನೂನುಬಾಹಿರ. ಆದರೂ ಅದರ ವಿರುದ್ದ ಯಾವುದೇ ಪ್ರಕರಣ ದಾಖಲಾಗಿಲ್ಲ. ಹೀಗಾಗಿ ಗುತ್ತಿಗೆದಾರರು ಶಿಕ್ಷೆಯ ಭಯವಿಲ್ಲದೆ ಮನಸೋ ಇಚ್ಛೆ ರಸ್ತೆ ನಿರ್ಮಿಸುತ್ತಿದ್ದಾರೆ.

ಉದಾಹರಣೆಗೆ, ಕರ್ನೂಲ್ ಮತ್ತು ಹೈದರಾಬಾದ್ ನಡುವಿನ ಕೃಷ್ಣಾ ನದಿ ಸೇತುವೆಯಲ್ಲಿ ಜಬ್ಬಾರ್ ಟ್ರಾವೆಲ್ಸ್ ಬಸ್ ಅಪಘಾತ ನಡೆಯಿತು. 40ಕ್ಕೂ ಹೆಚ್ಚು ಮಂದಿ ಸಜೀವವಾಗಿ ಬೆಂಕಿಯಲ್ಲಿ ಸುಟ್ಟುಹೋದರು. ಈ ಕುರಿತು ಅಧ್ಯಯನ ನಡೆಸಿದ ಸರ್ಕಾರಿ ಸಮಿತಿಯ ವರದಿಯು, ಅಪಘಾತ ಸ್ಥಳದ ಸಮೀಪ ರಸ್ತೆಯ ಅಗಲ ಕಡಿಮೆಯಾಗಿದೆ. ಮೇಲಾಗಿ ರಸ್ತೆ ಬದಿ ಇರುವ ಕಾಲುವೆಗೆ ಅಳವಡಿಸಿದ್ದ ತಡೆಗೋಡೆಗೆ ಬಳಸಿದ್ದ ಕಬ್ಬಿಣದ ಸರಳುಗಳು ಕಿತ್ತು ಹೊರಬಂದಿವೆ. ಇದರಿಂದ ಬಸ್ ಕಾಲುವೆಯ ತಡೆಗೋಡೆಗೆ ಡಿಕ್ಕಿ ಹೊಡೆದು, ಹೊರಬಂದಿದ್ದ ಕಬ್ಬಿಣದ ಸರಳುಗಳಿಗೆ ಬೆಂಕಿ ಹೊತ್ತಿಕೊಂಡಿದ್ದು, ಬಸ್ಸಿನ ಆಯಿಲ್ ಟ್ಯಾಂಕ್ ಒಡೆದು ಬೆಂಕಿ ಹೊತ್ತಿಕೊಂಡಿದೆ ಎಂದು ಬಹಿರಂಗಪಡಿಸಿತು. ಆದರೂ, ರಸ್ತೆ ನಿರ್ಮಿಸಿದ ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ.

ವಿಶಾಖಪಟ್ಟಣಂ–ಶ್ರೀಕಾಕುಳಂ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಅಪಘಾತದಲ್ಲಿ ತೆಲುಗು ದೇಶಂ ಪಕ್ಷದ ನಾಯಕ ಯರ್ರಂ ನಾಯ್ಡು ಸಾವನ್ನಪ್ಪಿರುವುದು ಮತ್ತೊಂದು ಉದಾಹರಣೆ. ಅದಕ್ಕೆ ಕಾರಣ ಎದುರಿಗೆ ಬರುತ್ತಿದ್ದ ಲಾರಿಯೊಂದು, ಶ್ರೀಕಾಕುಳಂ ಕಡೆಗೆ ಬಲಕ್ಕೆ ತಿರುಗುತ್ತಿದ್ದಾಗ ಎರ್ರಂ ನಾಯ್ಡು ಅವರ ಕಾರು ಬಂದಿತ್ತು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಲ ತಿರುವುಗಳಿಗೆ ಅವಕಾಶ ನೀಡಬಾರದು. ಆದರೆ ರಸ್ತೆ ನಿರ್ಮಾಣದಲ್ಲಿಯೇ ಹಲವೆಡೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಲಕ್ಕೆ ತಿರುಗುವ ವ್ಯವಸ್ಥೆ ಇದೆ. ಇಂತಹ ಬಹಳಷ್ಟು ಉದಾಹರಣೆಗಳಿವೆ. ಆದರೆ, ಹೆದ್ದಾರಿ ನಿರ್ಮಾಣ ಮಾಡಿದವರ ತಪ್ಪಿಗೆ ಚಾಲಕರು ಬಲಿಪಶುಗಳಾಗುತ್ತಾರೆ.

ವಿವಿಧ ವೇಗದಲ್ಲಿ ಸಂಚರಿಸುವ ಎಲ್ಲಾ ರೀತಿಯ ವಾಹನಗಳು ಒಂದೇ ರಸ್ತೆಯಲ್ಲಿ ಸಂಚರಿಸಬೇಕು. ಅದರ ಹೊರತಾಗಿ ಒಂದು ➚





ಕೇರಳದ ಇನ್ನೊಂದು ಪ್ರಥಮ: ನಗರೀಕರಣ ಕಮಿಶನ್

ಟಿಕೆಂದರ ಸಿಂಗ್ ಪನ್ವರ್
(ಶಿಮ್ಲಾ ದ ಮಾಜಿ ಉಪ ಮೇಯರ್)

2024 ಪ್ರಾರಂಭವಾಗುತ್ತಿರುವಂತೆ ನಗರಗಳ ಕ್ಷೇತ್ರದಲ್ಲಿ ಒಂದು ಒಳ್ಳೆಯ ಸುದ್ದಿ. ಸುಮಾರು 38 ವರ್ಷಗಳ ನಂತರ ನಗರ ಕಮಿಷನ್ನಿನ ಪ್ರಾರಂಭವಾಗಿದೆ– ಅದು ಕೇರಳ ರಾಜ್ಯದಲ್ಲಿ. ನಗರೀಕರಣದ ಮೊದಲ ಕಮಿಷನ್ ಅನ್ನು ಅಂದಿನ ಭಾರತದ ಪ್ರಧಾನಿ ರಾಜೀವ್ ಗಾಂಧಿ ಅವರು ದೇಶದ ಒಬ್ಬ ಅತ್ಯುತ್ತಮ ಶಿಲ್ಪಿ ಯೆಂದು ಪರಿಗಣಿಸಲ್ಪಟ್ಟ ಚಾರ್ಲ್ಸ್ ಕೊರಿಯ ಅವರ ಮುಂದಾಳ್ತನದಲ್ಲಿ ನೇಮಿಸಿದ್ದರು. ರಾಜೀವ್ ಗಾಂಧಿ ಅವರ ಹತ್ಯೆ ನಂತರ ಅದರ ಹಲವು ಶಿಫಾರಸ್ಸುಗಳನ್ನು ಪರಿಗಣಿಸಲಾಗಲಿಲ್ಲ. ಆದರೆ 74 ನೇ ಸಂವಿಧಾನ ತಿದ್ದುಪಡಿ ಒಂದು ಸಕಾರಾತ್ಮಕ ಬೆಳವಣಿಗೆಯಾಗಿತ್ತು. ಆನಂತರದಲ್ಲಿ ನಗರ ಬೆಳವಣಿಗೆಯ ನೀತಿಗಳಲ್ಲಿ ಆಮೂಲಾಗ್ರ ಬದಲಾವಣೆಗಳಾಗಿ ಖಾಸಗಿ ಮುಂದೊಡಗು ಮತ್ತು ಹೂಡಿಕೆಗಳಿಗೆ ಮನ್ನಣೆ ಬಂದಿತ್ತು.

ನಗರ ಕಮಿಷನ್ನಿನ ಅವಶ್ಯಕತೆ

ಸದ್ಯ ಜಾಗತಿಕವಾಗಿ ನೋಡಿದರೆ ಶೇ 56 ರಷ್ಟು ಜನ ನಗರ ಪ್ರದೇಶಗಳಲ್ಲಿ ವಾಸಿಸುತಿದ್ದಾರೆ. ಕಾರ್ಲ್ ಮಾರ್ಕ್ಸ್ ಅವರು ಬಂಡವಾಳ ಕೃತಿ ಬರೆದ ಸಮಯದಲ್ಲಿ ನಗರಗಳು ಔದ್ಯಮಿಕ ಉತ್ಪಾದನೆಯ ಮತ್ತು ಬಂಡವಾಳ ಶೇಖರಣೆಯ ಕೇಂದ್ರಗಳಾಗಿದ್ದವು ಮತ್ತು ಶೇ 5 ಕ್ಕಿಂತ ಸ್ವಲ್ಪ ಹೆಚ್ಚು ಜನ ಮಾತ್ರ ನಗರಗಳಲ್ಲಿ ವಾಸಿಸುತ್ತಿದ್ದರು. ನಗರೀಕರಣ ಜಗತ್ತಿನಾದ್ಯಂತ ಅಪರಿಮಿತ ಬದಲಾವಣೆಗಳನ್ನು ತಂದಿದೆ. ಅದು ಹವಾಮಾನ ವೈಪರೀತ್ಯಗಳನ್ನು ಹೆಚ್ಚಿಸಿದೇ ಅಷ್ಟೇ ಅಲ್ಲ ಅದು ಭೂ ಬಳಕೆ, ಕಟ್ಟಡ ರೂಪಾಂತರಗಳು, ಅಸಮ ನಗರಗಳು, ದ್ವಂದ್ವ, ಅನೌಪಚಾರಿಕತೆ, ಮಾಲಿನ್ಯದ ಬಿಕ್ಕಟ್ಟು, ವಸತಿ, ನೀರು ಮತ್ತು ಸ್ವಚ್ಛತೆಯ ಸವಾಲುಗಳನ್ನು ಮಾತ್ರವಲ್ಲದೆಇತ್ಯಾದಿ ಪ್ರಮುಖ ಬದಲಾವಣೆಗಳನ್ನು ತಂದಿದ್ದಲ್ಲದೆ, ಕೆಲವು ತೀವ್ರ ನಗರ ಅಸಮತೆಗಳನ್ನು ಹುಟ್ಟು ಹಾಕಿದೆ. ಬಂಡವಾಳ ಶೇಖರಣೆಯ ಒಂದು ಮುಖ್ಯ ವಿಧಾನವೆಂದರೆ ನಗರ ಅಭಿವೃದ್ಧಿ ಎಂಬಂತಾಗಿದೆ.

ಸ್ವಾತಂತ್ರ್ಯೋತ್ತರ ಭಾರತ ಎರಡು ಸ್ಪಷ್ಟವಾದ ನಗರ ಅಭಿವೃದ್ಧಿ ಅವಧಿಗಳನ್ನು ಕಂಡಿದೆ. ನೆಹರು ಅವಧಿ ಸುಮಾರು ಮೂರು ದಶಕಗಳ ಕಾಲ ನಡೆದು, 1980ರ ದಶಕದ ಕೊನೆಯ ಹೊತ್ತಿಗೆ ಬಿಚ್ಚಿಕೊಳ್ಳಲಾರಂಭವಾಯಿತು.ಈ ಅವಧಿಯಲ್ಲಿ 150 ಹೊಸ ನಗರಗಳನ್ನು ಕಟ್ಟಲಾಯಿತು. ಇಲ್ಲಿ ಪರಿಪೂರ್ಣ ಧೋರಣೆ ಇದ್ದು ಕೇಂದ್ರೀಕೃತ ಯೋಜನಾ ಪದ್ಧತಿ ಅಳವಡಿಸಿಕೊಂಡು ಸಮಗ್ರ ಬೆಳೆವಣಿಗೆಯ ಯೋಜನೆಗಳನ್ನು ರೂಪಿಸಲಾಯಿತು. ಇದೂ ದಯನೀಯವಾಗಿ ಸೋಲು ಕಂಡಿತು. ಯಾಕೆಂದರೆ ಈ ವಿಧಾನದ ಮುಖ್ಯ ಲಕ್ಷಣ, ಪ್ರಭುತ್ವವು ಇದನ್ನು ಬಂಡವಾಳ ಶೇಖರಣೆಯ ಸಾಧನವಾಗಿ ಬಳಸಿಕೊಳ್ಳುವ ಚಿಂತನೆಯ ಮೇಲೆ ಆಧಾರಿತವಾಗಿತ್ತು. ಅದು ಲಕ್ಷಾಂತರ ಜನರನ್ನು ಹಳ್ಳಿಗಳಿಂದ ನಗರದ ಪ್ರದೇಶಗಳಿಗೆ ತಳ್ಳಿತು. ಕೈಗಾರಿಕಾ ಉತ್ಪಾದನೆ ಇದರ ಮುಖ್ಯ ಚಾಲನ ಶಕ್ತಿಯಾಗಿತ್ತು. ಆದರೆ ಅದು ಈ ಪ್ರಕ್ರಿಯೆಯ ಮುಖ್ಯ ಚಾಲನಾ ಶಕ್ತಿಯಾಗಿ ಉಳಿಯಲಿಲ್ಲ ಯಾಕೆಂದರೆ ಈ ದಿಸೆಯಲ್ಲಿ ಅದು ವಿಫಲವಾಯಿತು. ಅದರಿಂದಾಗಿ ಹೊಸ ದಾರಿಗಳು ತೆರೆದುಕೊಂಡವು. ಹೀಗಿದ್ದರೂ ನಗರಗಳು ಲಕ್ಷಾಂತರ ಜನರನ್ನು ತಮ್ಮ ತೆಕ್ಕೆಗೆ ಸೆಳೆದುಕೊಂಡವು. ಅನೌಪಚಾರಿಕ ವಲಯಗಳು ಕೇಂದ್ರಕ್ಕೆ ಬಂದು, ನಗರ ಯೋಜನೆಗಳು ದಯನೀಯವಾಗಿ ಸೋಲು ಕಂಡವು.

ತೊಂಬತ್ತರ ದಶಕದಲ್ಲಿ ಕಟುವಾದ ಖಾಸಗೀಕರಣವನ್ನು ಆರಂಭಿಸಲಾಯಿತು. ಜಾಗತಿಕ ನಗರಗಳನ್ನು ಮಾದರಿಯಾಗಿಟ್ಟುಕೊಂಡು ಅಭಿವೃದ್ಧಿ ಪ್ರಕ್ರಿಯೆಗಳನ್ನು ಕಟ್ಟಲಾಯಿತು. ಸಮಗ್ರ ಯೋಜನೆಗಳನ್ನು ರೂಪಿಸುವ ಜವಾಬ್ದಾರಿಗಳನ್ನು ಪಾಶ್ಚಿಮಾತ್ಯ ಸರ್ಕಾರಿ ಪ್ರಾಯೋಜಿತ ದೈತ್ಯ ಸಂಸ್ಥೆಗಳಿಗೆ ಮತ್ತು ಸಮಾಲೋಚಕ ಸಂಸ್ಥೆಗಳಿಗೆ ಕೊಡಲಾಯಿತು. ಅವು ಸಾಮಾಜಿಕ ವಸತಿ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ಇತ್ಯಾದಿ ಪರಿಕಲ್ಪನೆಗಳಿಗೆ ತಿಲಾಂಜಲಿ ಬಿಟ್ಟು ರಿಯಲ್ ಎಸ್ಟೇಟ್ ಗೆ ಪ್ರಾಮುಖ್ಯತೆ ನೀಡಿದವು, ನಗರಗಳನ್ನು ವಸತಿ, ಮನೋರಂಜನೆ ಮತ್ತು ಭವಿಷ್ಯದ ಕನಸುಗಳ ಕೇಂದ್ರಗಳಾಗಿಸುವಬದಲು, ಅವುಗಳನ್ನು'ಬೆಳವಣಿಗೆಯ ಇಂಜಿನ್' ಗಳನ್ನಾಗಿಸಿ,ಸ್ಪರ್ಧಾತ್ಮಕಗೊಳಿಸಿದವು. ಸಮಗ್ರ ನಗರದ ಧೋರಣೆಯ ಬದಲಾಗಿ, ಒಂದು ಯೋಜನೆಯನ್ನು ರೂಪಿಸುವುದೇ ಮಾರ್ಗದರ್ಶಕ ಸೂತ್ರವಾಯಿತು. ಜವಾಹರಲಾಲ್ ರಾಷ್ಟ್ರೀಯ ನಗರ ಪುನರುಜ್ಜೀವನ ಮಿಷನ್, ಸ್ಮಾರ್ಟ್ ಸಿಟಿ ಮಿಷನ್ ಇತ್ಯಾದಿ "ಮಿಷನ್ ವಿಧಾನ" (ಒಂದು ಗುರಿಗೆ ಸೀಮಿತ ಯೋಜನೆ)ಬಳಕೆಗೆ ಬಂತು.

ಈ ಹಿನ್ನೆಲೆಯಲ್ಲಿ 1985 ರಲ್ಲಿ ಸ್ಥಾಪಿಸಲಾದ'ನಗರ ಕಮಿಷನ್' ಅನ್ನು ಮತ್ತೆ ಅವಲೋಕಿಸಬೇಕು. ಚೂರು ಪಾರುಗಳ ವಿಧಾನ ಪ್ರಯೋಜನಕಾರಿಯಲ್ಲ. ಇವು ಯಾವುದೇ ಜಿಗಿತ ಕೊಡುವುದಿಲ್ಲ. ಆದುದರಿಂದಲೇ ರಾಷ್ಟ್ರ ಮಟ್ಟದಲ್ಲಿ ಹಾಗೆಯೇ ರಾಜ್ಯ ಮಟ್ಟದಲ್ಲೂ ಸಹನಗರ ಕಮಿಷನ್ ನ ಅವಶ್ಯಕತೆ ಇದೇ ಎನ್ನುವುದು. ನಗರೀಕರಣದ ವಾಸ್ತವಿಕಮಾದರಿಗಳನ್ನು ಅರ್ಥ ಮಾಡಿಕೊಳ್ಳಲು ಇವು ಅವಶ್ಯ. ಜನರ ಗುಳೆ ಇದರಲ್ಲಿ ಪ್ರಮುಖವಾದ ವಿಷಯ. ವಸತಿ ಪಡ್ಡತಿಗಳು ಇನ್ನೊಂದು. ಮಾಹಿತಿ ತಂತ್ರಜ್ಞಾನ ಸಬಲೀಕರಣದ ಮತ್ತೂ ಅಬಲೀಕರಣದ ಸಾಧನವಾಗುತ್ತದೆ. ಇಡೀ ಪ್ರಕ್ರಿಯೆಯನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳುವ ಅವಶ್ಯಕತೆಯಿದೆ. ನಗರೀಕರಣ ಪ್ರಕ್ರಿಯೆಯನ್ನು ಯಾವುದೋ ಮಿಷನ್ ವಿಧಾನಕ್ಕೆ ಇಳಿಸುವುದು ಸಾಧ್ಯೊವಿಲ್ಲ. ಈ ವರೆಗಿನ ಎಲ್ಲ ಮಿಷನ್ನುಗಳು- AMRUT(Atal Mission for Rejuvenation and Urban Transformation), HRIDAY (National Heritage City Development and Augmentation Yojana), PMAY Pradhan Mantri Awas Yojana–ವಿಫಲವಾಗಿವೆ ಮತ್ತು ಇನ್ನು ಮುಂದೆಯೂ ವಿಫಲವಾಗುತ್ತವೆ; ಏಕೆಂದರೆ ಅವು ವಾಸ್ತವದಿಂದ ಬಹು ದೂರವಾಗಿವೆ.

ಹಾಗೆಯೇ ನಗರಗಳಲ್ಲಿ ಆಡಳಿತ ಗಬ್ಬೆದ್ದು ಹೋಗಿದೆ. ನಗರಗಳಿಗೆ ವರ್ಗಾಯಿಸಬೇಕಾಗಿದ್ದ 12 ನೇ ಅನುಚ್ಛೇದದ 18 ವಿಷಯಗಳನ್ನು ಇನ್ನೂ ಮಾಡಿಲ್ಲ. ಚುನಾಯಿತ ಪ್ರತಿನಿಧಿಗಳ ಬದಲು ನಗರ ಆಡಳಿತದಲ್ಲಿ ನಿರ್ವಹಣಾ ಅಧಿಕಾರಿಗಳಿರಬೇಕು ಎಂಬ ಚರ್ಚೆ ರಾಜಕೀಯ ವಲಯಗಳಲ್ಲಿದೆ. ಹಣಕಾಸಿನ ವಿನ್ಯಾಸದಲ್ಲಿ ಅತೀ ಕೇಂದ್ರೀಕರಣ ಇದೇ ಎಂಬುದು ಹದಿನೈದನೇ ಹಣಕಾಸು ಕಮಿಷನ್ನಿನ ಶಿಫಾರಸುಗಳಿಂದ ಸ್ಪಷ್ಟವಾಗಿದೆ. ಅ ಶಿಫಾರಸ್ಸಿನ ಪ್ರಕಾರ ನಗರಗಳಿಗೆ ಕೊಡುವ ಅನುದಾನ ಆಸ್ತಿ ತೆರಿಗೆ ಸಂಗ್ರಹಣಾ ಸಾಮರ್ಥ್ಯಕ್ಕೆ ಅನುಗುಣವಾಗಿರಬೇಕು'ಅದು ರಾಜ್ಯದ ಜಿ.ಎಸ್.ಟಿ. ಹೆಚ್ಚಳಕ್ಕೆ ಅನುಗುಣವಾಗಿ ಇರಬೇಕು ಎಂಬುದು. ನಗರಗಳ ಸಂದರ್ಭದಲ್ಲಿ ಉಗಮಿಸುತ್ತಿರುವ ಬಹಳ ಸಂಕೀರ್ಣ ಮತ್ತು ಜಟಿಲ ಪ್ರಕ್ರಿಯೆಗಳಿವು.

ಈ ಹಿನ್ನೆಲೆಯಲ್ಲಿ ಕೇರಳ ಸರಕಾರದ ನಗರ ಕಮಿಷನ್ನಿನ ರಚನೆಯನ್ನು ಗಮನಿಸಬೇಕು. ಕೇರಳ ಇಂತಹ ಸಂಕೀರ್ಣ ಸಂದರ್ಭವನ್ನು ನಿರ್ವಹಿಸಲು ಈ ನಗರ ಕಮಿಶನ್ ನೀತಿಯನ್ನು ಜಾರಿಗೆ ತಂದಿದೆ ಎಂಬುದು ಗಮನಾರ್ಹ. ಇದರಲ್ಲಿ ಸದಸ್ಯರುಗಳಾಗಿ ಡಬ್ಲಿನ್ ನಲ್ಲಿ ನಗರ ಪ್ರಾಧ್ಯಾಪಕರಾಗಿರುವ ಎಮ್. ಸತೀಶಕುಮಾರ, ಇತಿಹಾಸಕಾರ್ತಿ ಜಾನಕಿ ನಾಯರ್, ನವ ದೆಹಲಿಯ ಯೋಜನೆ ಮತ್ತು ಶಿಲ್ಪಕಲೆಯ ಸಂಸ್ಥೆಯ ನಗರ ವಿನ್ಯಾಸ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಆದ ಕೆ.ಟಿ. ರವೀಂದ್ರನ್ ಇದ್ದಾರೆ,

ನೀತಿ ಆಯೋಗದ ಪ್ರಕಾರ ಕೇರಳದಲ್ಲಿ ಈಗ ಇರುವ ಶೇ.90 ರಷ್ಟು ನಗರವಾಸಿ ಜನರ ನಗರೀಕರಣದ ಸವಾಲುಗಳನ್ನು ನಿರ್ವಹಿಸುವುದು, ಕಮಿಷನ್ನಿನ ಮುಂದಿನ 12 ತಿಂಗಳುಗಳ ಕಾರ್ಯಭಾರ, ಮುಂದಿನ 25 ವರ್ಷಗಳ ಕಾಲ ಕೇರಳದಲ್ಲಿನ ನಗರೀಕರಣದ ನಕ್ಷೆ ಯನ್ನು ತಯಾರಿಸಿ ಅಭಿವೃದ್ಧಿಗೆ ಪಥ ರೂಪಿಸುವುದು ಸಹ ಕಮಿಶನ್ ನ ಪಾತ್ರದ ಭಾಗ. ಜಾಗತಿಕ ಮತ್ತು ರಾಷ್ಟ್ರೀಯ ಸ್ತರಗಳಲ್ಲಿ ನಗರೀಕರಣದ ಪ್ರಕ್ರಿಯೆಯನ್ನು ಬೇರ್ಪಡಿಸಿ ಕೇರಳದ ನಗರ ಅಭಿವೃದ್ಧಿಯನ್ನು ನೋಡುವುದು ಸಾಧ್ಯವಿಲ್ಲ, ಆ ಕಾರಣ ಅವುಗಳ ಬಗೆಗೂ ಸರಿಯಾದ ಅಂದಾಜುಗಳನ್ನು ಮಾಡಬೇಕಿದೆ.

ಬೇರೆ ರಾಜ್ಯಗಳಿಗೆ ದಾರಿದೀಪ

ರಾಷ್ಟ್ರೀಯ ಮಟ್ಟದಲ್ಲಿ ಇಂತಹ ಕಮಿಷನ್ನಿನ ಅವಶ್ಯಕತೆ ಇತ್ತು. ಹೇಗೆ ಇರಲಿ, ಅಂತಹ ರಾಷ್ಟ್ರೀಯ ಕಮಿಷನ್ ಇಲ್ಲದೆ ಇರುವಾಗಲೂ ಕೇರಳದ ಈ "ನಗರ ಕಮಿಷನ್" ಅತಿ ಹೆಚ್ಚು ನಗರೀಕೃತ ಜನರಿರುವ ಗುಜರಾತ್, ಮಹಾರಾಷ್ಟ್ರ, ತಮಿಳು ನಾಡು, ಮತ್ತು ಪಂಜಾಬ್ ಗಳಿಗೆ ದಾರಿದೀಪವಾಗಲಿದೆ. ಈ ರಾಜ್ಯಗಳಿಗೆ ಈ ಕಮಿಷನ್ನಿನ ಪಾಠಗಳು ಉಪಯುಕ್ತವಾಗಲಿವೆ.

ಲೇನ್‌ನಲ್ಲಿ ಕನಿಷ್ಠ ಸಣ್ಣ ವಾಹನಗಳು ಮತ್ತು ಇನ್ನೊಂದು ಲೇನ್‌ನಲ್ಲಿ ದೊಡ್ಡ ವಾಹನಗಳ ವ್ಯವಸ್ಥೆ ಇದ್ದರೆ ಸ್ವಲ್ಪ ಮಟ್ಟಿಗೆ ಅಪಘಾತಗಳನ್ನು ಕಡಿಮೆ ಮಾಡಬಹುದು.

ಶೇ. 62ರಷ್ಟು ರಸ್ತೆ ಅಪಘಾತಗಳು ರಾಷ್ಟ್ರೀಯ ಹೆದ್ದಾರಿಗಳಲ್ಲಿ

ಸರ್ಕಾರದ ಅಂಕಿಅಂಶಗಳ ಪ್ರಕಾರ, ದೇಶದ ರಸ್ತೆಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಕೇವಲ ಶೇ. 2 ನ್ನು ಹೊಂದಿವೆ. ಆದರೆ ಶೇ. 62ರಷ್ಟು ರಸ್ತೆ ಅಪಘಾತಗಳು ಈ ರಸ್ತೆಗಳಲ್ಲಿ ಸಂಭವಿಸುತ್ತಿವೆ. ಈ ಕಾರಣಕ್ಕೆ ನ್ಯಾಷನಲ್ ಪರ್ಮಿಟ್ ಲಾರಿಗಳಿಗೆ ಇಬ್ಬರು ಚಾಲಕರು ಇರಬೇಕೆಂಬ ನಿಯಮ ಇತ್ತು ಈ ನಿಯಮವನ್ನು ಸರ್ಕಾರ ಇತ್ತೀಚೆಗೆ ತೆಗೆದುಹಾಕಿದೆ. ದಿನಗಟ್ಟಲೆ ವಾಹನ ಚಲಾಯಿಸುವುದು ಎಷ್ಟು ಅಪಾಯಕಾರಿ? ಕನಿಷ್ಠ ಪಕ್ಷ ರಸ್ತೆ ಮಧ್ಯದಲ್ಲಿ ವಿಶ್ರಾಂತಿ, ಉಪಹಾರ/ಊಟದ ವ್ಯವಸ್ಥೆಯನ್ನೂ ಸರ್ಕಾರ ವ್ಯವಸ್ಥಿತವಾಗಿ ಮಾಡುತ್ತಿಲ್ಲ. ಇವು ಕೂಡ ಅಪಘಾತಕ್ಕೆ ಕಾರಣ.

ವಿಚಾರಣೆಯ ಕಾರ್ಯವಿಧಾನ

ಅಮೆರಿಕ, ಬ್ರಿಟನ್ ಮತ್ತಿತರ ದೇಶಗಳಲ್ಲಿ ರಸ್ತೆ ಅಪಘಾತಗಳ ಪ್ರಾಥಮಿಕ ತನಿಖೆಗೆ ಪೊಲೀಸರ ಜತೆಗೆ ತಜ್ಞರ ಸಮಿತಿ ಇದೆ. ಅಪಘಾತಗಳ ನಿಜವಾದ ಕಾರಣಗಳ ನಿಷ್ಪಕ್ಷಪಾತ ಪರೀಕ್ಷೆಯ ಆಧಾರದ ಮೇಲೆ ಚಾರ್ಜ್ ಶೀಟ್ ಸಲ್ಲಿಸಲಾಗುತ್ತದೆ. ಅದಕ್ಕೆ ತಕ್ಕಂತೆ ಶಿಕ್ಷೆಗಳಿವೆ. ಆದರೆ ನಮ್ಮ ದೇಶದಲ್ಲಿ ಪೊಲೀಸರು ಹೇಳುವುದೇ ವೇದವಾಕ್ಯ. ಚಾಲಕನೇ ಹೊಣೆ ಎಂದು ಚಾರ್ಜ್ ಶೀಟ್ ನಲ್ಲಿ ತಿಳಿಸಲಾಗುತ್ತದೆ. ಇವೆಲ್ಲವನ್ನು ಬಿಟ್ಟು ಚಾಲಕರನ್ನೇ ಆರೋಪಿಗಳನ್ನಾಗಿ ಮಾಡುವುದರಿಂದ ಅಪಘಾತಗಳು ಕಡಿಮೆಯಾಗುವುದಿಲ್ಲ. ಮುಂದಿನ ಶಿಕ್ಷೆಗೆ ಹೆದರಿ ಡ್ರೈವರ್ ಆಗಲು ಒಪ್ಪುವುದಿಲ್ಲ. ದೊಡ್ಡ ವಾಹನಗಳಿಗೆ ಅಗತ್ಯವಿರುವ ಚಾಲಕರು ಈಗಾಗಲೇ ಶೇ. 30ರಷ್ಟು ಕಡಿಮೆ ಇದ್ದಾರೆ ಎಂದು ಸರ್ಕಾರದ ಅಂಕಿಅಂಶಗಳು ತೋರಿಸುತ್ತವೆ.

ಸರಕಾರ ಅಪಘಾತಗಳ ಮೂಲ ಕಾರಣಗಳನ್ನು ಪರಿಶೀಲಿಸಿ, ಸಮಸ್ಯೆ ಪರಿಹರಿಸಿ ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಅದಕ್ಕಾಗಿ ಜಾಗೃತರು ಸರಕಾರದ ಮೇಲೆ ಒತ್ತಡ ಹೇರಬೇಕು. ಅದಕ್ಕೆ ನಾವೆಲ್ಲರೂ ತಯಾರಾಗಬೇಕು. ಜನವಿರೋಧಿಯಾಗಿರುವ ಈ BNS–2023 ರ ವಿರುದ್ಧ ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ಹೋರಾಟ ಆರಂಭವಾಗಿದೆ. ಕರ್ನಾಟಕದಲ್ಲೂ ಇದನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ರಾಜ್ಯ ಸರ್ಕಾರವು ಈ ಕಾಯ್ದೆಯನ್ನು ಜಾರಿ ಮಾಡುವುದಿಲ್ಲ ಎಂದು ಹೇಳುವುದು ಅಗತ್ಯವಿದೆ. ಏಕೆಂದರೆ ಸಾರಿಗೆ ಕ್ಷೇತ್ರವು ಸಂವಿಧಾನದ ಸಮವರ್ತಿ ಪಟ್ಟಿಯಲ್ಲಿದೆ. ಅಖಿಲ ಭಾರತ ರಸ್ತೆ ಸಾರಿಗೆ ವರ್ಕರ್ಸ್ ಫೆಡರೇಶನ್ (AIRTWF) ನ ಕರ್ನಾಟಕ ಘಟಕವು, ಎಲ್ಲಾ ಚಾಲಕರ ಎಲ್ಲಾ ಸಂಘಟನೆಗಳನ್ನು ಒಟ್ಟಿಗೆ ಸೇರಿಸಿ ಒಗ್ಗಟ್ಟಿನಿಂದ ಹೋರಾಡುವ ಪ್ರಯತ್ನದಲ್ಲಿ ಕೆಲಸ ಮಾಡುತ್ತಿದೆ.

–ಸಿಚಿ

‘ಸೌಹಾರ್ದ ಪರಂಪರೆ ಮತ್ತು ಸಮಕಾಲೀನತೆ’

‘ಸೌಹಾರ್ದ ಕರ್ನಾಟಕ’ದ ಯಶಸ್ವಿ ರಾಜ್ಯ ಸಮಾವೇಶ

ಸೌಹಾರ್ದತೆ ಮತ್ತು ಸಮಾನತೆ ಒಟ್ಟೊಟ್ಟಿಗೆ ಹೋಗಬೇಕಿದೆ. –ಪ್ರೊ. ಬರಗೂರು ರಾಮಚಂದ್ರಪ್ಪ

1970–80 ರ ದಶಕಗಳಲ್ಲಿ ಮತ್ತು 20 ನೇ ಶತಮಾನದ ಕೊನೆಯ ಭಾಗದವರೆಗೂ ಜನಚಳುವಳಿಗಳಿಗೆ ಸಮಾನತೆ ಆದ್ಯತೆಯಾಗಿತ್ತು. 1991–1992 ರ ನಂತರ ಸೌಹಾರ್ದತೆ ಆದ್ಯತೆಯನ್ನು ಪಡೆದುಕೊಂಡಿದೆ. ಇದರ ಅರ್ಥ ಸಮಾನತೆ ಆದ್ಯತೆ ಅಲ್ಲ ಅಂತ ಅಲ್ಲ. ನಮ್ಮ ಆದ್ಯತೆ ಸೌಹಾರ್ದತೆ ಮತ್ತು ಸಮಾನತೆ ಎರಡೂ ಹೌದು. ಸೌಹಾರ್ದತೆ ಸ್ಥಾಪನೆ ಆಗಬೇಕಾದರೆ ಮೊದಲು ಸಮಾನತೆ ಬರಬೇಕು. ಸೌಹಾರ್ದತೆ ಬಗೆಗೆ ಹೆಚ್ಚು ಮಾತನಾಡಬೇಕಾದ ಅನಿವಾರ್ಯತೆಯನ್ನು ಕೆಲವು ಘಟನೆಗಳು ಬೆಳವಣಿಗೆಗಳು ಸೃಷ್ಟಿಮಾಡಿವೆ. ಆದರೆ ಸೌಹಾರ್ದತೆ ಮತ್ತು ಸಮಾನತೆ ಒಟ್ಟೊಟ್ಟಿಗೆ ಹೋಗಬೇಕಿದೆ. ಶಾಂತಿ ನೆಲೆಸಬೇಕಿದೆ ಎಂದರೆ, ಸರ್ವ ಜನಾಂಗದ ಶಾಂತಿಯ ತೋಟ ಎಂದರೆ ನಮಗೆ ಕ್ರಾಂತಿ ಬೇಕಿಲ್ಲ ಎಂದು ಅರ್ಥವಲ್ಲ. ಅಂತಿಮ ಆಶಯವನ್ನು ತಲುಪಲು ತಾತ್ಕಾಲಿಕ ಸವಾಲುಗಳು ಮತ್ತು ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನು ದಾಟಿಕೊಂಡೇ ನಾವು ಮುಂದೆ ಹೋಗಬೇಕಿದೆ ಎಂದು ಹಿರಿಯ ಚಿಂತಕರು, ಬಂಡಾಯ ಸಾಹಿತಿಗಳೂ ಆದ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಹೇಳಿದರು.

ಜನವರಿ 11, 2024 ರಂದು ಬೆಂಗಳೂರಿನ ಎನ್.ಜಿ.ಒ.ಹಾಲ್ನ ಮೇರಿ ದೇವಾಸಿಯ ಸಭಾಂಗಣದಲ್ಲಿ ‘ಸೌಹಾರ್ದ ಕರ್ನಾಟಕ’ ಸಂಘಟಿಸಿದ ‘ಸೌಹಾರ್ದ ಪರಂಪರೆ ಮತ್ತು ಸಮಕಾಲಿನತೆ’ ರಾಜ್ಯ ಸಮಾವೇಶದ ಆಶಯ



ಭಾಷಣವನ್ನು ಮಾಡಿದ ಪ್ರೊ. ಬರಗೂರು ಅವರು, “ಸಮಾನತೆಯ ಸಮಾಜದ ನಿರ್ಮಾಣದಲ್ಲಿ ಸೌಹಾರ್ದತೆ ಪಾತ್ರ ದೊಡ್ಡದಿದೆ. ಪರಂಪರೆ ಎಂದರೆ ಜಡ ಸಂಪ್ರದಾಯ ಅಲ್ಲ, ಪರಂಪರೆ ನಿರಂತರ ಚಲನೆ ಹೊಂದಿದ್ದು, ಕಾಲ ಕಾಲಕ್ಕೆ ಕೆಡುಕುಗಳನ್ನು ಕಳೆದುಕೊಂಡು ಒಳಿತುಗಳನ್ನು ಒಳಗೊಳ್ಳುತ್ತಾ ವಿಕಾಸ ಹೊಂದುತ್ತಾ ಹೋಗುವುದು ಪರಂಪರೆ ಎಂದರು.

ಸೈದ್ಧಾಂತಿಕ ಸೌಹಾರ್ದತೆ ಬೇಕಿದೆ

ಕೋಮುವಾದ ರಾಜಕೀಯ ಪಕ್ಷಗಳ ಮೇಲಾಟವಾಗಿದ್ದು, ಯಾರು ಯಾವಾಗ ಜಾತಿವಾದಿ ಆಗುತ್ತಾರೆ, ಯಾವಾಗ ಕೋಮುವಾದಿ ಆಗುತ್ತಾರೆ ಎಂದು ಹೇಳುವುದು ಕಷ್ಟವಾಗಿದೆ. ಕೋಮುವಾದ ವಿರೋಧಿಸುವವರು ಜಾತಿವಾದವನ್ನು ವಿರೋಧಿಸುತ್ತಾರಾ ಎಂಬೆಲ್ಲ ಪ್ರಶ್ನೆಗಳಿವೆ. ಹಾಗಾಗಿ ದ್ವೇಷ ಎಂಬುದಕ್ಕೆ ಕೊನೆ ಇಲ್ಲ. ಪರಂಪರೆ ಪ್ರಜ್ಞೆ ಹಾಗೂ ಪ್ರಗತಿಪರ ಪ್ರಜ್ಞೆ ಒಟ್ಟಿಗೆ ಸಾಗಬೇಕಿದೆ. ಸೈದ್ಧಾಂತಿಕ ಸೌಹಾರ್ದತೆ ಬೇಕಿದೆ. ಅದಕ್ಕಾಗಿ ಅಂಬೇಡ್ಕರ್, ಗಾಂಧಿ, ಕಾರ್ಲ್ ಮಾರ್ಕ್ಸ್, ಮೌಲಾನಾ ಅಬ್ದುಲ್ ಕಲಾಂರವರ ವಿಚಾರಗಳನ್ನು ಯುವಜನತೆ ಓದಿಕೊಳ್ಳಬೇಕಿದೆ ಎಂದು ಅವರು ಹೇಳಿದರು.

ಪಾಪ ಪ್ರಜ್ಞೆ ಮತ್ತು ಜಾಗೃತ ಪ್ರಜ್ಞೆಗಳು ಬಹಳ ಮಹತ್ವದ್ದಾಗಿದೆ. ಮೇಲ್ವರ್ಗ, ಮೇಲ್ವರ್ಣಗಳಲ್ಲಿ ಹುಟ್ಟಿ, ನನ್ನ ವರ್ಗ, ನನ್ನ ವರ್ಣ ಈ ಸಮಾಜಕ್ಕೆ ಅನ್ಯಾಯ ಮಾಡಿದೆ, ನಾನು ಅನ್ಯಾಯದ ವಿರುದ್ಧ ಹೋರಾಡಬೇಕು ಎಂದು ಶ್ರಮಿಸಿದ ಚೇತನಗಳು ಸಾಕಷ್ಟು ಇವೆ. ಇದು ಪಾಪ ಪ್ರಜ್ಞೆ, ನಾನು ತಳ ಸಮುದಾಯದಲ್ಲಿ ಹುಟ್ಟಿದ್ದೇನೆ, ನೋವನ್ನು ಅನುಭವಿಸಿದ್ದೇನೆ, ನನ್ನ ಸಮುದಾಯ ಶೋಷಣೆ ಗುರಿಯಾಗಿದೆ. ನಾನು ಇದರ ವಿರುದ್ಧ ನಿಲ್ಲಬೇಕು ಎಂಬುದು ಜಾಗೃತ ಪ್ರಜ್ಞೆಯಾಗಿದೆ ಎಂದು ಬರಗೂರು ಅವರು ಹೇಳಿದರು.



ಡಾ.ಕೆ ಮರುಳಸಿದ್ದಪ್ಪ

ವರ್ತಮಾನದ ವಿವೇಕ ಭವಿಷ್ಯದ ಬೆಳಕು

ಇತಿಹಾಸಕಾರ ಡಿ.ಡಿ.ಕೊಸಾಂಬಿಯವರ ಮಾತನ್ನು ಉಲ್ಲೇಖಿಸಿ ಮಾತನಾಡಿದ ಬರಗೂರು ಅವರು ನಾವು ವರ್ತಮಾನದ ಬೆಳಕಿನಲ್ಲಿ ಭೂತವನ್ನು ನೋಡುವುದು, ಭೂತಕಾಲದ ಅನುಭವದಿಂದ ವರ್ತಮಾನವನ್ನು ವ್ಯಾಖ್ಯಾನಿಸಿಕೊಳ್ಳುವುದು ಭೂತ ಮತ್ತು ವರ್ತಮಾನಗಳನ್ನು ಮೇಳೈಸಿಕೊಂಡು ಭವಿಷ್ಯದ ಬೆಳಕನ್ನು ಕಾಣುವುದು ಅಗತ್ಯ ಎಂದೂ ಹೇಳಿದರು.

ಸಾಹಿತಿಗಳು ಜನರ ಮಧ್ಯವರ್ತಿಗಳಾಗಿ ಕೆಲಸ ಮಾಡಬೇಕಿದೆ

ರಾಜ್ಯದ ಮತ್ತು ದೇಶದ ಸೌಹಾರ್ದತೆಗೆ ಈಗ ಧಕ್ಕೆ ಬಂದಿದೆ. ರಾಮ ಪ್ರಸಾದ್ ಬಿಸ್ಮಿಲ್, ಅಶ್ಫಾಕ್ ಉಲ್ಲಾ ಖಾನ್, ಸಾವಿತ್ರಿಬಾಯಿ ಫುಲೆ, ಫಾತೀಮಾ ಶೇಕ್ ಇವರು ಸೌಹಾರ್ದ ಭಾರತದ ಸಂಕೇತಗಳು. ಧರ್ಮದ ಕಾರಣಕ್ಕಾಗಿ ಉಂಟಾಗಿರುವ ದ್ವೇಷವನ್ನು ವಿರೋಧಿಸೋಣ. ಪರಂಪರೆಯನ್ನು ಉಳಿಸಲು ಜನರ ನಡುವೆ ಸಾಗಬೇಕಿದೆ. ಸಾಹಿತಿಗಳು ಜನರ ಮಧ್ಯವರ್ತಿಗಳಾಗಿ ಕೆಲಸ ಮಾಡಬೇಕಿದ್ದು, ಸೌಹಾರ್ದ ಪರಂಪರೆಯ ಸತ್ಯಗಳನ್ನು ತಿಳಿಸುವ ದೊಡ್ಡ ಜವಾಬ್ದಾರಿ ಸಾಹಿತಿಗಳ ಮೇಲಿದೆ ಎಂದು ಪ್ರೊ. ಬರಗೂರು ರಾಮಚದ್ರಪ್ಪನವರು ಕರೆ ನೀಡಿದರು.

ಭ್ರಾತೃತ್ವದಿಂದ ಬಾಳಬೇಕು; ನ್ಯಾ. ಎಚ್.ಎನ್. ನಾಗಮೋಹನ ದಾಸ್

“ಭಾರತದಲ್ಲಿ ಅನೇಕ ಧರ್ಮಗಳಿವೆ. ಅನೇಕ ಜಾತಿಗಳು, ಉಪಜಾತಿಗಳು ಇವೆ. ಎಲ್ಲಾ ಜಾತಿಯ ಜನ, ಎಲ್ಲಾ ಧರ್ಮದ ಜನ, ಹೆಗಲಿಗೆ ಹೆಗಲು ಕೊಟ್ಟು ಬ್ರಿಟಿಷರ ವಿರುದ್ಧ ಹೋರಾಡಿದ್ದಾರೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಬೌದ್ಧ, ಜೈನ ಎಲ್ಲ ಧರ್ಮದ ಜನರು ರಕ್ತ ಸುರಿಸಿ, ಹುತಾತ್ಮರಾಗಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಸ್ವಾತಂತ್ರ್ಯ ಹೋರಾಟದ ಗುರಿಗಳನ್ನು ಅನುಷ್ಠಾನಗೊಳಿಸಲು ದೇಶಕ್ಕೆ ಒಂದು ಸಂವಿಧಾನ ಅಗತ್ಯವಾಗಿತ್ತು. ಜಗತ್ತಿನಲ್ಲೇ ಅತಿ ದೊಡ್ಡದಾದ ➚



ನ್ಯಾ. ಎಚ್.ಎನ್. ನಾಗಮೋಹನ ದಾಸ್





ಜನವರಿ 30ರಂದು ರಾಜ್ಯದೆಲ್ಲೆಡೆ ಮಾನವ ಸರಪಳಿ

ಸೌಹಾರ್ದವನ್ನು ಉಳಿಸುವುದಕ್ಕಾಗಿ ‘ಹೇ ರಾಮ್’ ಎನ್ನುತ್ತಾ ಪ್ರಾಣ ತೆತ್ತ ಗಾಂಧೀಜಿ ಹತ್ಯೆಯಾದ ಜನವರಿ 30ರಂದು ರಾಜ್ಯದೆಲ್ಲೆಡೆ ನಾಡಿನ ಸೌಹಾರ್ದ ಪರಂಪರೆಯನ್ನು ಮೇಲೆತ್ತಿ ಹಿಡಿಯುವ ಸೌಹಾರ್ದ ಮಾನವ ಸರಪಳಿಯಲ್ಲಿ, ಲಕ್ಷಾಂತರ ಜನರನ್ನು ಅಣಿ ನೆರೆಸಬೇಕೆಂದು ‘ಸೌಹಾರ್ದ ಕರ್ನಾಟಕ’ ರಾಜ್ಯ ಸಮಾವೇಶದಲ್ಲಿ ನಿರ್ಣಯ ಮಾಡಿದೆ.

ಸಮಾವೇಶದಲ್ಲಿ ಡಾ. ಎಸ್. ವೈ ಗುರುಶಾಂತ್ ಅವರು ಈ ನಿರ್ಣಯ ಮಂಡಿಸಿದರು. ನಿರ್ಣಯ ಕೆಳಗಿನಂತಿದೆ;

ಬೆಂಗಳೂರಿನ ಕರಗ ಕಾಟನ್ ಪೇಟೆಯ ತವಕ್ಕಲ್ ಮಸ್ತಾನ್ ದರ್ಗಾಕ್ಕೆ ಬಂದು ಓದಿಕೆ ಮಾಡಿಸಿದ ಮೇಲೆಯೇ ಆರಂಭ. ಮಕ್ಕಳ ವೈದ್ಯನಾದ ಮಸ್ತಾನ್ ದರ್ಗಾದಲ್ಲಿ ಮಕ್ಕಳನ್ನು ಬಗಲಲ್ಲಿ ಹೊತ್ತು ಬರುವ ತಾಯಂದಿರ ಧರ್ಮ ಯಾವುದು? ಬಳ್ಳಾರಿ– ಕೊಪ್ಪಳದ ಜಿಲ್ಲೆಯ ನಡುವಿನ ಪ್ರಾಚೀನ ಮಾತೃ ದೇವತೆ ಹುಲಿಗೆಮ್ಮನಿಗೆ ಸೈಯದ್ ಸರ್ಮದ್ ಹುಸ್ಸೈನಿ ಚಿಸ್ತಿ ಹೊನ್ನೂರಪ್ಪನೆಂದು ಹೆಸರಾಗಿ, ಅಣ್ಣನೆಂದು ಪರಿಗಣಿತನಾದ ಅಚ್ಚರಿ, ಕಲಬುರಗಿಯ ಖಾಜಾ ಬಂದೇ ನವಾಜ್ ಮತ್ತು ಶರಣ ಬಸಪ್ಪಾ ಅಪ್ಪನಿಗೂ, ಇಳಕಲ್ಲಿನ ಪ್ರಸಿದ್ಧ ಮಹಾಂತಸ್ವಾಮಿ ಮಠಕ್ಕೂ ಅಲ್ಲಿಯ ಮರ್ತುಜಾ ಖಾದ್ರಿಗೂ ಇರುವ ಆಪ್ತತೆ ಅಳೆಯಬಹುದೇ!

ಮುಸ್ಲಿಂ ಸಂತರು ಯಮನೂರಪ್ಪ, ಹೊನ್ನೂರಪ್ಪ, ಚಂದಪ್ಪ, ಸಾಹಿಬಣ್ಣಗಳಾಗಿ ಹಿಂದೂ ಮುಸ್ಲಿಂ ಸಮುದಾಯಗಳಿಗೆ ಸೇರಿದ ಹತ್ತಾರು ಸಾವಿರ ಜನರ ಹೆಸರಾಗಿ ಇಂದಿಗೂ ಮೆರೆಯುತ್ತಿರುವುದು ಹೇಗೆ ? ಒಬ್ಬನೇ ವ್ಯಕ್ತಿಗೆ ಈ ಕಡೆ ದೇವಾಲಯ, ಆ ಕಡೆ ದರ್ಗಾ ಎರಡನ್ನೂ ಕಟ್ಟಿ ಪೂಜೆ ಮಾಡುವುದು ಯಾವ ಪರಿಯ ಭಕ್ತಿ! ತಿಂತಿಣಿ ಮೋನಪ್ಪನ ಬಗ್ಗೆ, “ನೀನೇ ಮೌನನು, ನೀನೇ ಫಕೀರನು ಒಂದು ಚರಣಕೆ ಕೆರವು ಮತ್ತೊಂದು ಚರಣಕೆ ಪಾಪೋಸು” ಎಂದು ಹಾಡುವುದು, ಕೋಡೇಕಲ್ ಬಸವಣ್ಣ, ಸಾವಳಗಿ ಶಿವಲಿಂಗ, ಶಿರಹಟ್ಟಿ ಫಕೀರೇಶ, ಗುರುಗೋವಿಂದ ಭಟ್ಟ, ಶಿಶುನಾಳ ಶರೀಫ, ಏಳು ನೂರು ಖಲಂದರರಿಗೆ ಗುರುವಾದ, ಮಕ್ಕಾ ಯಾತ್ರೆ ಮಾಡಿದ ಮಳೆಯ ಮಲ್ಲೇಶ, ಮಂಟೇಸ್ವಾಮಿಯ ಜೊತೆಗಾರ, ಮಾರಿಯಮ್ಮಳಾದ ಮೇರಿಯಮ್ಮ ಲೆಕ್ಕ ಇಡಲಾಗದ ಎಷ್ಟೊಂದು ಪ್ರಸಂಗಗಳು ನಮ್ಮ ನಾಡಿನಲ್ಲಿ.

ಹೀಗೆ ಕರ್ನಾಟಕದ ಸೌಹಾರ್ದ ಪರಂಪರೆ ಮೈಸೂರು ಸಂಸ್ಥಾನ, ಕಲ್ಯಾಣ ಕರ್ನಾಟಕ, ಕರಾವಳಿ, ಮದ್ಯ ಕರ್ನಾಟಕ ಹೀಗೆ ಎಲ್ಲ ಪ್ರದೇಶಗಳ ಜನ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಆದರೆ ಈ ಸೌಹಾರ್ದ ಸಮಾವೇಶ ನಡೆಯುತ್ತಿರುವ ಇಂದು, ದಿನ ದಿನವೂ ದ್ವೇಷ ಹರಡುವ ಶಕ್ತಿಗಳು ಪ್ರತಿಯೊಂದು ಸಣ್ಣ, ದೊಡ್ಡ ಘಟನೆಗಳನ್ನೂ, ದೇಶ, ವಿದೇಶಗಳ ಸಾವಿರಾರು ವರ್ಷಗಳ ಸಂಬಂಧಗಳನ್ನೂ, ಧರ್ಮ ಧರ್ಮಗಳ ನಡುವಿನ ಕಾಳಗಗಳನ್ನಾಗಿ ಮಾಡುತ್ತಿವೆ. ಜನರು ತಂತಮ್ಮ ದೇವರಲ್ಲಿ ಇಟ್ಟಿರುವ ಭಕ್ತಿಯನ್ನು ದುರುಪಯೋಗ ಮಾಡುತ್ತಿವೆ. ನಮ್ಮ ದೇಶದ ಪ್ರಜೆಗಳಲ್ಲವೆಂದು ದೇಶದಿಂದಲೇ ಹೊರಹಾಕುವ ಪ್ರಯತ್ನಗಳು ಬಿರುಸಾಗುತ್ತಿವೆ.

ಇಂತಹ ಅಪಾಯಕರ ಸಂದರ್ಭದಲ್ಲಿ ಸೌಹಾರ್ದವನ್ನು ಉಳಿಸುವುದಕ್ಕಾಗಿ ಹೇ! ರಾಮ್!! ಎನ್ನುತ್ತಾ ಪ್ರಾಣ ತೆತ್ತ ಗಾಂಧೀಜಿಯವರು ಹತ್ಯೆಯಾದ ಜನವರಿ 30 ರಂದು ರಾಜ್ಯದೆಲ್ಲೆಡೆಯಲ್ಲಿ ನಾಡಿನ ಸೌಹಾರ್ದ ಪರಂಪರೆಯನ್ನು ಮೇಲೆತ್ತಿ ಹಿಡಿಯುವ ಸೌಹಾರ್ದ ಮಾನವ ಸರಪಳಿಯಲ್ಲಿ ಲಕ್ಷಾಂತರ ಜನರನ್ನು ಅಣಿ ನೆರೆಸಬೇಕೆಂದು ಈ ಸಮಾವೇಶವು ಕರೆ ನೀಡುತ್ತದೆ.

ಈ ಮಾನವ ಸರಪಳಿಯಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂಬಿತ್ಯಾದಿ ಬೇಧವಿಲ್ಲದೆ ಎಲ್ಲ ಜನ ಸಮುದಾಯ ಪಾಲ್ಗೊಂಡು ಸೌಹಾರ್ದವನ್ನು ಉಳಿಸಿ, ಬೆಳೆಸಬೇಕೆಂದು ಮನವಿ ಮಾಡುತ್ತದೆ. ಈ ಮಾನವ ಸರಪಳಿ ನಾಡಿನಾದ್ಯಂತ ಹಲವು ಸೌಹಾರ್ದ ರಕ್ಷಣೆಯ ಚಟುವಟಿಕೆ ಮತ್ತು ಕಾರ್ಯಕ್ರಮಗಳ ಸರಣಿಯನ್ನು ಸಂಘಟಿಸುವ ಕ್ರಿಯಾಶೀಲತೆಗೆ ಮುನ್ನುಡಿಯಾಗಬೇಕೆಂದು ಆಶಿಸುತ್ತದೆ.

ಲಿಖಿತ ಸಂವಿಧಾನವನ್ನು ಒಪ್ಪಿ ಭಾರತ ಗಣರಾಜ್ಯವಾಯಿತು. ಎಲ್ಲರೂ ಸ್ವತಂತ್ರವಾಗಿ ಭ್ರಾತೃತ್ವದಿಂದ ಬಾಳಬೇಕು ಎಂದು ಸಂವಿಧಾನ ಆಶಯ ಹೊಂದಿದೆ. ಆದರೆ ಈಗ ಸಂವಿಧಾನದ ಆಶಯಗಳಿಗೆ, ಮೂಲಭೂತ ಹಕ್ಕುಗಳಿಗೆ ಹಾಗೂ ಸಂವಿಧಾನದಕ್ಕೇ ಧಕ್ಕೆ ಬಂದಿದೆ ಎಂದು ವಿಶ್ರಾಂತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಹೇಳಿದರು. ಮುಂದುವರೆದು ಮಾತನಾಡಿದ ಅವರು "ದೇಶದಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳಿಗೆ ಧಕ್ಕೆ ಬಂದಿದೆ. ಈ ಧಕ್ಕೆ ಯಾರಿಂದ ಬಂದಿದೆ ಎಂದರೆ, ಭಯೋತ್ಪಾದನೆ, ಕೋಮುವಾದ, ಭ್ರಷ್ಟಾಚಾರ, ಮೂಲಭೂತವಾದ, ಅಪರಾಧೀಕರಣ, ಅತಿಯಾದ ವ್ಯಾಪಾರೀಕರಣದಿಂದ, ಸಾಂಸ್ಕೃತಿಕ ದಿವಾಳಿಕೋರತನ ಇತ್ಯಾದಿಗಳಿಂದ ಬಂದಿದೆ." ಎಂದು ವಿವರಿಸಿದರು. ಈ ನಿಟ್ಟಿನಲ್ಲಿ ನಾವು ಸಣ್ಣ ಪುಟ್ಟ ಪ್ರತಿರೋಧಗಳನ್ನು ಒಡ್ಡುತ್ತಿದ್ದರೂ ಸಹ ಅವು ಸಾಲದಾಗಿವೆ, ಇನ್ನೂ ದೊಡ್ಡ ಮಟ್ಟದಲ್ಲಿ ನಡೆಯಬೇಕಾಗಿದೆ. ಕೋಮುವಾದ, ಮೂಲಭೂತವಾದಗಳು ವಿಜೃಂಬಿಸುತ್ತಿರುವಾಗ ಜನತೆ ಗುಲಾಮರಂತೆ ಬಾಳಬೇಕಾಗುತ್ತದೆ ಎಂದು ಎಚ್ಚರಿಸಿದ ದಾಸ್ ಅವರು ಈ ಹಿಂದಿಗಿಂತಲೂ ಇಂದು ಭಾರತವು ಶ್ರೀಮಂತವಾಗಿದೆ. ಇಷ್ಟೊಂದು ಶ್ರೀಮಂತಿಕೆ ಇದ್ದರೂ ದೇಶದಲ್ಲಿ ಬಡತನ ಇದೆ. ಹಸಿವು ಇದೆ. ಹಸಿವಿನಿಂದ ಜನ ಸಾಯುತ್ತಿದ್ದಾರೆ. ಅನ್ನ ಬೆಳೆಯುವ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ. ಈ ಸವಾಲುಗಳನ್ನು ಹಿಮ್ಮೆಟ್ಟಿಸಬೇಕು. ನಮ್ಮ ಸಮಾಜದಲ್ಲಿ ಸೌಹಾರ್ದತೆ, ಭ್ರಾತ್ರತ್ವ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಸಂವಿಧಾನವನ್ನು ಉಳಿಸಬೇಕು. ಇಲ್ಲವಾದಲ್ಲಿ ನಮ್ಮ ಸಮಾಜದಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ, ಸಾಮಾಜಿಕ ನ್ಯಾಯ, ಕಲ್ಯಾಣ ರಾಜ್ಯ, ಬಹುತ್ವ ಯಾವುದೂ ಉಳಿಯುವುದಿಲ್ಲ ಎಂದು ಹೇಳಿದರು.

ಈ ನಿಟ್ಟಿನಲ್ಲಿ ಹೋರಾಟಗಾರರು ಜನರ ನಡುವೆ ಹೋಗಬೇಕಿದೆ. ಮೂಲಭೂತವಾದ, ಕೋಮುವಾದದ ಅಪಾಯಗಳನ್ನು ಜನರಿಗೆ ತಿಳಿಸಬೇಕಿದೆ. ಅದಕ್ಕಾಗಿ ಸಾಹಿತ್ಯ ಚಟುವಟಿಕೆ, ಚರ್ಚೆ, ಸಂವಾದ, ವಿಚಾರ ಸಂಕಿರಣ ಕಾರ್ಯಕ್ರಮಗಳು ಹೆಚ್ಚಾಗಬೇಕು. ಅದಕ್ಕಾಗಿ ಸಂವಿಧಾನ ದಾರಿ ಆಯ್ಕೆ ಮಾಡಿಕೊಳ್ಳಬೇಕು." ಎಂದು ಹೇಳಿದರು.

ಚಲನಶೀಲತೆಯ ಮೂಲಕ ಸೌಹಾರ್ದತೆಯೆಡೆಗೆ: ಪ್ರೊ. ಅರವಿಂದ ಮಾಲಗತ್ತಿ

"ಮೊಘಲ್ ದೊರೆ ಅಕ್ಬರ್ ಮುಸ್ಲೀಮೇತರರಿಗೆ ಇದ್ದ ಜೆಸಿಯಾ ತಲೆಗಂದಾಯವನ್ನು ರದ್ದು ಮಾಡಿದ. 'ದೀನ್ ಇ ಲಾಹಿ' ಎಂಬ ಸರ್ವ ಧರ್ಮಗಳ ಸಮನ್ವಯದ ಒಂದು ಹೊಸ ಧರ್ಮವನ್ನು ಸ್ಥಾಪಿಸಿದ. ರಾಮಾಯಣ, ಮಹಾಭಾರತ, ಭಗವದ್ ಗೀತೆ ಮುಂತಾದ ಗ್ರಂಥಗಳನ್ನು ಹಿಂದಿ ಮತ್ತು ಪರ್ಷಿಯನ್ನ ಭಾಷೆಗೆ ಅನುವಾದ ಮಾಡಿಸಿದ. ಅಕ್ಬರನಂತಹ ದೊರೆ ಅರಸೊತ್ತಿಗೆಯ ಕಾಲಘಟ್ಟದಲ್ಲಿ ಸರ್ವಧರ್ಮ ಸಹಿಷ್ಣುವಾಗಲು ಸಾಕಷ್ಟು ಶ್ರಮ ಹಾಕುತ್ತಿದ್ದ. ಆದರೆ ಈಗ ಆಡಳಿತ ನಡೆಸುವ ರಾಜಕಾರಣಿಗಳು ಸರ್ವಧರ್ಮ ಸಹಿಷ್ಣುಗಳಾಗಲು ಸಿದ್ದರಿಲ್ಲ. ಅವರಿಗೆ ಆ ಪರಿಕಲ್ಪನೆಯೂ ಇಲ್ಲ. ಬಹುತ್ವಕ್ಕೂ ಮಿತಿಗಳಿವೆ, ಅದು ಅಂತಿಮ ಅಲ್ಲ. ಅದಕ್ಕೂ ಜಡತ್ವ ಅಂಟಿಕೊಳ್ಳುವ ಅಪಾಯಗಳಿವೆ. ಇಂತಹ ಸನ್ನಿವೇಶದಲ್ಲಿ ಸೌಹಾರ್ದತೆಯನ್ನು ಉಳಿಸಲು ವಾಸ್ತವತಾವಾದದ ಮೂಲಕ ಮನವರಿಕೆ ಮಾಡಬೇಕಿದೆ. ಪರಂಪರೆಯ ವಿಚಾರಗಳು, ವರ್ತಮಾನದ ವಿಚಾರಗಳು ಒಟ್ಟೊಟ್ಟಿಗೆ ಸಾಗಬೇಕಿದೆ. ಚಲನಶೀಲತೆಯ ಮೂಲಕ

ಪುಟ 10 ಕ್ಕೆ

ಸುಪ್ರೀಂ ಕೋರ್ಟ್‌ನಿಂದ ಒಂದು ಸಮಾಧಾನಕರ ತೀರ್ಪು

* ಬಿಲ್ಕಿಸ್ ಬಾನೋ ಪ್ರಕರಣ * 11 ಅತ್ಯಾಚಾರಿ-ಕೊಲೆಗಡುಕರನ್ನು ಮರಳಿ ಜೈಲಿಗೆ ಕಳಿಸಲು ಆದೇಶ

ಪ್ರಕಾಶ್ ಕಾರತ್

ನ್ಯಾಯ ಒದಗಿಸುವ ದೇಶದ ನ್ಯಾಯಾಂಗದ ಸಾಮರ್ಥ್ಯದ ಜ್ವಾಲೆಯ ಆಸೆ ಕಮರಿ ಹೋಗಲಿದೆಯೇ ಅಥವಾ ಇನ್ನಷ್ಟು ಉಜ್ವಲಗೊಳ್ಳಲಿದೆಯೇ ಎಂಬುದಕ್ಕೆ ಅಗ್ನಿ ಪರೀಕ್ಷೆ ಎಂದೇ ಬಹುಮಂದಿ ಭಾವಿಸಿ ಕಾತರದಿಂದ ನಿರೀಕ್ಷಿಸುತ್ತಿದ್ದ ತೀರ್ಪು ಅದಾಗಿತ್ತು. 2022ರ ಆಗಸ್ಟ್ 15ರಂದು ಆ ಆಸೆ ಗಣನೀಯವಾಗಿ ನಂದಿ ಹೋಗಿತ್ತು. ಯಾಕೆಂದರೆ, ಮಾನವತೆಯ ವಿರುದ್ಧದ ಹೇಯ ಅಪರಾಧ ಎಸಗಿದ 11 ಜನರಿಗೆ ಹೂಮಾಲೆ ಹಾಕಿದ ಹಾಗೂ ಗುಜರಾತ್ ಸರಕಾರ ನೀಡಿದ ವಿನಾಯಿತಿಯಿಂದಾಗಿ ಜೈಲಿನಿಂದ ಹೊರಬಂದಾಗ ಅವರನ್ನು 'ಸಂಸ್ಕಾರಿ ಬ್ರಾಹ್ಮಣ'ರೆಂದು ಸನ್ಮಾನಿಸಿದ ದಿನವದು. ಮಹಿಳೆಯರ ಭದ್ರತೆ ಮತ್ತು ಘನತೆಯನ್ನು ಕಾಪಾಡದವರನ್ನು ಶಿಕ್ಷಿಸಬೇಕೆಂದು ಪ್ರಧಾನ ಮಂತ್ರಿ ಕೆಂಪು ಕೋಟೆಯಿಂದ ಅಬ್ಬರಿಸುತ್ತಿದ್ದಾಗಲೇ ನಡೆದ ವಿದ್ಯಮಾನವಿದು.

2002ರ ಗುಜರಾತ್ ಗಲಭೆಗಳ ವೇಳೆ ಈ ಜನರು, ಪ್ರಾಣ ಭಯದಿಂದ ಓಡಿ ಹೋಗಿದ್ದ 21 ವರ್ಷ ಪ್ರಾಯದ, ನಾಲ್ಕು ತಿಂಗಳ ಗರ್ಭಿಣಿ ಬಿಲ್ಕಿಸ್ ಬಾನೋ ಮತ್ತು ಆಕೆಯ ಕುಟುಂಬದವರ ಬೆನ್ನು ಹತ್ತಿ ಹೋಗಿದ್ದರು. ಒಂದು ದಿನದ ನಂತರ ಅವರು ಈ ಅಸಹಾಯಕ ಮಹಿಳೆ ಹಾಗೂ ಕುಟುಂಬಸ್ಥರನ್ನು ಸುತ್ತುವರಿದು ಬಿಲ್ಕಿಸ್‌ಳ 3 ವರ್ಷದ ಮಗಳನ್ನು ಹಾಗೂ ಸೋದರನ ಕೇವಲ ಒಂದು ದಿನದ ಹಸುಗೂಸನ್ನು ಬರ್ಬರವಾಗಿ ಕೊಂದಿದ್ದರು. ಅಷ್ಟಕ್ಕೇ ನಿಲ್ಲದೆ ಬಿಲ್ಕಿಸ್, ಆಕೆಯ ತಾಯಿ ಮತ್ತು ನಾದಿನಿ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಮಾರಣಾಂತಿಕ ಹಲ್ಲೆ ನಡೆಸಿದ್ದರು. ಈ ಘೋರ ಕೃತ್ಯದಲ್ಲಿ ಬಿಲ್ಕಿಸ್ ಮಾತ್ರವೇ ಬದುಕುಳಿದಿದ್ದು ಗೋಧ್ರಾದಲ್ಲಿರುವ ಸಂತ್ರಸ್ತರ ಶಿಬಿರಕ್ಕೆ ಪೊಲೀಸರು ಕರೆದೊಯ್ದಿದ್ದರು. ಆಕೆ ಅನುಭವಿಸಿದ್ದ ನರಕಯಾತನೆಯಿಂದ ಜನರು ಆಘಾತಗೊಂಡಿದ್ದರು ಹಾಗೂ ಊಹಿಸಲಸಾಧ್ಯವಾದ ಪ್ರತಿಕೂಲ ಸನ್ನಿವೇಶಗಳನ್ನು ಎದುರಿಸಿಯೂ ನ್ಯಾಯಕ್ಕಾಗಿ ಆಕೆ ಆರಂಭಿಸಿದ ದಿಟ್ಟ ಹೋರಾಟಕ್ಕೆ ಕಾರ್ಯಕರ್ತರ ಗುಂಪುಗಳು ಮತ್ತು ವಕೀಲರು ಬೆಂಬಲ ಸಾರಿದರು.

ಆರೋಪಿಗಳಿಗೆ ರಕ್ಷಣೆ

ಅಂದಿನ ಗುಜರಾತ್ ಸರ್ಕಾರ ಆರೋಪಿಗಳಿಗೆ ಸಾಧ್ಯವಾದ ಎಲ್ಲ ರಕ್ಷಣೆ ನೀಡಿತು. ಕೇಂದ್ರೀಯ ತನಿಖಾ ದಳದ (ಸಿಬಿಐ) ಮಹಾರಾಷ್ಟ್ರದ ವಿಶೇಷ ಕೋರ್ಟ್‌ಗೆ ಪ್ರಕರಣ ವರ್ಗಾವಣೆ ಆದ ನಂತರವಷ್ಟೇ 2008ರಲ್ಲಿ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಯಿತು. ಅವರು ದೋಷಿ ಎಂದು ನೀಡಲಾದ ತೀರ್ಪು ಹಾಗೂ ವಿಧಿಸಲಾದ ಜೀವಾವಧಿ ಶಿಕ್ಷೆಯನ್ನು ಮಹಾರಾಷ್ಟ್ರ ಹೈಕೋರ್ಟ್ 2017ರಲ್ಲಿ ಎತ್ತಿ ಹಿಡಿಯಿತು. ಅಂದಿನ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಕಣ್ಗಾವಲಿನಲ್ಲಿ ಮುಸ್ಲಿಂ ಸಮುದಾಯದ ವಿರುದ್ಧ ಸಂಘ ಪರಿವಾರ ನಡೆಸಿದ್ದ ಹತ್ಯಾಕಾಂಡದ ಸಾವಿರಾರು ಪ್ರಕರಣಗಳಲ್ಲಿ ಕನಿಷ್ಠ ಒಂದು ಕೇಸ್‌ನಲ್ಲಾದರೂ ನ್ಯಾಯ ಸಿಕ್ಕಿದಂತೆ ಕಂಡಿತು.

ಇಂಥ ಒಂದು ಘೋರ ಪ್ರಕರಣದಲ್ಲಿ ಶಿಕ್ಷೆಗೊಳಗಾದವರನ್ನು ಬಿಡುಗಡೆ ಮಾಡಿದ್ದನ್ನು ಪ್ರಶ್ನಿಸಿ ಅನೇಕ ಮಹಿಳಾ ರಾಜಕೀಯ ಕಾರ್ಯಕರ್ತರು, ಒಬ್ಬ ಶಿಕ್ಷಣ ತಜ್ಞರು, ನಿವೃತ್ತ ಮಹಿಳಾ ಐಪಿಎಸ್ ಅಧಿಕಾರಿ; ಹಾಗೂ ಆನಂತರ ಸ್ವತಃ ಬಿಲ್ಕಿಸ್ ಬಾನೋ ಅವರೇ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳನ್ನು ಸಲ್ಲಿಸಿದರು. ಗುಜರಾತ್ ಮತ್ತು ಕೇಂದ್ರ ಸರಕಾರಗಳು ದೋಷಿಗಳ ಬಿಡುಗಡೆಯನ್ನು ಬಲವಾಗಿ ಸಮರ್ಥಿಸಿ ಕೊಂಡಿದ್ದವು. ಆದರೆ ಅಂತಿಮವಾಗಿ, ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು



ಉಜ್ವಲ್ ಭುಯಿಯಾನ್ 2024ರ ಜನವರಿ 8ರಂದು ಬಹುನಿರೀಕ್ಷಿತ ತೀರ್ಪನ್ನು ಪ್ರಕಟಿಸಿದರು. 11 ಅತ್ಯಾಚಾರಿ–ಕೊಲೆಗಡುಕರನ್ನು 15 ದಿನದೊಳಗೆ ಮರಳಿ ಜೈಲಿಗೆ ಕಳಿಸಬೇಕೆಂದು ಆದೇಶಿಸಿದರು. ಆ ಮೂಲಕ, ನ್ಯಾಯಕ್ಕಾಗಿ ನಡೆಯುವ ಹೋರಾಟ ಯಶಸ್ವಿಯಾಗುತ್ತದೆ ಎಂಬ ಆಶಾವಾದ ಚಿಗುರೊಡೆಯುವಂತೆ ಮಾಡಿದರು.

ಘೋರ ಅಪರಾಧವೆಂದು ವರ್ಣನೆ

ಅವರು ಎಸಗಿದ್ದ ಅಪರಾಧಗಳು 'ಘೋರ ಹಾಗೂ ಪೈಶಾಚಿಕ' ಎಂದು ವರ್ಣಿಸಿರುವ ಸುಪ್ರೀಂ ಕೋರ್ಟ್ ತೀರ್ಪು, ತಪ್ಪು ನಡೆಗಳಿಗಾಗಿ ಗುಜರಾತ್ ಸರಕಾರವನ್ನು ಕಟುವಾಗಿ ಖಂಡಿಸಿದೆ.

ಏನೇ ಇರಲಿ, ರೇಪಿಸ್ಟ್–ಮರ್ಡರರ್‌ಗಳಿಗೆ ವಿಧಿಸಿದ ಶಿಕ್ಷೆಯಿಂದ ನೀಡಲಾದ ವಿನಾಯಿತಿಯನ್ನು ಈ ತೀರ್ಪು ಅಸಿಂಧುಗೊಳಿಸಿದೆ. ಅಸಾಮಾನ್ಯ ಪರಿಸ್ಥಿತಿಗಳ ಆಧಾರದಲ್ಲಿ ಕೋರ್ಟ್ ಈ ನಿರ್ಧಾರ ಕೈಗೊಂಡಿದೆ. 'ಗುಜರಾತ್ ಸರಕಾರ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದ ಆಧಾರದಲ್ಲಿ ನಾವು ಶಿಕ್ಷೆ ಕಡಿತದ ಆದೇಶವನ್ನು ರದ್ದುಗೊಳಿಸಿದ್ದೇವೆ' ಎಂದು ನ್ಯಾಯಮೂರ್ತಿಗಳು ಕಟು ಮಾತಿನಲ್ಲಿ ಹೇಳಿರುವುದು ಗುಜರಾತ್ ಸರಕಾರದ ಮುಖಕ್ಕೆ ಮಾಡಿದ ಮಂಗಳಾರತಿಯಾಗಿದೆ.

ವಿಶೇಷ ಸನ್ನಿವೇಶಗಳು

ಈ ತೀರ್ಪು ಘೋಷಿಸುವುದಕ್ಕೆ ಕಾರಣವಾದ ಅಸಾಮಾನ್ಯ ಸನ್ನಿವೇಶಗಳು ಹೀಗಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ:

ಆರೋಪಿಗಳಲ್ಲಿ ಒಬ್ಬನಾದ ರಾಧೇಶ್ಯಾಮ್ ಎಂಬಾತ ಶಿಕ್ಷೆಯನ್ನು ಕಡಿತಗೊಳಿಸುವಂತೆ ಕೋರಿ 2019ರಲ್ಲಿ ಗುಜರಾತ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ. ಮಹಾರಾಷ್ಟ್ರದಲ್ಲಿ ಶಿಕ್ಷೆ ಪ್ರಕಟಿಸಿದ ಕೋರ್ಟ್ ಮಾತ್ರವೇ ಈ ಅರ್ಜಿಯ ವಿಚಾರಣೆ ನಡೆಸಬಹುದು ಎಂದು ಹೇಳಿ ಆತನ ಮನವಿಯನ್ನು ಗುಜರಾತ್ ಹೈ ಕೋರ್ಟ್ ತಳ್ಳಿ ಹಾಕಿತ್ತು. ಈ ಆದೇಶವನ್ನು ಗುಜರಾತ್ ಸರಕಾರ ಪ್ರಶ್ನಿಸಿರಲಿಲ್ಲ. ಅದರ ಬದಲು ರಾಧೇಶ್ಯಾಮನೇ ಶಿಕ್ಷೆ ಕಡಿತ ಕೋರಿ ಮಹಾರಾಷ್ಟ್ರ ಹೈಕೋರ್ಟ್ ಮೆಟ್ಟಿಲೇರಿದ್ದ. ಆತನ ಸಹ–ಆರೋಪಿಗಳ ಜೊತೆ ಈತನಿಗೂ ಶಿಕ್ಷೆ ವಿಧಿಸಿದ್ದ ಸಿಬಿಐ ಕೋರ್ಟ್‌ನ ಮ್ಯಾಜಿಸ್ಟ್ರೇಟ್, ರಾಧೇಶ್ಯಾಮನ ಅರ್ಜಿಯನ್ನು ತಿರಸ್ಕರಿಸಿದ್ದರು. ಅದಾದ ನಂತರ, ರಾಧೇಶ್ಯಾಮ್ ಮತ್ತು ಗುಜರಾತ್ ಸರಕಾರ 2021ರಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಶಿಕ್ಷೆ ಉಪಶಮನ ಮನವಿಯ ಅರ್ಜಿಯನ್ನು ಗುಜರಾತ್ ಹೈ ಕೋರ್ಟ್ ವಿಚಾರಣೆ ನಡೆಸಲು ಅವಕಾಶ ನೀಡುವಂತೆ ಕೋರಿದ್ದರು. ಗುಜರಾತ್ ಮತ್ತು ಮಹಾರಾಷ್ಟ್ರ ಕೋರ್ಟ್‌ನಲ್ಲಿ ಹಿಂದೆ ಏನು ನಡೆದಿತ್ತು ಎನ್ನುವ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ನೀಡದೆಯೇ ಹೀಗೆ ಮಾಡಲಾಗಿತ್ತು.



ಅಸಮರ್ಥ ಹೈ ಕೋರ್ಟ್

ಅರ್ಜಿಯನ್ನು ಆಲಿಸಿದ ಸುಪ್ರೀಂ ಕೋರ್ಟ್ ನ್ಯಾಯಪೀಠವು, ಶಿಕ್ಷೆ ಕಡಿತ ಮನವಿಯ ಅರ್ಜಿಯನ್ನು ಆಲಿಸಲು ಗುಜರಾತ್ ಹೈ ಕೋರ್ಟ್ ಅಸಮರ್ಥ; ಮಾತ್ರವಲ್ಲದೆ ಅದನ್ನು 1992ರ ಸರಕಾರದ ಶಿಕ್ಷೆ ಉಪಶಮನ ನೀತಿ ಅನ್ವಯ ಪರಿಶೀಲಿಸಬಹುದೇ ಹೊರತು 2014ರ ಪರಿಷ್ಕೃತ ನೀತಿಯಡಿ ಪರಿಶೀಲನೆ ಅಸಾಧ್ಯ ಎಂದು ಹೇಳಿತು. ಮರಣದಂಡನೆ ಶಿಕ್ಷೆಗೆ ಒಳಪಡುವ ಅಪರಾಧ ಎಸಗಿದವರಿಗೆ ಶಿಕ್ಷೆ ಕಡಿತ ನೀಡಲು ಅಸಾಧ್ಯ ಎಂದು ಪರಿಷ್ಕೃತ ನೀತಿ ಹೇಳುತ್ತದೆ. ಆದರೆ, 1992ರ ನೀತಿಯಡಿ ಸಾಧ್ಯವಿದೆ.

ಈ ತೀರ್ಪು ಬಂದ ತಕ್ಷಣವೇ ಗುಜರಾತ್ ಸರಕಾರ, ಎಲ್ಲಾ ನಿಯಮಗಳು ಮತ್ತು ಸ್ಥಾಪಿತ ಸಿದ್ಧಾಂತಗಳನ್ನು ಗಾಳಿಗೆ ತೂರಿ ಈ ಆಪರಾಧಿಗಳಿಗೆ ಶಿಕ್ಷೆ ಉಪಶಮನಕ್ಕೆ ಅಗತ್ಯವಾದ ಎಲ್ಲಾ ಕಾನೂನು ನಿಯಮಗಳನ್ನು ಪರಿಶೀಲಿಸಿತು.

ವಂಚನೆಯಿಂದ ಪಡೆದ ತೀರ್ಪು

2022ರಲ್ಲಿ ಸುಪ್ರೀಂ ಕೋರ್ಟ್‌ನಿಂದ ಪಡೆದ ತೀರ್ಪು ವಂಚನೆಯ ಮಾರ್ಗದಿಂದ ಪಡೆದದ್ದಾಗಿದೆ. ಯಾಕೆಂದರೆ, ಗುಜತಾತ್ ಸರಕಾರ ಮತ್ತು ರಾಧೇಶ್ಯಾಮ್ ಇಬ್ಬರೂ ಮಹತ್ವದ ವಾಸ್ತವಾಂಶಗಳನ್ನು ಕೋರ್ಟ್‌ನಿಂದ ಮರೆ ಮಾಚಿದ್ದರು ಎಂದು ಜನವರಿ 8ರ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಹೀಗಾಗಿ, '2022ರ ಮೇ 13ರಂದು ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪು ಅಸಿಂಧು. ಕಾನೂನು ನಿಯಮಗಳನ್ನು ಉಲ್ಲಂಘಿಸಲು ಈ ನ್ಯಾಯಾಲಯದ ಆದೇಶವನ್ನೇ ಬಳಸಿಕೊಂಡ ಒಂದು ಅಪರೂಪದ ಪ್ರಕರಣ ಇದಾಗಿದೆ. ಗುಜರಾತ್ ಸರಕಾರ ತನ್ನಲ್ಲಿ ಇಲ್ಲದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಕಾರಣದಿಂದಲೂ ಶಿಕ್ಷೆ ಉಪಶಮನಕ್ಕೆ ಹೊರಡಿಸಲಾಗಿದ್ದ ಆದೇಶಗಳನ್ನು ನಾವು ರದ್ದುಪಡಿಸುತ್ತೇವೆ' ಎಂದು ಇಬ್ಬರೂ ನ್ಯಾಯಮೂರ್ತಿಗಳು ಹೇಳಿದ್ದಾರೆ.

ಗುಜರಾತ್ ಸರಕಾರ ಕ್ರಿಮಿನಲ್‌ಗಳೊಂದಿಗೆ ಆರಂಭದಿಂದಲೂ ಶಾಮೀಲಾಗಿದ್ದರಿಂದ ಪ್ರಕರಣವನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಬೇಕಾಗಿ ಬಂದಿತ್ತು ಎನ್ನುವುದು ಗಮನಿಸಬೇಕಾದ ಮುಖ್ಯ ಸಂಗತಿ. 2021ರಲ್ಲಿ ಸುಪ್ರೀಂ ಕೋರ್ಟ್‌ಗೆ ಮೋಸ ಮಾಡಿದ್ದರಲ್ಲೂ ಗುಜರಾತ್ ರಾಜ್ಯ ಸರಕಾರ ಶಾಮೀಲಾಗಿದೆ. ಅಲ್ಲದೆ ಕೇಂದ್ರ ಸರಕಾರ ಕೂಡ ಇದಕ್ಕೆ ಸಂಪೂರ್ಣ ಬೆಂಬಲ ನೀಡಿರುವುದು ಗಮನಾರ್ಹವಾಗಿದೆ.

ಸುಪ್ರೀಂ ಕೋರ್ಟ್ ಕಟುವಾದ ವಾಗ್ದಂಡನೆ ವಿಧಿಸಿದ ಮೇಲೂ ಗುಜರಾತ್ ಸರಕಾರವಾಗಲೀ ಕೇಂದ್ರ ಸರಕಾರವಾಗಲೀ ಕಿಂಚಿತ್ತೂ ವಿಷಾದ ವ್ಯಕ್ತಪಡಿಸದಿರುವುದನ್ನು ಗಮನಿಸಬೇಕಿದೆ.

ಬಿಜೆಪಿಯ ನಿಜವಾದ ಮನುವಾದಿ ಮುಖವನ್ನು ಬೆತ್ತಲು ಮಾಡಬೇಕಿದೆ. ಮಹಿಳೆಯರು ಮತ್ತು ಇಡಿಯಾಗಿ ಮನುಕುಲದ ವಿರುದ್ಧ ಹೇಯ ಅಪರಾಧ ಎಸಗಿದವರನ್ನು ಬೆಂಬಲಿಸುವವರನ್ನು ಗುರುತಿಸಬೇಕಿದೆ. ಜನರ ಗುಂಪುಗಳ ನಡುವೆ ಇಂಥ ವೈರತ್ವ ಸೃಷ್ಟಿಸುವುದು ಮಾತ್ರವಲ್ಲದೆ ಇತರ ಜನಸಮುದಾಯದ ವಿರುದ್ಧ ನಡೆಸುವ ಅಪರಾಧಗಳನ್ನು ವಿಜೃಂಭಿಸುವ ಅಸ್ಮಿತೆ ರಾಜಕಾರಣವನ್ನು ಎಲ್ಲರೂ ವಿರೋಧಿಸಬೇಕಾಗಿದೆ.

ಅನು: ವಿಶ್ವ

ಸಾರ್ವತ್ರಿಕ ಪಿಂಚಣಿ ಯೋಜನೆ ತುರ್ತು ಜಾರಿಯ ಅಗತ್ಯವಿದೆ: ಪ್ರಭಾತ್ ಪಟ್ನಾಯಕ್

ದೇಶದ ಅಭಿವೃದ್ಧಿಗಾಗಿ ತಮ್ಮ ದುಡಿಮೆಯ ಮೂಲಕ ಶ್ರಮಿಸುತ್ತಿರುವ ಎಲ್ಲರಿಗೂ ತಮ್ಮ ಇಳಿವಯಸ್ಸಿನಲ್ಲಿನ ಆರ್ಥಿಕ ಭದ್ರತೆಗಾಗಿ ಸಾರ್ವತ್ರಿಕ ಪಿಂಚಣಿ (ಎಲ್ಲರಿಗೂ ಪಿಂಚಣಿ) ವ್ಯವಸ್ಥೆಯನ್ನು ತುರ್ತಾಗಿ ಜಾರಿ ಮಾಡುವ ಅಗತ್ಯವಿದೆ. ಸರ್ಕಾರ ಇಚ್ಛಾಶಕ್ತಿ ತೋರಿದಲ್ಲಿ ಇಂತಹ ವ್ಯವಸ್ಥೆಯನ್ನು ಜಾರಿಗೊಳಿಸಲು ಸಾಧ್ಯವಿದೆ ಎಂದು ಖ್ಯಾತ ಆರ್ಥಿಕ ತಜ್ಞರಾದ ಪ್ರಭಾತ್ ಪಟ್ನಾಯಕ್ ಹೇಳಿದ್ದಾರೆ.

ಜನವರಿ 7 ರಂದು ಬೆಂಗಳೂರಿನ ಎನ್.ಜಿ.ಓ. ಹಾಲ್ ಸಭಾಂಗಣದಲ್ಲಿ ನಡೆದ ಸಾರ್ವತ್ರಿಕ ಪಿಂಚಣಿ ಯೋಜನೆಯ ಅವಶ್ಯಕತೆ ಕುರಿತು ನಡೆದ ರಾಜ್ಯ ಮಟ್ಟದ ವಿಚಾರಸಂಕಿರಣದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ದೇಶದಲ್ಲಿ ಈಗ ಅತಿ ಕಡಿಮೆ ಸಂಖ್ಯೆಯ ಸಂಘಟಿತ ವಲಯದ ನೌಕರರು ಮಾತ್ರ ಪಿಂಚಣಿ ಪಡೆಯುತ್ತಿದ್ದಾರೆ. ಅದೂ ಕೂಡಾ ಜಿ.ಡಿ.ಪಿ. ಯ ಬೆಳವಣಿಗೆಗೆ ಅನುಸಾರವಾಗಿ ಹೆಚ್ಚಾಗುತ್ತಿಲ್ಲ. ಇನ್ನು ಬಡತನ ರೇಖೆಗಿಂತ ಕೆಳಗಿರುವ ಕಲವೇ ಜನರಿಗೆ ಮಾತ್ರ ಕನಿಷ್ಠ ಮಟ್ಟದ ಪಿಂಚಣಿ ನೀಡಲಾಗುತ್ತಿದೆ. ಭಾರತದಲ್ಲಿ 2021 ರ ವೇಳೆಗೆ 60 ವರ್ಷಕ್ಕಿಂತ ಮೇಲ್ಪಟ್ಟವರ ಜನಸಂಖ್ಯೆಯು 13.8 ಕೋಟಿ ಇತ್ತು. (ಅದರಲ್ಲಿ 7.1 ಕೋಟಿ ಮಹಿಳೆಯರಿದ್ದಾರೆ.) ಈ ಸಂಖ್ಯೆಯು 2036 ರ ವೇಳೆಗೆ 22.7 ಕೋಟಿಗೆ ತಲುಪುವ ನಿರೀಕ್ಷೆಯಿದೆ. ಇದು ದೇಶದ ಜನಸಂಖ್ಯೆಯ ಶೇ. 15 ರಷ್ಟಿದೆ ಮತ್ತು 2050 ರ ವೇಳೆಗೆ 34.7 ಕೋಟಿ, ಇದು ಒಟ್ಟು ಜನಸಂಖ್ಯೆಯ ಶೇ. 20.8 ಆಗಿರುತ್ತದೆ.

ಎಲ್ಲ ಹಿರಿಯ ನಾಗರಿಕರಿಗೂ ಕನಿಷ್ಠ 3.000 ರೂ.ಗಳ ಸಾರ್ವತ್ರಿಕ ಪಿಂಚಣಿಯನ್ನು ನೀಡಲು



ಜನರ ಮೇಲೆ ಮತ್ತಷ್ಟು ತೆರಿಗೆ ವಿಧಿಸಬೇಕಾಗಿಲ್ಲ. ಬದಲಿಗೆ ಶೇ. ಒಂದರಷ್ಟಿರುವ ದೇಶದ ಆಗರ್ಭ ಶ್ರೀಮಂತರಿಗೆ ಕೇವಲ 2ರಷ್ಟು ಸಂಪತ್ತು ತೆರಿಗೆ ವಿಧಿಸಿದರೆ ಸಾಕಾಗುತ್ತದೆ. ಹಾಗೆಯೇ ಪಿತ್ರಾರ್ಜಿತ ಆಸ್ತಿಯ ಮೇಲೂ ಶೇಕಡಾ ಒಂದರಿಂದ ಎರಡರಷ್ಟು ತೆರಿಗೆ ವಿಧಿಸಬಹುದು. ಸರ್ಕಾರಗಳು ಈಗಿರುವ ಸಾಮಾಜಿಕ ಮೂಲಭೂತ ಹಕ್ಕುಗಳ ಜೊತೆಗೆ ಆರ್ಥಿಕ ಮೂಲಭೂತ ಹಕ್ಕುಗಳನ್ನು ನೀಡಬೇಕು. ಈ ಮೂಲಕ ಎಲ್ಲರಿಗೂ ಆಹಾರ, ಉದ್ಯೋಗ, ಆರೋಗ್ಯ, ಉತ್ತಮ ಶಿಕ್ಷಣ ಮತ್ತು ಕಡ್ಡಾಯ ನಿವೃತ್ತಿ ವೇತನಗಳನ್ನು ನೀಡಬೇಕು ಎಂದು ಪಟ್ನಾಯಕ್ ಅಭಿಪ್ರಾಯಪಟ್ಟರು.

ಪಿಂಚಣಿ ಪಡೆಯುವುದು ಹಕ್ಕು

ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕುಂಞಿಕೃಷ್ಣನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ವೇತನದ ಹಾಗೆಯೇ ಪಿಂಚಣಿ ಪಡೆಯುವುದು ದುಡಿಯುವ ಜನರ ಹಕ್ಕಾಗಿದ್ದು. ಅದನ್ನು ನೀಡಬೇಕಾದದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಕೇರಳ ಸರ್ಕಾರ 1980 ರಲ್ಲಿಯೇ 60 ವರ್ಷ ಮೀರಿದ ಕೃಷಿ ಕಾರ್ಮಿಕರಿಗೆ ಮಾಸಿಕ ಪಿಂಚಣಿ ಜಾರಿಗೊಳಿಸಿತ್ತು. ಈಗಲೂ ಸಹ ಕೇರಳದಲ್ಲಿ ಸಾರ್ವಜನಿಕ ಪಿಂಚಣಿ ವ್ಯವಸ್ಥೆಯಡಿ 3,000 ರೂ. ಮಾಸಿಕ ಪಿಂಚಣಿ ನೀಡಲಾಗುತ್ತದೆ. ಇತರ ಕೆಲವು ರಾಜ್ಯಗಳಲ್ಲಿ ಸಹ ಸಾರ್ವಜನಿಕ ಪಿಂಚಣಿಯನ್ನು ನೀಡಲಾಗುತ್ತಿದೆ ಎಂದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಪೂರ್ವ ಅಧ್ಯಕ್ಷ ಅಮಾನುಲ್ಲಾ ಖಾನ್ ಮಾತನಾಡಿ, ಜಗತ್ತಿನಲ್ಲಿಯೇ ಅತ್ಯಂತ ಆರ್ಥಿಕ ಅಸಮಾನತೆ ಹೊಂದಿರುವ ಭಾರತದಂತಹ ದೇಶದಲ್ಲಿ ಹಿರಿಯ ನಾಗರಿಕರಿಗೆ ಪಿಂಚಣಿ ನೀಡುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಇಂತಹ ವಿಚಾರ ಸಂಕಿರಣಗಳು, ಸಮಾವೇಶಗಳು, ಜನಾಂದೋಲನಗಳನ್ನು ನಡೆಸಿ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗಿದೆ. ಇಂತಹ ಜನ ಜಾಗೃತಿಯಿಂದ ನಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಕಾರ್ಮಿಕ ಸಂಘಟನೆಗಳಿಂದ ಮಾತ್ರ ಸಾಧ್ಯ ಎಂದರು.

ಸಿಐಟಿಯು ನೇತೃತ್ವದಲ್ಲಿ ನಡೆಸಿದ ಹೋರಾಟದ ಫಲವಾಗಿ ರಾಜ್ಯದಲ್ಲಿ ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿಯ ಸ್ಥಾಪನೆಯ ಮೂಲಕ ಲಕ್ಷಾಂತರ ಕಾರ್ಮಿಕರಿಗೆ ಇಳಿ ವಯಸ್ಸಿನ ಸಮಯದಲ್ಲಿ ಕನಿಷ್ಠ ಪಿಂಚಣಿ ನೀಡುವುದು ಸಾಧ್ಯವಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್ ತಿಳಿಸಿದರು. ಇತ್ತೀಚೆಗೆ ಜಾರಿಯಾಗಿರುವ ಹೊಸ ಪಿಂಚಣಿ ಯೋಜನೆಯಾದ ಎನ್.ಪಿ.ಎಸ್. ನಿಂದ ಕಾರ್ಮಿಕರಿಗೆ ಯಾವುದೇ ನಿಶ್ಚಿತ ಆರ್ಥಿಕ ಭದ್ರತೆ ಇಲ್ಲ. ಅದನ್ನು ಕೂಡಲೇ ಹಿಂದಕ್ಕೆ ಪಡೆದು ಎಲ್ಲರಿಗೂ ಹಳೆಯ ನಿಶ್ಚಿತ ಪಿಂಚಣಿ ಯೋಜನೆ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ವಿಮಾ ನೌಕರರ ಸಂಘಟನೆಗಳ ನಾಯಕರಾದ ಆನಂದ್, ಎಸ್.ಕೆ. ಗೀತಾ, ಕೃಷ್ಣಮೂರ್ತಿ ಮತ್ತಿತರು ಮಾತನಾಡಿ ಸಾರ್ವತ್ರಿಕ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸಿ, ಮುಂಬರುವ ಚುನಾವಣೆಯ ವೇಳೆ ಈ ವಿಚಾರವನ್ನು ಪ್ರಣಾಳಿಕೆಯಲ್ಲಿ ಸೇರಿಸುವಂತೆ ವಿವಿಧ ರಾಜಕೀಯ ಪಕ್ಷಗಳಿಗೆ ಅಗ್ರಹಿಸಲಾಗುವುದು ಎಂದರು.

ವಿಮಾ ವಲಯದ ಪ್ರಮುಖ ಸಂಘಟನೆಗಳು ಸಂಯುಕ್ತವಾಗಿ ಏರ್ಪಡಿಸಿದ್ದ ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಹಲವಾರು ಕಾರ್ಮಿಕ ಸಂಘಟನೆಗಳ ನಾಯಕರು ಭಾಗವಹಿಸಿದ್ದರು.

‘ಸೌಹಾರ್ದ ಪರಂಪರೆ ಮತ್ತು ಸಮಕಾಲೀನತೆ’ ‘ಸೌಹಾರ್ದ ಕರ್ನಾಟಕ’ದ ಯಶಸ್ವಿ ರಾಜ್ಯ ಸಮಾವೇಶ...........

ಪುಟ 9 ರಿಂದ

ಸೌಹಾರ್ದತೆಯೆಡೆಗೆ ಸಾಗೋಣ” ಎಂದು ಖ್ಯಾತ ಸಾಹಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಅರವಿಂದ ಮಾಲಗತ್ತಿ ಮಾತನಾಡುತ್ತ ಹೇಳಿದರು.

ಕಾಂಗ್ರೆಸ್ ಪಕ್ಷದ ಮುಖಂಡರು, ವಿಧಾನ ಪರಿಷತ್ ಸದಸ್ಯರು ಹಾಗೂ ಮುಖ್ಯ ಸಚೇತಕರಾದ ಸಲಿಂ ಅಹ್ಮದ್ ಮಾತನಾಡಿ ತಮ್ಮ ವಿದ್ಯಾರ್ಥಿ ಚಳುವಳಿಯ ದಿನಗಳನ್ನು ನೆನಪಿಸಿಕೊಂಡರು. ಅಂದಿಗೆ ಬಹುತೇಕ ಯಾವುದೇ ವಿದ್ಯಾರ್ಥಿ ಸಂಘಟನೆಗಳು ಸಹ ಶಿಕ್ಷಣ, ಉದ್ಯೋಗದಂತಹ ಜನರ ಬದುಕಿನ ಪ್ರಶ್ನೆಗಳ ಮೇಲೆ ಕೆಲಸ ಮಾಡುತ್ತಿದ್ದವು. ಇಂದು ವಿದ್ಯಾರ್ಥಿಗಳ ಐಕ್ಯತೆ ಮುರಿಯುವಂತಹ ವಿಷಯಗಳನ್ನು ಎತ್ತಲಾಗುತ್ತಿದೆ ಎಂದು ವಿಷಾದಿಸಿದರು. ಯಾವುದೇ ಸಮಾಜ ಪ್ರಗತಿ ಸಾಧಿಸಬೇಕಾದರೆ ಸೌಹಾರ್ದತೆ ಅನಿವಾರ್ಯ ಅಗತ್ಯವಾಗಿದ್ದು ಅದಕ್ಕಾಗಿ ಎಲ್ಲರೂ ಒಟ್ಟಗೂಡಿ ಶ್ರಮಿಸೋಣ ಎಂದು ಹೇಳಿದರು.

ಸಾಹಿತಿ ಹಾಗೂ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಅವರು ಮಾತನಾಡಿ ಭಾರತ ಹಾಗೂ ಕರ್ನಾಟಕಗಳು ಮೊದಲಿನಂತಿಲ್ಲ. ಯಾವಾಗ ಯಾವ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೋ, ನಾಳೆ ಏನಾಗುತ್ತದೋ ಎನ್ನುವ ಆತಂಕಕಾರಿ ವಾತಾವರಣದಲ್ಲಿ ನಾವು ಬದುಕುತ್ತಿದ್ದೇವೆ ಎಂದರು. ರಾಜ ಮಹಾರಾಜರಿಗೆ ತಮ್ಮ ರಾಜ್ಯ ಮತ್ತು ಧರ್ಮವನ್ನು ವಿಸ್ತರಿಸುವ ಗುರಿ ಇರುತ್ತಿತ್ತು. ಇತಿಹಾಸದಲ್ಲಿ ಈ ನಿಟ್ಟಿನಲ್ಲಿ ಆಗಿರುವ ತಪ್ಪುಗಳನ್ನು ಈಗ ವರ್ತಮಾನದಲ್ಲಿ ತಿದ್ದಿ ಸರಿಪಡಿಸುತ್ತೇವೆನ್ನುವ ಧೋರಣೆ ಎಷ್ಟು ಸರಿ ಎಂಬಂತಹ ಪ್ರಶ್ನೆಗಳನ್ನು ಅವರು ಸಮಾವೇಶದ ಮುಂದೆ ಇಟ್ಟರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಯು.ಬಸವರಾಜ ಅವರು ಸಮಾವೇಶದ ನಿರ್ಣಯವನ್ನು ಬೆಂಬಲಿಸಿ ಮಾತನಾಡಿ, ಜನವರಿ 30, 2024 ರ ರಾಜ್ಯವ್ಯಾಪಿ ಸೌಹಾರ್ದ ಮಾನವ ಸರಪಳಿಯನ್ನು ಯಶಸ್ವಿಗೊಳಿಸಬೇಕಾದರೆ ಬಹಳ ಮುಖ್ಯವಾಗಿ ರಾಜ್ಯದ ಕಾರ್ಮಿಕ ವರ್ಗ, ರೈತರು, ಕೂಲಿಕಾರರು, ದುಡಿಯುವ ಜನರು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಬೇಕು. ಈ ನಿಟ್ಟಿನಲ್ಲಿ ತಾವು ಶ್ರಮಿಸುವುದಾಗಿ ತಿಳಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರು, ಹಾಗೂ ಸಂಯುಕ್ತ ಹೋರಾಟ ಸಮಿತಿ ಕರ್ನಾಟಕದ ಸಂಯೋಜಕರಾದ ಬಡಗಲಪುರ ನಾಗೇಂದ್ರ, ಅವರು ಮಾತನಾಡಿ 1990 ದಶಕದ ನಂತರ ದೇಶದಲ್ಲಿ ಖಾಸಗೀಕರಣ, ಉದಾರೀಕರಣದ, ಜಾಗತೀಕರಣ ನೀತಿಗಳು ಜಾರಿಯಾದ ಮೇಲೆ ನಮ್ಮ ಸಮಾಜದಲ್ಲಿದ್ದ ಸೌಹಾರ್ದತೆಗೂ ಧಕ್ಕೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ದ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್, ಸಂಶೋಧಕರಾದ ರೆವರೆಂಡ್ ಫಾದರ್ ಡಾ. ಮನೋಹರ ಚಂದ್ರ ಪ್ರಸಾದ್, ಪರ್ತಕರ್ತರಾದ ಬಿ.ಎಂ. ಹನೀಫ್ ಮುಂತಾದವರು ಸಮಾವೇಶದ ನಿರ್ಣಯವನ್ನು ಬೆಂಬಲಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿಗಳು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ.ಕೆ ಮರುಳಸಿದ್ದಪ್ಪ ವಹಿಸಿದ್ದರು. ಸಮಾವೇಶದ ಕೊನೆಯಲ್ಲಿ ಅಧ್ಯಕ್ಷೀಯ ಮಾತುಗಳನ್ನು ಆಡಿದ ಕೆ. ಮರುಳ ಸಿದ್ದಪ್ಪ ಅವರು ಸೌಹಾರ್ದತೆ ಸಾಮರಸ್ಯಗಳಿಗೆ ವಿರುದ್ಧವಾದ ವಿಚಾರಧಾರೆ, ಚಿಂತನೆಗಳು ಹಾಗೂ ಪ್ರಗತಿ ವಿರೋಧಿ ಧೋರಣೆ ಇರುವ ಜನರು ಸಮಾಜದಲ್ಲಿ ಬಹಳ ಗಣನೀಯ ಸಂಖ್ಯೆಯಲ್ಲಿದ್ದಾರೆ. ನಮ್ಮ ಸಮಾಜದಲ್ಲಿ ಪ್ರಗತಿಪರ ಚಳುವಳಿಗಳ ಪ್ರಭಾವದಲ್ಲಿ ಇರುವವರ ಸಂಖ್ಯೆ ಕಡಿಮೆ. ಪ್ರಗತಿಪರ ಚಳುವಳಿಗಳಿಗೆ ಇದೊಂದು ದೊಡ್ಡ ಸವಾಲು. ಈ ಸವಾಲನ್ನು ನಾವು ನಾನಾ ಸಂಘಟನೆಗಳು ಮತ್ತು ನಾನಾ ಚಳುವಳಿಗಳ ಐಕ್ಯ ಕಾರ್ಯಾಚರಣೆಯ ಮೂಲಕ ಎದುರಿಸಬೇಕು ಎಂದರು.

ವೇದಿಕೆಯಲ್ಲಿ ದಲಿತ ಸಂಘರ್ಷ ಸಮಿತಿ(ಭೀಮವಾದ)ದ ರಾಜ್ಯ ಸಂಚಾಲಕರಾದ ಮೋಹನ್ ರಾಜ್, ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ಡಾ. ಸಿದ್ದನಗೌಡ ಪಾಟೀಲ್, ಸುಕನ್ಯಾ ಮಾರುತಿ, ಹಿರಿಯ ರಂಗಕರ್ಮಿ ಪ್ರಸನ್ನ, ಎ.ಐ.ಯು.ಟಿ.ಯು.ಸಿ. ಮುಖಂಡರಾದ ಕೆ.ವಿ.ಭಟ್. ಅನೇಕ ಜನಪರ, ಪ್ರಗತಿಪರ ಸಂಘಟನೆಗಳ ನಾಯಕರಿದ್ದರು. ಸಮಾವೇಶದಲ್ಲಿ ವಿವಿಧ ಜಿಲ್ಲೆಗಳಿಂದ ನೂರಾರು ಪ್ರತಿನಿಧಿಗಳು ಭಾಗವಹಿಸಿದ್ದರು. ಕೆ. ಮಹಾಂತೇಶ್, ಇ. ಬಸವರಾಜು ಮತ್ತು ತಂಡ ಹಾಗೂ ಉಮೇಶ್ ಮುಂತಾದವರು ಸಮಾವೇಶದಲ್ಲಿ ಪ್ರಗತಿಪರ ಗೀತೆಗಳನ್ನು ಹಾಡಿದರು.

ಸೌಹಾರ್ದ ಕರ್ನಾಟಕದ ಸಮನ್ವಯಕಾರರಾದ ಡಾ. ಎಸ್.ವೈ. ಗುರುಶಾಂತ್ ಜನವರಿ 30, 2024 ರ ಸೌಹಾರ್ದ ಮಾನವ ಸರಪಳಿ ಕುರಿತ ನಿರ್ಣಯ ಮಂಡಿಸಿದರು. ಮತ್ತೊಬ್ಬ ಸಮನ್ವಯಕಾರರಾದ ಬಿ. ರಾಜಶೇಖರ್ ಮೂರ್ತಿ ಆರಂಭದಲ್ಲಿ ಎಲ್ಲರರನ್ನೂ ಸ್ವಾಗತಿಸಿ, ಕಾರ್ಯಕ್ರಮ ನಿರೂಪಣೆ ಮಾಡಿದರು. ಕೊನೆಯಲ್ಲಿ ಸಾಹಿತಿ ಪ್ರೊ. ರಾಜಶೇಖರ ಕಿಗ್ಗ ವಂದನಾರ್ಪಣೆ ಸಲ್ಲಿಸಿದರು.

ಸಮಾವೇಶದಲ್ಲಿ ನಾನಾ ಕ್ಷೇತ್ರಗಳ ಗಣ್ಯರು

ಸೌಹಾರ್ದತೆ ಕುರಿತ ಈ ರಾಜ್ಯ ಸಮಾವೇಶವು ರಾಜ್ಯದ ನಾನಾ ಕ್ಷೇತ್ರಗಳ ಗಣ್ಯರು, ನಾನಾ ಚಳುವಳಿ ಹಾಗೂ ಸಂಘಟನೆಗಳ ಮುಖಂಡರುಗಳ ಪಾಲ್ಗೊಳ್ಳುವಿಕೆಗೆ ಸಾಕ್ಷಿಯಾಯಿತು, ಹಿರಿಯ ಬಂಡಾಯ ಸಾಹಿತಿಗಳಾದ ಡಾ. ಬಸವರಾಜ ಸಬರದ್, ಮೂಡ್ನಾಕೂಡು ಚಿನ್ನಸ್ವಾಮಿ, ಕೆ. ಷರಿಫಾ, ಚಿಂತಕ ಲೇಖಕ ಶಿವಸುಂದರ್, ನಿವೃತ್ತ ಐ.ಜಿ.ಪಿ. ನಿಸಾರ್ ಅಹಮದ್, ನಿವೃತ್ತ ಡಿ.ಸಿ.ಪಿ. ಬಾವ, ಸಿ.ಐ.ಟಿ.ಯು. ಸಂಘಟನೆಯ ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕೆ. ಮಹಾಂತೇಶ್, ಕರ್ನಾಟಕ ರಾಜ್ಯ ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ರಾಜ್ಯ ಆಧ್ಯಕ್ಷರಾದ ಜಿ.ಎನ್. ನಾಗರಾಜ್, ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರಾದ ವೀರಸಂಗಯ್ಯ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಕಾರ್ಯದರ್ಶಿ ಯಶವಂತ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಹಿರಿಯ ಮುಖಂಡರಾದ ನಿತ್ಯಾನಂದ ಸ್ವಾಮಿ, ರಾಜ್ಯ ಅಧ್ಯಕ್ಷರಾದ ಪುಟ್ಟಮಾದು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ದೇವಿ, ಹಿರಿಯ ಮುಖಂಡರುಗಳಾದ ಕೆ. ನೀಲಾ, ಕೆ.ಎಸ್. ವಿಮಲ, ಸಮುದಾಯ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಜೆ.ಸಿ.ಶಶಧರ್, ಬಹುತ್ವ ಕರ್ನಾಟಕದ ವಿನಯ್ ಶ್ರೀನಿವಾಸ್, ಅಖಿಲ ಭಾರತ ವಕೀಲರ ಸಂಘದ ರಾಜ್ಯ ಅಧ್ಯಕ್ಷರಾದ ಆರ್.ಆರ್. ಹರೀಂದ್ರ, ಎ.ಐ.ಸಿ.ಸಿ.ಟಿ.ಯು. ನಾಯಕರಾದ ಅಪ್ಪಯ್ಯ, ದಲಿತ ಹಕ್ಕು ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಸೇರಿದಂತೆ ಗಣನೀಯ ಸಂಖ್ಯೆಯ ಗಣ್ಯರು, ನಾನಾ ಪ್ರಗತಿಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಪಿಎಂ ಕೇರ್ಸ್ ನಿಧಿಗೆ ಬಂದ ಸಹಸ್ರಾರು ಕೋಟಿ ಹಣ ಸಾರ್ವಜನಿಕರಿಗೋ ಅಥವಾ ಸಂಘಪರಿವಾರಕ್ಕೊ?

ಸಿ. ಸಿದ್ದಯ್ಯ

ಅದು ಕೊರೋನಾ ಸಾಂಕ್ರಾಮಿಕ ಕಾಲ. ಜನರ ಬದುಕಿಗೆ ಅವಶ್ಯಕವಾದ ಯಾವುದೇ ಪೂರ್ವ ಸಿದ್ದತೆಗಳನ್ನೂ ಮಾಡದೆ, ಸರ್ಕಾರ ಘೋಷಿಸಿದ ಏಕಾಏಕಿ 'ಲಾಕ್ ಡೌನ್' ಎಂಬ ಅವೈಜ್ಞಾನಿಕ ಕ್ರಮದಿಂದ, ದೇಶದ 135 ಕೋಟಿ ಜನರು ಏಕಾಏಕಿ ತಮ್ಮೆಲ್ಲಾ ಚುಟುವಟಿಕೆಗಳನ್ನು ನಿಲ್ಲಿಸುವ ಬಲವಂತಕ್ಕೆ ಒಳಗಾದರು. ದಿನನಿತ್ಯ ದುಡಿದು ತಿನ್ನುವ ಕುಟುಂಬಗಳು ತತ್ತು ಅನ್ನಕ್ಕೆ ಪರಿತಪಿಸುವಂತಾಯಿತು. ಅಂಗಡಿಗಳು, ಕಾರ್ಖಾನೆಗಳು, ಹೋಟೆಲ್ ಗಳು, ಬೀದಿ ಬದಿ ವ್ಯಾಪಾರಗಳು ಎಲ್ಲಾ ರೀತಿಯ ವ್ಯಾಪಾರ, ವ್ಯವಹಾರಗಳು ಕತ್ತಲು ಕಳೆದು ಬೆಳಕು ಅರಿಯುವುದರ ಒಳಗೆ ಸ್ಥಬ್ಧವಾದವು. ಕೃಷಿ ಚಟುವಟಿಕೆ ನಿಂತುಹೋಯಿತು. ಒಂದು ನರ ಪಿಳ್ಳೆಯೂ ಓಡಾಡದಂತೆ ಬೀದಿಗಳು, ರಸ್ತೆಗಳು ಬರಿದಾದವು. ಜನರು ತಮ್ಮ ಮನೆಯ ಬಾಗಿಲು ತೆರೆದು ಹೊರಬರದಂತೆ ಆಳುವವರ ಕಟ್ಟಪ್ಪಣೆಯಾಯಿತು. ಹಿರಿಯ ಜೀವಗಳು, ಅನಾರೋಗ್ಯ ಪೀಡಿತರು ಆಸ್ಪತ್ರೆ, ಔಷಧಿಗಳಿಲ್ಲದೆ ನರಳಿದರು. ಎಳೆಯ ಮಕ್ಕಳಿಗೆ ಹಾಲು ಕೊಳ್ಳಲೂ ಆಗದಂತಹ ಸ್ಥಿತಿ ಬಂತು. ಒಂದಷ್ಟು ಹಣ ಇಟ್ಟುಕೊಂಡಿದ್ದವರು ಎಲ್ಲಾದರೂ ಹಾಲು, ತರಕಾರಿ, ಹಣ್ಣು, ದವಸ ಧಾನ್ಯಗಳು ಸಿಗುತ್ತವೆಯೇ ಎಂದು ಮನೆಯ ಹೊಸ್ತಿಲು ದಾಟಿ ಹೊರ ಬಂದು ಬೀದಿಗೆ ಕಾಲಿಟ್ಟರೆ ಸಾಕು, ಪೊಲೀಸರ ಬೆತ್ತಗಳು ಮಾತನಾಡುತ್ತಿದ್ದವು.

ಪಿಎಂ ಕೇರ್ಸ್ ನಿಧಿಯು ಸಂವಿಧಾನದಡಿಯಲ್ಲಿ 'ರಾಜ್ಯ' (State) ಅಲ್ಲ ಎಂದು ಕಂಡುಬಂದರೆ, 'gov' ಎಂಬ ಡೊಮೇನ್ ಹೆಸರು, ಪ್ರಧಾನಿಯವರ ಭಾವಚಿತ್ರ, ರಾಜ್ಯ ಲಾಂಛನ ಇತ್ಯಾದಿಗಳ ಬಳಕೆಯನ್ನು ನಿಲ್ಲಿಸಬೇಕು. ನಿಧಿಯ ಟ್ರಸ್ಟಿಗಳು ಪ್ರಧಾನ ಮಂತ್ರಿ, ರಕ್ಷಣಾ ಸಚಿವರು, ಗೃಹ ಸಚಿವರು ಮತ್ತು ಹಣಕಾಸು ಸಚಿವರು ಮತ್ತು ನಿಧಿ ರಚನೆಯಾದ ತಕ್ಷಣ, ಕೇಂದ್ರವು ತನ್ನ ಉನ್ನತ ಸರ್ಕಾರಿ ಅಧಿಕಾರಿಗಳ ಮೂಲಕ ನಿಧಿಯನ್ನು ಸ್ಥಾಪಿಸಿ ಸರ್ಕಾರವು ನಿರ್ವಹಿಸುತ್ತಿದೆ ಎಂದು ಪ್ರತಿನಿಧಿಸುತ್ತದೆ. ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು, ಪಿಎಂ ಕೇರ್ಸ್ ವೆಬ್‌ಸೈಟ್‌ನ ಆವರ್ತಕ ಲೆಕ್ಕಪರಿಶೋಧನೆ ಮತ್ತು ಅದಕ್ಕೆ ಸ್ವೀಕರಿಸಿದ ದೇಣಿಗೆಗಳ ವಿವರಗಳನ್ನು ಬಹಿರಂಗಪಡಿಸಲು ನಿರ್ದೇಶಿಸುವಂತೆ ಗಂಗ್ವಾಲ್ ಅವರ ವಕೀಲರ ತಂಡ ದೆಹಲಿ ಹೈಕೋರ್ಟ್‌ಗೆ ಮನವಿ ಮಾಡಿತ್ತು.

ಬೆಂಗಳೂರಿನಂತಹ ನಗರಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಬಹುಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಹಿಂದುತ್ವವಾಧಿ ಮಾಧ್ಯಮಗಳ ಕ್ಯಾಮರಾಗಳು ಕಣ್ಣಲ್ಲಿ ಕಣ್ಣಿಟ್ಟು ಜನರು ಮನೆಯಿಂದ ಹೊರಬರುವುದನ್ನೇ ಕಾಯುತ್ತಾ ಓಡಾಡಿಕೊಂಡಿದ್ದವು, ಅಂತಹ ದೃಷ್ಯಗಳನ್ನು ಟಿ.ವಿ. ಗಳಲ್ಲಿ ನೇರ ಪ್ರಸಾರ ಮಾಡುವ ಮೂಲಕ ಕೋಮು ದ್ವೇಷ ಬಿತ್ತುವ ಕೆಲಸ ಮಾಡುತ್ತಿದ್ದವು.

ಕೊರೋನಾ ಕಾಲದ ಸಂಕಷ್ಟಗಳು ಹೇಳಲು ಸಾಕಷ್ಟಿವೆ. ಇದರ ಕುರಿತಾದ ಲೇಖನ ಇದಲ್ಲ, ಆದರೂ, ಇಂತಹ ಸಂಕಷ್ಟದ ಸಮಯವನ್ನೇ ಬಂಡವಾಳಶಾಹಿ ಆಳುವ ವರ್ಗ, ಬಿಜೆಪಿ ಮತ್ತು ಸಂಘಪರಿವಾರ ತಮ್ಮ ಹಿತಕ್ಕೆ ಹೇಗೆಲ್ಲಾ ಬಳಕೆ (ದುರ್ಬಳಕೆ) ಮಾಡಿಕೊಳ್ಳುತ್ತಾರೆ ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಇದಕ್ಕೆ ಒಂದು ಉದಾಹರಣೆ ಪಿ.ಎಂ. ಕೇರ್ಸ್ ಫಂಡ್ (ಪ್ರಧಾನ ಮಂತ್ರಿಗಳ ನಾಗರಿಕ ನೆರವು ಮತ್ತು ತುರ್ತು ಪರಿಸ್ಥಿತಿಗಳಲ್ಲಿ ಪರಿಹಾರ ನಿಧಿ) ಸ್ಥಾಪನೆ.

ಪಿಎಂ ಕೇರ್ಸ್ ನಿಧಿ ಸ್ಥಾಪನೆ

27ನೇ ಮಾರ್ಚ್, 2020 ರಂದು ಪಿಎಂ ಕೇರ್ಸ್ ಫಂಡ್ ಸ್ಥಾಪಿಸಲಾಯಿತು. "COVID–19 ಸಾಂಕ್ರಾಮಿಕ ರೋಗದಿಂದ ಉಂಟಾಗುವಂತಹ ಯಾವುದೇ ರೀತಿಯ ತುರ್ತು ಅಥವಾ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುವ ಪ್ರಾಥಮಿಕ ಉದ್ದೇಶದೊಂದಿಗೆ ಮೀಸಲಾದ ನಿಧಿಯನ್ನು ಹೊಂದುವ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು, ಮತ್ತು ಪೀಡಿತರಿಗೆ ಪರಿಹಾರವನ್ನು ಒದಗಿಸುವ ಹೆಸರಿನಲ್ಲಿ ಪಿಎಂ ಕೇರ್ಸ್ ಫಂಡ್' ಸ್ಥಾಪಿಸಲಾಗಿದೆ. ಪಿಎಂ ಕೇರ್ಸ್ ಫಂಡ್ ಅನ್ನು ಸಾರ್ವಜನಿಕ ಚಾರಿಟಬಲ್ ಟ್ರಸ್ಟ್ ಆಗಿ ನೋಂದಾಯಿಸಲಾಗಿದೆ. ಪಿಎಂ ಕೇರ್ಸ್ ಫಂಡ್‌ನ [PM India 24.8 MB] ಟ್ರಸ್ಟ್ ಡೀಡ್ ಅನ್ನು ನೋಂದಣಿ ಕಾಯಿದೆ, 1908 ರ ಅಡಿಯಲ್ಲಿ ನೋಂದಾಯಿಸಲಾಗಿದೆ." ಇದು ಪಿಎಂ ಕೇರ್ಸ್ ಗೆ ಸಂಬಂಧಿಸಿದ ಸರ್ಕಾರದ ಒಕ್ಕಣೆ.

ಪ್ರಧಾನಮಂತ್ರಿಯವರು ಪಿಎಂ ಕೇರ್ಸ್ ನಿಧಿಯ ಪದನಿಮಿತ್ತ ಅಧ್ಯಕ್ಷರಾಗಿದ್ದಾರೆ ಮತ್ತು ರಕ್ಷಣಾ ಸಚಿವರು, ಗೃಹ ಸಚಿವರು ಮತ್ತು ಹಣಕಾಸು ಸಚಿವರು, ಭಾರತ ಸರ್ಕಾರದ ನಿಧಿಯ ಪದನಿಮಿತ್ತ ಟ್ರಸ್ಟಿಗಳು. ಟ್ರಸ್ಟಿಗಳ ಮಂಡಳಿಯ ಅಧ್ಯಕ್ಷರು (ಪ್ರಧಾನಿ) ಮೂರು ಟ್ರಸ್ಟಿಗಳನ್ನು ಟ್ರಸ್ಟಿಗಳ ಮಂಡಳಿಗೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಅವರು ಸಂಶೋಧನೆ, ಆರೋಗ್ಯ, ವಿಜ್ಞಾನ, ಸಮಾಜಕಾರ್ಯ, ಕಾನೂನು, ಸಾರ್ವಜನಿಕ ಆಡಳಿತ ಮತ್ತು ಲೋಕೋಪಕಾರ ಕ್ಷೇತ್ರದಲ್ಲಿ ಪ್ರಖ್ಯಾತ ವ್ಯಕ್ತಿಗಳಾಗಿರಬೇಕು. ಪಿಎಂಒ ದಲ್ಲಿ ಪಿಎಂ ಕೇರ್ಸ್ ಫಂಡ್‌ನ ಉಸ್ತುವಾರಿ ಹೊಂದಿರುವ ಹೆಚ್ಚುವರಿ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರು ಗೌರವ ಆಧಾರದ ಮೇಲೆ ನಿಧಿಯನ್ನು ನಿರ್ವಹಿಸುತ್ತಾರೆ ಎಂದು ಅದು ಹೇಳುತ್ತದೆ.

ನಿಧಿಯು ಸಂಪೂರ್ಣವಾಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಸ್ವಯಂಪ್ರೇರಿತ ಕೊಡುಗೆಗಳನ್ನು ಒಳಗೊಂಡಿರುತ್ತದೆ ಮತ್ತು ಸರ್ಕಾರದ ಯಾವುದೇ ಬಜೆಟ್ ಬೆಂಬಲವನ್ನು ಪಡೆಯುವುದಿಲ್ಲ. ಮೇಲೆ ತಿಳಿಸಿದ ಉದ್ದೇಶಗಳನ್ನು ಪೂರೈಸಲು ನಿಧಿಯನ್ನು ಬಳಸಿಕೊಳ್ಳಲಾಗುತ್ತದೆ.

ಪಿಎಂ ಕೇರ್ಸ್ ಫಂಡ್‌ಗೆ ದೇಣಿಗೆಗಳು ಆದಾಯ ತೆರಿಗೆ ಕಾಯಿದೆ, 1961 ರ ಅಡಿಯಲ್ಲಿ ಶೇ. 100 ವಿನಾಯಿತಿಗಾಗಿ 80 ಜಿ ಪ್ರಯೋಜನಗಳಿಗೆ ಅರ್ಹತೆ ಪಡೆಯುತ್ತವೆ. ಈ ನಿಧಿಗೆ ದೇಣಿಗೆಗಳನ್ನು ಕಂಪನಿಗಳ ಕಾಯಿದೆ, 2013 ರ ಅಡಿಯಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (CSR) ವೆಚ್ಚವಾಗಿ ಪರಿಗಣಿಸಲು ಅರ್ಹತೆ ಪಡೆಯುತ್ತದೆ.

ವಿದೇಶಿ ದೇಣಿಗೆ

ಈ ನಿಧಿ ಚೀನಾದ ಕಂಪನಿಗಳು ಸೇರಿದಂತೆ ವಿದೇಶಿ ಸಂಸ್ಥೆಗಳಿಂದ ಹಣವನ್ನು ಸ್ವೀಕರಿಸುತ್ತದೆ. 2019–20ರ ಹಣಕಾಸು ವರ್ಷದಲ್ಲಿ ರೂ. 40 ಲಕ್ಷ, 2020–21ರಲ್ಲಿ ರೂ. 494.92 ಕೋಟಿ ಮತ್ತು 2021–22ರಲ್ಲಿ ರೂ. 40.12 ಕೋಟಿ ವಿದೇಶಿ ದೇಣಿಗೆಯಾಗಿ ಸ್ವೀಕರಿಸಲಾಗಿದೆ. ಒಟ್ಟಾರೆಯಾಗಿ, ಕಳೆದ ಮೂರು ವರ್ಷಗಳಲ್ಲಿ ಪಿಎಂ ಕೇರ್ಸ್ ಫಂಡ್‌ಗೆ ವಿದೇಶಿ ದೇಣಿಗೆ ಮೂಲಕ 535.44 ಕೋಟಿ ರೂಪಾಯಿಗಳನ್ನು ಸ್ವೀಕರಿಸಲಾಗಿದೆ ಎಂದು 'ದಿ ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿದೆ.


ಅದೇ ರೀತಿ, 2019–20ನೇ ಹಣಕಾಸು ವರ್ಷದಲ್ಲಿ ರೂ. 3,075.85 ಕೋಟಿ, 2020–21ರಲ್ಲಿ ರೂ. 7013.99 ಕೋಟಿ ಮತ್ತು 2021–22ರಲ್ಲಿ ರೂ. 1,896.76 ಕೋಟಿಗಳನ್ನು ಸ್ವಯಂಪ್ರೇರಿತ ಕೊಡುಗೆಯಾಗಿ ಸ್ವೀಕರಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಸ್ವಯಂಪ್ರೇರಿತ ಕೊಡುಗೆಗಳ ಮೂಲಕ 12,156.39 ಕೋಟಿ ರೂ.ಗಳು ಮತ್ತು ವಿದೇಶಿ ದೇಣಿಗೆಗಳ ಮೂಲಕ 535.43 ಕೋಟಿ ರೂ.ಗಳು ಸೇರಿದಂತೆ ಒಟ್ಟು 12,691.82 ಕೋಟಿ ರೂಪಾಯಿಗಳನ್ನು ಈ ನಿಧಿ ಸ್ವೀಕರಿಸಿದೆ.

2021–22ನೇ ಹಣಕಾಸು ವರ್ಷದಲ್ಲಿ ವಿವಿಧ ಕೋವಿಡ್–19 ಸಂಬಂಧಿತ ಯೋಜನೆಗಳಿಗಾಗಿ 3,716.29 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ನಂತರ ಮಾರ್ಚ್ 2022 ಕ್ಕೆ 5,415.65 ಕೋಟಿ ರೂ.ಗಳನ್ನು ಬ್ಯಾಲೆನ್ಸ್‌ನಲ್ಲಿ ಹೊಂದಿದೆ ಎಂದು ರಶೀದಿ ಮತ್ತು ಪಾವತಿ ಖಾತೆಗಳು ತೋರಿಸಿವೆ. ಮೂರು ಹಣಕಾಸು ವರ್ಷಗಳಿಗೆ, ನಿಧಿಯು 263.98 ಕೋಟಿ ರೂ.ಗಳ ಬಡ್ಡಿಯನ್ನು ಪಡೆದಿದೆ.

ರಾಷ್ಟ್ರೀಯ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿ ಮಾಡಲಾದ ಎಲ್ಲಾ ಕಂಪನಿಗಳಿಗೆ ಟ್ರ್ಯಾಕರ್ primeinfobase.com ನಿಂದ ಸಂಗ್ರಹಿಸಲಾದ ಡೇಟಾ ಪ್ರಕಾರ, ಸರ್ಕಾರಿ ಒಡೆತನದ ಸಂಸ್ಥೆಗಳೇ 2019–20 ಮತ್ತು 2021–22ರ ನಡುವೆ ಈ ನಿಧಿಗೆ ಕನಿಷ್ಠ 2,913.6 ಕೋಟಿ ರೂ.ಗಳ ನೆರವು ನೀಡಿವೆ. ಅಗ್ರ ಐದು ದಾನಿಗಳೆಂದರೆ, ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್ (370 ಕೋಟಿ), ಎನ್‌ಟಿಪಿಸಿ (330 ಕೋಟಿ), ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ (275 ಕೋಟಿ), ಇಂಡಿಯನ್ ಆಯಿಲ್ ಕಾರ್ಪೊರೇಷನ್ (ರೂ.265 ಕೋಟಿ), ಮತ್ತು ಪವರ್ ಫೈನಾನ್ಸ್ ಕಾರ್ಪೊರೇಷನ್ (ರೂ. 222.4. ಕೋಟಿ).

ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (NDRF) ಇದೆ:

ಈ ಮೊದಲೇ, ವಿಪತ್ತು ನಿರ್ವಹಣಾ ಕಾಯಿದೆ 2005, ('ಆಕ್ಟ್') ನ S. 46 ರ ಮೂಲಕ ರಚಿಸಲಾದ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (NDRF) ಇದೆ. ಆ ನಿಧಿಯ ಮೂಲಕವೇ ಸಾಂಕ್ರಾಮಿಕ ಸಂದರ್ಭದಂತಹ ತುರ್ತುಸ್ಥಿತಿ ಸಂದರ್ಭಗಳಲ್ಲಿ ಎನ್‌ಡಿಆರ್‌ಎಫ್ ನಿಂದ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಅರ್ಹತೆ ಇದೆ. ಹೀಗಾಗಿ ಅದರ ಶಾಸನಬದ್ಧ ಉದ್ದೇಶದ ಪ್ರಕಾರ ಬಳಕೆಗೆ ಇನ್ನೂ ಲಭ್ಯವಿದೆ. ಹೆಚ್ಚುವರಿಯಾಗಿ, ಜೈವಿಕ ವಿಪತ್ತುಗಳು ಅಥವಾ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿಗಳಿಗೆ NDRF ಯಾವುದೇ ನಿರ್ದಿಷ್ಟ ನಿಬಂಧನೆಗಳನ್ನು ಮಾಡುವುದಿಲ್ಲ. ಕೇಂದ್ರ ಸರ್ಕಾರವು ಈ ಕುರಿತು ಅಧಿಸೂಚನೆಯನ್ನು ಹೊರಡಿಸಿ ಇದನ್ನು ಈ ಉದ್ದೇಶಗಳಿಗಾಗಿ ಬಳಸಲು ಅವಕಾಶಗಳಿವೆ. ಪಿಎಂ ಕೇರ್ಸ್ ನಿಧಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈ ಅಂಶವನ್ನು ದೆಹಲಿ ಹೈಕೋರ್ಟ್ ಸಹಾ ತನ್ನ ತೀರ್ಪಿನಲ್ಲಿ ಹೇಳಿದೆ.



ಆರ್‌ಟಿಐ ಅಥವಾ ಸಿಎಜಿ ಆಡಿಟ್ ಗೆ ಮುಕ್ತವಾಗಿಲ್ಲ

ಆದರೂ, ಪಿಎಂ ಕೇರ್ಸ್ ಹೆಸರಿನಲ್ಲಿ ಮತ್ತೊಂದು ನಿಧಿಯ ಅವಶ್ಯಕತೆ ಇತ್ತೇ ಎಂಬ ಪ್ರಶ್ನೆ ಮೂಡುತ್ತದೆ. ಪಿಎಂ ಕೇರ್ಸ್ ನ ಸ್ಥಿತಿಯು ಅದರ ಸ್ವರೂಪ ಮತ್ತು ಅದರ ಸುತ್ತ ಪಾರದರ್ಶಕತೆಯ ಕೊರತೆಯಿಂದಾಗಿ ವಿವಾದಾತ್ಮಕವಾಗಿದೆ. ಈ ನಿಧಿಯು ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನಿಂದ ಆರ್‌ಟಿಐ ಅಥವಾ ಆಡಿಟ್‌ಗೆ ಮುಕ್ತವಾಗಿಲ್ಲ. ಅಂದರೆ, ಈ ನಿಧಿಗೆ ಬರುವ ಹಣ ಮತ್ತು ಅದು ಮಾಡುವ ವೆಚ್ಚದ ಲೆಕ್ಕಗಳನ್ನು ಸಾರ್ವಜನಿಕರಿಗೆ, ಸರ್ಕಾರಕ್ಕೆ ತಿಳಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಈ ಸಂಬಂಧ ಸುಪ್ರೀಂ ಕೋರ್ಟ್ ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಕೇಂದ್ರ (CPIL) ಅರ್ಜಿ ಸಲ್ಲಿಸಲಾಗಿತ್ತು.

ಕೋವಿಡ್–19 ಬಿಕ್ಕಟ್ಟಿಗೆ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡುವ ಯಾವುದೇ ಅನುದಾನ ಅಥವಾ ಕೊಡುಗೆಗಳನ್ನು NDRF ನಲ್ಲಿ ಇಡಬೇಕು, ಈ ಕೊಡುಗೆಗಳನ್ನು ಪಿಎಂ ಕೇರ್ಸ್ ನಿಧಿಗೆ ಜಮಾ ಮಾಡುವುದು ಕಾಯಿದೆಯನ್ನು ಉಲ್ಲಂಘಿಸುತ್ತದೆ ಎಂದು ವಾದಿಸಿದ ಅರ್ಜಿದಾರರು, ಪಿಎಂ ಕೇರ್ಸ್ ನಿಧಿಗಿಂತ ಭಿನ್ನವಾಗಿ ಎನ್‌ಡಿಆರ್‌ಎಫ್ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ಮೂಲಕ ಆಡಿಟ್‌ಗೆ ಒಳಪಟ್ಟಿರುತ್ತದೆ ಎಂದು ಒತ್ತಿ ಹೇಳಿದರು. ಮತ್ತು ಪಿಎಂ ಕೇರ್ಸ್ ನಿಧಿಯನ್ನು CAG ಆಡಿಟ್‌ಗೆ ಒಳಪಡಿಸುವಂತೆ ಕೇಳಿಕೊಂಡರು.

ಇದೂ ಅಲ್ಲದೆ, ಸಾಂಕ್ರಾಮಿಕ ಮತ್ತು ನಂತರದ ವಲಸೆ ಬಿಕ್ಕಟ್ಟಿಗೆ ಕೇಂದ್ರ ಸರ್ಕಾರದ ಸ್ಪಂಧನೆ ಅಸಮರ್ಪಕವಾಗಿದೆ ಎಂದು ಅರ್ಜಿದಾರರು ವಾದಿಸಿದರು. ಆದಾಗ್ಯೂ, ನ್ಯಾಯಾಲಯ "ಎನ್‌ಡಿಆರ್‌ಎಫ್ ಶಾಸನಬದ್ಧವಾಗಿ ರಚಿತವಾದ ನಿಧಿಯಾಗಿದ್ದು, ಸಿಎಜಿಯ ಮೇಲ್ವಿಚಾರಣೆಯ ಅಗತ್ಯವಿದೆ ಎಂದು ನ್ಯಾಯಾಲಯವು ಗಮನಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ, ಪಿಎಂ ಕೇರ್ಸ್ ನಿಧಿಯು

ಪುಟ 15 ಕ್ಕೆ



ಕೊರೋನಾ ಅವಧಿಯಲ್ಲಿ, ಮಾರ್ಚ್ 28, 2020 ರಂದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 'ಪಿಎಂ ಕೇರ್ಸ್ ಫಂಡ್' ಎಂಬ ನಿಧಿಯನ್ನು ರಚಿಸಿದರು. ಮೋದಿ ಈ ಪ್ರತಿಷ್ಠಾನದ ಅಧ್ಯಕ್ಷರಾಗಿ ಮತ್ತು ಗೃಹ ಸಚಿವ ಅಮಿತ್ ಶಾ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರುಗಳನ್ನು ಸದಸ್ಯರನ್ನಾಗಿ ನೇಮಿಸಿಕೊಂಡರು. ಈ ನಿಧಿಗೆ ಸಾವಿರಾರು ಕೋಟಿ ರೂ.ಗಳನ್ನು ದಾನ ಪಡೆಯಲಾಗಿದೆ. ಆದರೆ ಇಲ್ಲಿಯವರೆಗೆ ಪಿಎಂ ಕೇರ್ಸ್ ನಿಧಿಗೆ ಎಷ್ಟು ಹಣ ನೀಡಲಾಗಿದೆ, ಬಂದ ಹಣವನ್ನು ಯಾವುದಕ್ಕೆ ಮತ್ತು ಹೇಗೆ ಬಳಸಲಾಗಿದೆ ಎಂಬ ವಿವರಗಳನ್ನು ಮಾಹಿತಿ ಹಕ್ಕು ಕಾಯಿದೆಯ ಅಡಿಯಲ್ಲೂ ನೀಡಿಲ್ಲ. ಮಾಹಿತಿ ಕೇಳಿದರೆ, "ಪಿಎಂ ಕೇರ್ಸ್ ನಿಧಿಯು ಭಾರತದ ಸಂವಿಧಾನದ 12 ನೇ ವಿಧಿಯ ಅಡಿಯಲ್ಲಿ 'ಸಾರ್ವಜನಿಕ ಪ್ರಾಧಿಕಾರ' ಅಲ್ಲ, ಈ ನಿಧಿಯನ್ನು ಭಾರತ ಸರ್ಕಾರವು ನಿಯಂತ್ರಿಸುವುದಿಲ್ಲ. ಟ್ರಸ್ಟ್ ಯಾವುದೇ ಸರ್ಕಾರಿ ಹಣವನ್ನು ಸ್ವೀಕರಿಸುವುದಿಲ್ಲ ಮತ್ತು ಅದರ ಕಾರ್ಯಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಉತ್ತರಿಸಲಾಗುವುದಿಲ್ಲ." ಎನ್ನುತ್ತಾರೆ.

ಮೋದಿ–9 ವರ್ಷಗಳು–ಭಾಗ–34

ಒಂದೂವರೆ ವರ್ಷದಲ್ಲಿ ಮೊದಲ ಬಾರಿಗೆ ನಗು, ನಿರಾಳತೆಯ ಬಾಷ್ಪ



“ಕಳೆದ ಒಂದೂವರೆ ವರ್ಷದಲ್ಲಿ ಮೊದಲ ಬಾರಿಗೆ ನಕ್ಕಿದ್ದೇನೆ, ನಿರಾಳತೆಯಿಂದ ಅತ್ತಿದ್ದೇನೆ”–ಇದು ಸುಪ್ರಿಂ ಕೋರ್ಟಿಗೆ ಈ ತೀರ್ಪಿಗಾಗಿ ಕೃತಜ್ಞತೆ ಸಲ್ಲಿಸುತ್ತ ಬಿಲ್ಕಿಸ್ ಬಾನೊ ಹೇಳಿರುವ ಮಾತು.

“ಇಂದು ನನಗೆ ನಿಜವಾಗಿಯೂ ಹೊಸ ವರ್ಷ. ನಿರಾಳತೆಯ ಕಣ್ಣೀರು ಸುರಿಸಿದ್ದೇನೆ. ಒಂದೂವರೆ ವರ್ಷದಿಂದ ಮೊದಲ ಬಾರಿಗೆ ನಗುತ್ತಿದ್ದೇನೆ. ನನ್ನ ಮಕ್ಕಳನ್ನು ಅಪ್ಪಿಕೊಂಡಿದ್ದೇನೆ” ಎಂದು ಬಿಲ್ಕಿಸ್ ಬಾನೊ ತನ್ನ ವಕೀಲೆ ಶೋಭಾ ಗುಪ್ತ ಮೂಲಕ ಪ್ರಕಟಿಸಿರುವ ಪತ್ರದಲ್ಲಿ ಹೇಳಿದ್ದಾರೆ.

“ನನ್ನ ಎದೆಯ ಮೇಲಿಂದ ಬೆಟ್ಟದ ಗಾತ್ರದ ಒಂದು ಕಲ್ಲನ್ನು ಇಳಿಸಿದಂತಾಗಿದೆ. ನನಗೆ ಮತ್ತೆ ಉಸಿರಾಡಲು ಸಾಧ್ಯವಾಗಿದೆ. ನ್ಯಾಯ ಎಂದರೆ ಹೀಗಿರಬೇಕು ಎಂದನಿಸುತ್ತಿದೆ” ಎನ್ನುತ್ತ “ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ನನಗೆ, ನನ್ನ ಮಕ್ಕಳಿಗೆ ಮತ್ತು ಎಲ್ಲೆಡೆಯ ಮಹಿಳೆಯರಿಗೆ ಸಮಾನ ನ್ಯಾಯದ ಭರವಸೆಯನ್ನು ಎತ್ತಿ ಹಿಡಿದಿದ್ದಕ್ಕಾಗಿ ಮತ್ತು ಆಶಾಭಾವನೆ ಮೂಡಿಸಿದ್ದಕ್ಕಾಗಿ ಧನ್ಯವಾದ ಅರ್ಪಿಸುತ್ತೇನೆ” ಎಂದು ಬಿಲ್ಕಿಸ್ ಬಾನೊ ಈ ಪತ್ರದಲ್ಲಿ ಹೇಳಿದ್ದಾರೆ.

ಮುಂದುವರೆದು, ಸದಾ ತನ್ನ ಜತೆನಿಂತಿರುವ ಪತಿ ಮತ್ತು ಮಕ್ಕಳು ಹಾಗೂ "ಪ್ರತಿಯೊಂದು ತಿರುವಿನಲ್ಲೂ ಕೈಹಿಡಿದ” ಸ್ನೇಹಿತವೃಂದಕ್ಕೆ ಮತ್ತು “ನ್ಯಾಯದ ವಿಚಾರದಲ್ಲಿ ಎಂದೂ ನಂಬಿಕೆ ಕಳಕೊಳ್ಳದಂತೆ ಮಾಡಿರುವ” ತನ್ನ ವಕೀಲೆ ಶೋಭಾ ಗುಪ್ತರವರಿಗೆ ಧನ್ಯವಾದ ಅರ್ಪಿಸುತ್ತ ಆಕೆ “ಒಂದೂವರೆ ವರ್ಷದ ಹಿಂದೆ, ನನ್ನ ಕುಟುಂಬವನ್ನು ಧ್ವಂಸ ಮಾಡಿದವರಿಗೆ, ನನ್ನ ಅಸ್ತಿತ್ವನ್ನೇ ಭಯಭೀತಗೊಳಿಸಿದವರಿಗೆ ಬೇಗನೇ ಬಿಡುಗಡೆ ಕೊಟ್ಟಾಗ ನಾನು ಕುಸಿದೇ ಬಿಟ್ಟಿದ್ದೆ. ಲಕ್ಷಾಂತರ ಸೌಹಾರ್ದಗಳು ನನ್ನೆಡೆಗೆ ಬರುವ ವರೆಗೆ ನನ್ನ ಧೈರ್ಯದ ಸೆಲೆಯೇ ಬತ್ತಿ ಹೋದಂತಾಗಿತ್ತು” ಎಂದಿರುವ ಆಕೆ ಸುಪ್ರಿಂಕೋರ್ಟಿಗೆ ಸಾವಿರಾರು ಜನರ ಅರ್ಜಿಗಳು, ಮನವಿಗಳು, ಬಹಿರಂಗ ಪತ್ರಗಳು ಭಾರತದ ಪ್ರತಿಯೊಬ್ಬ ಮಹಿಳೆಗೂ “ ನ್ಯಾಯ ಎಂಬ ವಿಚಾರವನ್ನು ಕಾಪಾಡುವ ಇಚ್ಛಾಶಕ್ತಿಯನ್ನು ಕೊಟ್ಟಿವೆ” ಈ ಪತ್ರದಲ್ಲಿ ಹೇಳುತ್ತಾರೆ.

“ನನ್ನ ಸ್ವಂತದ ಮತ್ತು ನನ್ನ ಮಕ್ಕಳ ಬದುಕಿಗೆ ಈ ತೀರ್ಪಿನ ಪೂರ್ಣ ಅರ್ಥವನ್ನು ಅರಗಿಸಿಕೊಳ್ಳುತ್ತಿರುವಂತೆಯೇ ಇಂದು ನನ್ನ ಹೃದಯದಿಂದ ಹೊಮ್ಮುವ ಸರಳ ಪ್ರಾರ್ಥನೆಯೆಂದರೆ, ಎಲ್ಲಕ್ಕೂ ಮಿಗಿಲಾಗಿ ಕಾನೂನಿನ ಆಳ್ವಿಕೆ ಮತ್ತು ಎಲ್ಲರಿಗೂ ಕಾನೂನಿನ ಮುಂದೆ ಸಮಾನತೆ” ಎಂದು ಬಿಲ್ಕಿಸ್ ಬಾನೊ ತನ್ನ ಪತ್ರದ ಕೊನೆಯಲ್ಲಿ ಹೇಳುತ್ತಾರೆ.

ಗುಜರಾತಿ ಮತ್ತು ಹಿಂದಿಯಲ್ಲಿ ಈ ಪತ್ರವನ್ನು ಬಿಡುಗಡೆ ಮಾಡಲಾಗಿದೆ. ೦

ಗುಜರಾತ್ ಸರಕಾರ ಪ್ರತಿ ತಿರುವಿನಲ್ಲೂ ಅಪರಾಧಿಗಳ ಕೈಹಿಡಿದದ್ದು ಯಾಕೆ?

ಗುಜರಾತ್ ಸರಕಾರದ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಿದವರಲ್ಲಿ ಒಬ್ಬರಾದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಸುಭಾಷಿಣಿ ಅಲಿ ಈ ತೀರ್ಪನ್ನು ಸ್ವಾಗತಿಸುತ್ತ ಗುಜರಾತ್ ಸರಕಾರ ಏಕೆ ಅಪರಾಧಿಗಳಿಗೆ ಸಹಾಯ ಮಾಡುತ್ತ ಬಂದಿದೆ ಎಂದು ಪ್ರಶ್ನಿಸಿದ್ದಾರೆ.

ಬಿಲ್ಕಿಸ್ ಬಾನೊ ಎಂಟು ವರ್ಷಗಳ ಹೋರಾಟದ ನಂತರ ನ್ಯಾಯ ಪಡೆದಿದ್ದಳು. ಈ ಅವಧಿಯಲ್ಲಿ ಗುಜರಾತ್ ಸರಕಾರ ಪ್ರತಿ ತಿರುವಿನಲ್ಲೂ ಅಪರಾಧಿಗಳ ನೆರವಿಗೆ ನಿಂತಿತ್ತು. ಶಿಕ್ಷೆಯಾದ ಮೇಲೂ ಈ ಅಪರಾಧಿಗಳು ಮತ್ತೆ–ಮತ್ತೆ ಪೆರೋಲ್ ಪಡೆಯುತ್ತಿದ್ದರು. ಕಳೆದ ಆಗಸ್ಟ್ 15ರಂದು ಅತ್ತ ಕೆಂಪು ಕೋಟೆಯಲ್ಲಿ ಪ್ರಧಾನಿಗಳು ಮಹಿಳೆಯರ ರಕ್ಷಣೆ ಮತ್ತು ಉದ್ಧಾರದ ಬಗ್ಗೆ ಭಾವಪೂರ್ಣವಾಗಿ ಮಾತಾಡುತ್ತಿದ್ದಾಗ, ಈ ಸರಕಾರ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದವರಿಗೆ ಕ್ಷಮಾದಾನ ನೀಡಿ ಬಿಡುಗಡೆ ಮಾಡಿತ್ತು. ಇದರ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಮನವಿ ಸಲ್ಲಿಸಿದೆವು. ಸ್ವತಃ ಬಿಲ್ಕಿಸ್ ಬಾನೊ ಅರ್ಜಿ ಸಲ್ಲಿಸಿದರು. ಈಗ ಈ ತೀರ್ಪು ಬಂದಿದೆ.

ಇಲ್ಲಿ ಏಳುವ ಒಂದು ದೊಡ್ಡ ಪ್ರಶ್ನೆ ಎಂದರೆ, ಗುಜರಾತ್ ಸರಕಾರ ಏಕೆ ಹೀಗೆ ಸದಾ ಈ ಅತ್ಯಾಚಾರಿಗಳ ಜತೆಗೆ ನಿಂತಿದೆ, ಅದಕ್ಕೆ ಈ ಕೊಲೆಗಡುಕರ ಜತೆ ನಿಲ್ಲಬೇಕಾದ ಅನಿವಾರ್ಯತೆಯಾದರೂ ಏನು ಎಂದು ಸುಭಾಷಿಣಿ ಅಲಿ ಪ್ರಶ್ನೆ ಮಾಡಿದ್ದಾರೆ. ಈಗ ಒಂದು ಹೊಸ ನ್ಯಾಯ ವ್ಯವಸ್ಥೆ ಮೂಡಿ ಬಂದಿದೆ, ಬಿಜೆಪಿಯ ಪರವಾಗಿದ್ದರೆ, ಎಂತಹುದೇ ಜಘನ್ಯ ಅಪರಾಧ ಮಾಡಿದರೂ ಶಿಕ್ಷೆಯೇ ಆಗುವುದಿಲ್ಲ, ಕ್ಷಮೆ ಸಿಗುತ್ತದೆ. ಇದು ದೇಶದ ಮಹಿಳೆಯರಿಗೆ ಅಪಾಯಕಾರಿ, ನ್ಯಾಯ ಪ್ರಕ್ರಿಯೆಯನ್ನು ಉಳಿಸಿಕೊಳ್ಳಲು ಇದನ್ನು ಪ್ರತಿರೋಧಿಸಬೇಕಾಗುತ್ತದೆ ಎಂದಿರುವ ಸುಭಾಷಿಣಿ ಅಲಿ, ಗುಜರಾತ್ ಸರಕಾರ ಬಿಲ್ಕಿಸ್ ಬಾನೊ ಮತ್ತು ಆಕೆಯ ಪರಿವಾರದವರಿಗೆ ರಕ್ಷಣೆ ಒದಗಿಸಬೇಕು, ಅವರು ಶಾಂತಿಯಿಂದಿರಲು ಬಿಡಬೇಕು, ಅಪರಾಧಿಗಳನ್ನು ಜೈಲಿನಲ್ಲೇ ಇಡಬೇಕು ಎಂದು ಆಗ್ರಹಿಸಿದ್ದಾರೆ. ಮಹಾರಾಷ್ಟ್ರ ಸರಕಾರ ಗುಜರಾತ್ ಸರಕಾರ ಮಾಡಿದಂತೆ ಮಾಡಬಾರದು, ಹಾಗೇನಾಧರೂ ಮಾಡಿದರೆ ದೇಶದ ಜನತೆ ಅವರನ್ನು ಕ್ಷಮಿಸುವುದಿಲ್ಲ ಎಂದೂ ಸುಭಾಷಿಣಿ ಅಲಿ ಹೇಳಿದ್ದಾರೆ.

ಗುಜರಾತ್ ಸರಕಾರ ಎಲ್ಲ ಅಪರಾಧಿಗಳಿಗೆ ಕ್ಷಮಾದಾನ ಕೊಟ್ಟು ಅವರು ಬಿಡುಗಡೆಯಾಗಿ ಸ್ವಾಗತ ಪಡೆಯುತ್ತಿದ್ದಾಗ “ಇದು ನ್ಯಾಯದ ಅಂತ್ಯವೇ ಎಂದು ಬಿಲ್ಕಿಸ್ ಕೇಳಿದಳು ಎಂಬ ವಿಷಯ ತಿಳಿದು ಬಂತು. ಅದು ವಿದ್ಯುದಾಘಾತದಂತಿತ್ತು. ನಾವೆಲ್ಲ ಏನು ಮಾಡುತ್ತಿದ್ದೇವೆ ಎಂದು ಯೋಚಿಸಿದೆ. ನಮ್ಮ ಅದೃಷ್ಟವೆಂದರೆ, ಕಪಿಲ್ ಸಿಬಲ್, ಅಪರ್ಣಾ ಭಟ್‌ರಂತಹ ಒಳ್ಳೆಯ ವಕೀಲರು ಮತ್ತು ಇತರರು ನೆರವಿಗಿದ್ದರು” ಎಂದು ಪತ್ರಕರ್ತರೊಡನೆ ಮಾತಾಡುತ್ತ ಸುಭಾಷಿಣಿ ಅಲಿ ಹೇಳುತ್ತಾರೆ.

ಯಾವುದೇ ಕೊಮು ಗಲಭೆಗಳಲ್ಲಿ ಇಂತದ್ದೊಂದು ಅಮಾನುಷ ಕೃತ್ಯ ಹಿಂದೆಂದೂ ನಡೆದಿರಲಿಕ್ಕಿಲ್ಲ. ಅದಕ್ಕೆ ಶಿಕ್ಷೆಗೊಳಗಾದವರಿಗೆ ಕ್ಷಮಾದಾನ ಎಂಬುದು ನಿಜವಾಗಿಯೂ ಭೀಕರ ಸುದ್ದಿಯಾಗಿತ್ತು. ಬಿಲ್ಕಿಸ್ ಬಾನೊವನ್ನು “ನಾನು ಜನವಾದಿ ಮಹಿಳಾ ಸಂಘಟನೆಯ ನಿಯೋಗದ ಭಾಗವಾಗಿ ಹೋಗಿದ್ದಾಗ ಭೇಟಿಯಾಗಿದ್ದೆ. ಆಗ ಆಕೆ ನಾಲ್ಕು ತಿಂಗಳ ಗರ್ಭಿಣಿ, ತುಂಬಾ ತೆಳ್ಳಗಿದ್ದಳು, ಈ ಬಡ ಹೆಂಗಸು ಧೈರ್ಯ ತೋರಿದಳು, ಆಕೆಯ ಗಂಡ ಆಕೆಯ ಬೆಂಬಲಕ್ಕೆ ನಿಂತರು. ಎಂಟು ವರ್ಷಗಳ ನಂತರ, ಈ ಕೇಸನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಿದ ನಂತರ, ಶಿಕ್ಷೆಯಾಯಿತು. ಶಿಕ್ಷೆಯಾದ ನಂತರವೂ ಈ ಮಂದಿ ನಿಯಮಿತವಾಗಿ ಪೆರೋಲ್ ಪಡೆಯುತ್ತಿದ್ದರು. ಎದ್ದು ಕಾಣುತ್ತಿದ್ದ ಸಂಗತಿಯೆಂದರೆ ಗುಜರಾತ್ ಸರಕಾರ ಯಾವುದೇ ನಾಚಿಕೆಯಿಲ್ಲದೆ ಈ ಘೋರ ಕೃತ್ಯ ಎಸಗಿದವರ ಜೊತೆಗೆ ನಿಂತದ್ದು. ಒಂದು ಸರಕಾರ ರಕ್ಷಣೆ ಕೇಳಿದ ದುರ್ಬಲರ ಜೊತೆ ನಿಲ್ಲಬೇಕು. ನಂತರ ಈ ಕ್ಷಮಾದಾನ....**ಇನ್ನೊಂದು ಆಘಾತದ ಸಂಗತಿಯೆಂದರೆ, ಈ ಸರಕಾರ ಈ ಮಂದಿಯ ಪರವಾಗಿ ನಿಲ್ಲಲು ಎಂತಹ ಮಟ್ಟಕ್ಕೆ ಇಳಿಯಿತು ಎಂಬುದು. ಈ ಮಂದಿಗೆ ಕ್ಷಮಾದಾನ ನೀಡಲು ತಮ್ಮ ಅಧಿಕಾರ ವ್ಯಾಪ್ತಿ ಮೀರಿ ಕಾನೂನಿನ ಮೇರೆ ಮೀರಿದ್ದು ಮಾತ್ರವಲ್ಲದೆ, ಪ್ರತಿಯೊಬ್ಬರನ್ನೂ ಬೆದರಿಸಲು, ಈ ಪ್ರಕರಣವನ್ನು ಎಷ್ಟು ಸಾಧ್ಯವೋ ಅಷ್ಟು ವಿಳಂಬಗೊಳಿಸಲು ಸುಪ್ರಿಂ ಕೋರ್ಟಿಗೆ ಪ್ರತಿದಿನ ರಾಜ್ಯದ ಸಮಸ್ತ ಕಾನೂನು ವ್ಯವಸ್ಥೆಯನ್ನು, ಉನ್ನತ ವಕೀಲರನ್ನು ತರಲಾಗುತ್ತಿತ್ತು**. ಈ ಕ್ರಿಮಿನಲ್‌ಗಳನ್ನು ಏಕೆ ರಕ್ಷಿಸುತ್ತಿದ್ದೀರಿ ಎಂದು ಸುದ್ದಿ ಚಾನಲ್‌ಗಳಲ್ಲಿ ಕ್ಷಮಾದಾನವನ್ನು ಸಮರ್ಥಿಸಿಕೊಂಡ ಬಿಜೆಪಿ ಮುಖಂಡರನ್ನು ಕೇಳಬೇಕಾಗಿದೆ” ಎನ್ನುತ್ತಾರೆ ಸುಭಾಷಿಣಿ ಅಲಿ.





ಈಗಲೂ ಭಾರತದಲ್ಲಿ ಹಣದಿಂದ ಎಲ್ಲವನ್ನೂ ಖರೀದಿಸ ಲಾಗುವದಿಲ್ಲ, ಬೇಸರದ ಸಂಗತಿ... (ಗುಜರಾತಿನಲ್ಲಿ ಒಬ್ಬ ಉದ್ಯಮಿ)

ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

“ಕ್ಷಮಾದಾನದ ಬಗ್ಗೆ ಬಹಳಷ್ಟು ಮಂದಿ ಆತಂಕಿತರಾಗಿದ್ದರು. ಒಂದು ಅರ್ಜಿಯ ಬಗ್ಗೆ ಯೋಚಿಸಲಾಗುತ್ತಿತ್ತು. ಅವರು ನನ್ನನ್ನು ಸಂಪರ್ಕಿಸಿದರು, ನಾನೂ ಆ ಬಗ್ಗೆ ಬಹಳ ಕಳವಳಕ್ಕೆ ಒಳಪಟ್ಟಿದ್ದರಿಂದ ಕೂಡಲೇ ಒಪ್ಪಿದೆ" ಎನ್ನುತ್ತಾರೆ ಕ್ಷಮಾದಾನದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸುಭಾಷಿಣಿ ಅಲಿಯವರೊಂದಿಗೆ ಸಹಿ ಹಾಕಿದ ಇನ್ನೊಬ್ಬರಾದ ಲಕ್ನೌ ವಿಶ್ವವಿದ್ಯಾಲಯದ ನಿವೃತ್ತ ತತ್ವಶಾಸ್ತ್ರ ಪ್ರಾಧ್ಯಾಪಕಿ ಮತ್ತು ಸಾಮಾಜಿಕ ಕಾರ್ಯಕರ್ತೆ 80 ವರ್ಷದ ಪ್ರೊ. ರೂಪರೇಖಾ ವರ್ಮಾ.

“ನ್ಯಾಯ ಸಿಗುವ ಬಗ್ಗೆ ನನಗೆ ಭರವಸೆ ಇರಲಿಲ್ಲ.. ಹಲವು ತೀರ್ಪುಗಳು ನಮಗೆ ನಿರಾಸೆಯುಂಟು ಮಾಡಿವೆ. ಕಾನೂನಿನ ಆಳ್ವಿಕೆಯಲ್ಲಿ ನನಗೀಗ ಮತ್ತೆ ವಿಶ್ವಾಸ ಮೂಡಿದೆ. ಇದೀಗ ವಿಶೇಷ ದಿನ. ಬಿಲ್ಕಿಸ್‌ಗೆ ಒಂದು ದೊಡ್ಡ ಸೆಲ್ಯೂಟ್ ಮತ್ತು ನ್ಯಾಯಾಧೀಶರುಗಳಿಗೆ ದೊಡ್ಡ ಥ್ಯಾಂಕ್ಸ್” ಎಂದಿದ್ದಾರೆ ಈ ಪ್ರಾಧ್ಯಾಪಕಿ.

ಅರ್ಜಿಗೆ ಸಹಿ ಹಾಕಿದ ಮತ್ತೊಬ್ಬ ರೆಂದರೆ ಪತ್ರಕರ್ತೆ ರೇವತಿ ಲಾವುಲ್. “ನಾನಾಗ ಗುಜರಾತಿನಲ್ಲಿ ಎನ್‌ಡಿಟಿವಿ ಪತ್ರಕರ್ತೆಯಾಗಿದ್ದೆ, ಘಟನೆ ನಡೆದ ನಂತರ ಬಿಲ್ಕಿಸ್ ಬಾನೊಳನ್ನು ಭೇಟಿಯಾಗಿದ್ದೆ. ಮೂರನೇ ಅರ್ಜಿದಾರಳಾಗಿ ಸಹಿ ಹಾಕಲು ಕೂಡಲೇ ಒಪ್ಪಿದೆ” ಎನ್ನುತ್ತಾರೆ. ಅವರು ಈ ಕೋಮುಗಲಭೆಯ ಬಗ್ಗೆ “ಅನಾಟಮಿ ಆಫ್ ಹೇಟ್" ಎಂಬ ಪುಸ್ತಕವನ್ನೂ ಬರೆದಿದ್ದಾರೆ.

***


ಮುಖ್ಯಮಂತ್ರಿ ಸೇರಿದಂತೆ ಗುಜರಾತ್ ಸರಕಾರದ ಮತ್ತು ಕೇಂದ್ರ ಗೃಹ ಮಂತ್ರಿ ಮತ್ತು ಸ್ವತಃ ಪ್ರಧಾನ ಮಂತ್ರಿ ಸೇರಿದಂತೆ ಕೇಂದ್ರ ಸರಕಾರದ ಮುಖಂಡರೆಲ್ಲರೂ ಈ ತೀರ್ಪಿನ ಬಗ್ಗೆ ದಿವ್ಯಮೌನ ಧರಿಸಿರುವಂತೆ ಕಾಣುತ್ತದೆ. ಈ ನಡುವೆ 11 ಅಪರಾಧಿಗಳಲ್ಲಿ 9 ಮಂದಿ ತಲೆಮರೆಸಿಕೊಂಡಿದ್ದಾರೆ ಎಂದು ವರದಿಯಾಗಿದೆ.

ಡಬಲ್ ಇಂಜಿನ್ ಸರಕಾರಗಳಿಗೆ ಸುಪ್ರಿಂ ಕೋರ್ಟ್ ಚಾಟಿಯೇಟು

ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಕೂಡ, ಒಂದೂವರೆ ವರ್ಷದ ನಂತರವಾದರೂ ಸುಪ್ರಿಂ ಕೋರ್ಟ್ ಅತ್ಯಾಚಾರಿಗಳಿಗೆ ನೀಡಿದ ಕ್ಷಮಾದಾನವನ್ನು ರದ್ದು ಮಾಡಿರುವುದನ್ನು ಸ್ವಾಗತಿಸುತ್ತ ತೀರ್ಪಿನಲ್ಲಿ ಗುಜರಾತ್ ಸರಕಾರದ ಅರ್ಜಿ ವಂಚನೆಯಿಂದ ಕೂಡಿತ್ತು ಎಂದಿರುವುದು ಅದರ ಕೆನ್ನೆಗೆ ಬಾರಿಸಿದಂತಾಗಿದೆ. ಮತ್ತು ಗುಜರಾತ್ ಸರಕಾರ ಕೇಂದ್ರ ಗೃಹ ಮಂತ್ರಾಲಯದ ಒಪ್ಪಿಗೆಯ ನಂತರವೇ ಇದನ್ನು ಮಾಡಿದ್ದೇವೆ ಎಂದಿರುವುದು, ಈ ‘ಡಬಲ್’ ಇಂಜಿನ್ ಸರಕಾರಗಳಿಗೆ ಕೊಟ್ಟ ಚಾಟಿಯೇಟು ಎಂದು ವರ್ಣಿಸಿದ್ದಾರೆ. ನ್ಯಾಯಕ್ಕಾಗಿ ಹೋರಾಟ, ಈ ಅಪರಾಧಿಗಳು ಮತ್ತೆ ಜೈಲಿಗೆ ಹೋಗುವ ವರೆಗೂ ಮುಂದುವರೆಯುತ್ತದೆ ಎಂದು ಅವರು ಹೇಳಿದ್ದಾರೆ.



ಈ ಸಂದರ್ಭದಲ್ಲಿ ಬಿಲ್ಕಿಸ್ ಬಾನೊ ಅವರ ಧೈರ್ಯಕ್ಕೆ ಸಲಾಂ ಹೇಳಬೇಕು ಎಂದೂ ಅವರು ಹೇಳಿದ್ದಾರೆ. ಆಕೆ ಪೀಡಿತೆಯಾಗಿದ್ದವಳು, ಬದುಕುಳಿದವಳಾಗಿ, ನಂತರ ಒಬ್ಬ ಹೋರಾಟಗಾರ್ತಿಯಾಗಿ ಪರಿವರ್ತನೆ ಹೊಂದಿದ್ದಾರೆ. ಆಕೆ ಲೈಂಗಿಕ ಮತ್ತು ಕೋಮುವಾದಿ ಹಿಂಸಾಚಾರದ ವಿರುದ್ಧ ಹೋರಾಡುತ್ತಿರುವ ಮಹಿಳೆಯರಿಗೆ ಒಂದು ಮಾದರಿಯಾಗಿದ್ದಾರೆ, ಅವರ ಹೋರಾಟದಲ್ಲಿ ನಾವು ಸದಾ ಅವರೊಂದಿಗಿದ್ದೇವೆ ಎಂದು ಬೃಂದಾ ಕಾರಟ್ ಹೇಳಿದ್ದಾರೆ. ೦



ಅರ್ಜೆಂಟಿನಾದ ಕರೆನ್ಸಿಯ 'ಡಾಲರೀಕರಣ' –ಆರ್ಥಿಕ ಬಿಕ್ಕಟ್ಟಿಗೆ ನವ–ಫ್ಯಾಸಿಸ್ಟ್ 'ಪರಿಹಾರ'



ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಮುನ್ನೆಲೆಗೆ ಬರುತ್ತಿರುವ ನವ–ಫ್ಯಾಸಿಸ್ಟ್ ಆಡಳಿತಗಾರರ ಪಟ್ಟಿಗೆ ಅರ್ಜೆಂಟಿನಾದ ಜೇವಿಯರ್ ಮಿಲೀ ಇತ್ತೀಚಿನ ಸೇರ್ಪಡೆಯಾಗಿದ್ದಾರೆ. ನವ–ಫ್ಯಾಸಿಸಂನ ಈ ಏರಿಕೆಯು ನವ–ಉದಾರವಾದದ ಬಿಕ್ಕಟ್ಟಿನ ಒಂದು ಪ್ರತಿಬಿಂಬವಾಗಿದೆ, ಇದು ಅರ್ಜೆಂಟೀನಾದ ಸಂದರ್ಭದಲ್ಲಿ ಸುಮಾರು 150% ಹಣದುಬ್ಬರದಲ್ಲಿ ಪ್ರಕಟವಾಗಿದ್ದು ಅದಕ್ಕೆ ಪರಿಹಾರವಾಗಿ ಮಿಲೀ ತನ್ನ ದೇಶದ ಕೇಂದ್ರೀಯ ಬ್ಯಾಂಕನ್ನೇ ರದ್ದು ಮಾಡಿ, ಡಾಲರನ್ನೇ ಅಲ್ಲಿಯ ಕರೆನ್ಸಿಯಾಗಿ ಮಾಡುವ ಪರಿಹಾರವನ್ನು ಮುಂದಿಟ್ಟಿದ್ದಾರೆ. ಆದರೆ ಇಂತಹ ನವ–ಫ್ಯಾಸಿಸ್ಟ್ ಕಾರ್ಯತಂತ್ರ ದುಡಿಯುವ ಜನವರ್ಗಗಳ ಇಮ್ಮಡಿ ಹಿಂಡಿಕೆಗೆ ಕಾರಣವಾಗಿ ಇನ್ನಷ್ಟು ಉಸಿರುಗಟ್ಟುವಂತಹ ಪರಿಸ್ಥಿತಿಯನ್ನೇ ತರುತ್ತದೆಯೇ ಹೊರತು ಬಿಕ್ಕಟ್ಟನ್ನು ಪರಿಹರಿಸಲಾರದು. ನಿಜವಾಗಿಯೂ ಬಿಕ್ಕಟ್ಟಿಗೆ ಇರುವ ಪರಿಹಾರ ಎಂದರೆ, ನವ–ಉದಾರವಾದಿ ವ್ಯವಸ್ಥೆಯನ್ನೇ ಮೀರುವುದು.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಪ್ರತಿಯೊಂದು ದೇಶವೂ ಒಂದು ನಿರ್ದಿಷ್ಟ ಕರೆನ್ಸಿಯನ್ನು ರೂಪಿಸಿಕೊಂಡಿರುತ್ತದೆ ಮತ್ತು ಈ ಕರೆನ್ಸಿಯನ್ನು ಮುದ್ರಿಸುವ ಮತ್ತು ಅದರ ಚಲಾವಣೆಯ ಜವಾಬ್ದಾರಿಯನ್ನು ಆ ದೇಶದ ಕೇಂದ್ರ ಬ್ಯಾಂಕ್ ನಿರ್ವಹಿಸುತ್ತದೆ. ಈ ಕೇಂದ್ರ ಬ್ಯಾಂಕ್, ವಿದೇಶ ವ್ಯಾಪಾರ ಸಂಬಂಧವಾಗಿ ದೇಶದ ಕರೆನ್ಸಿಯ ಮೌಲ್ಯವನ್ನು ಮತ್ತೊಂದು ದೇಶದ ಕರೆನ್ಸಿಯ ಮೌಲ್ಯದೊಂದಿಗೆ ಸರಿದೂಗಿಸುವ ಪ್ರಮಾಣವನ್ನು ನಿಗದಿಪಡಿಸುತ್ತದೆ. ದೇಶ ದೇಶಗಳ ಕರೆನ್ಸಿಗಳು ಮತ್ತೊಂದು ದೇಶದ ಕರೆನ್ಸಿಯ ವಿರುದ್ಧವಾಗಿ, ಕೆಲವು ನಿರ್ದಿಷ್ಟ ಕಾರಣಗಳಿಂದಾಗಿ ಏರಿಳಿತಗಳಿಗೆ ಒಳಗಾಗುತ್ತವೆ. ಅಂತಹ ಸಂದರ್ಭಗಳಲ್ಲಿ ದೇಶೀಯ ಕರೆನ್ಸಿಗಳ ಮೌಲ್ಯವನ್ನು (ವಿನಿಮಯ ದರವನ್ನು) ಆಯಾ ದೇಶಗಳ ಕೇಂದ್ರ ಬ್ಯಾಂಕುಗಳು ಪರಿಷ್ಕರಿಸುತ್ತವೆ. ವಿಶ್ವದ ಎಲ್ಲ ದೇಶಗಳೂ ಈ ಕ್ರಮವನ್ನು ಅನುಸರಿಸುತ್ತವೆ. ಆದರೆ, ಅರ್ಜೆಂಟೀನಾದ ಹೊಸ ಅಧ್ಯಕ್ಷ ಜೇವಿಯರ್ ಮಿಲೀ ತನ್ನ ದೇಶದ ಕೇಂದ್ರ ಬ್ಯಾಂಕ್ ಅನ್ನು ಸಂಪೂರ್ಣವಾಗಿ ರದ್ದುಗೊಳಿಸುವ ಮತ್ತು ಅರ್ಜೆಂಟೀನಾದ ಕರೆನ್ಸಿ 'ಪೆಸೊ' ಅನ್ನು ಸಂಪೂರ್ಣವಾಗಿ ರದ್ದು ಮಾಡಿ ಅದರ ಸ್ಥಾನದಲ್ಲಿ ಅಮೆರಿಕಾದ ಡಾಲರ್‌ಗಳನ್ನೇ ಅರ್ಜೆಂಟೀನಾದ ಕರೆನ್ಸಿಯಾಗಿ ಬಳಸುವ ಪ್ರಸ್ತಾಪವನ್ನು ಮಾಡಿದ್ದಾರೆ.

ಒಂದು ದೇಶವು ಹೊಂದಿರುವ ಕರೆನ್ಸಿಯನ್ನು ರದ್ದು ಮಾಡಿ ಅದರ ಸ್ಥಾನದಲ್ಲಿ ಅಮೆರಿಕಾದ ಡಾಲರ್‌ಗಳನ್ನೇ ತನ್ನ ಕರೆನ್ಸಿಯಾಗಿ ಬದಲಾವಣೆ ಮಾಡಿಕೊಂಡಾಗ ಏನಾಗುತ್ತದೆ ಎಂಬುದನ್ನು ಒಂದು ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳಬಹುದು. ಬೆಲೆಗಳು, ಬಡ್ಡಿ ದರ ಮತ್ತು ಒಟ್ಟು ದೇಶೀಯ ಉತ್ಪನ್ನ(ಜಿಡಿಪಿ) ಇವುಗಳು ಒಂದು ನಿರ್ದಿಷ್ಟ ಮಟ್ಟದಲ್ಲಿರುವ ಒಂದು ಅರ್ಥವ್ಯವಸ್ಥೆಯ ಸನ್ನಿವೇಶದಲ್ಲಿ, ಹಣದ ಒಟ್ಟು ಬೇಡಿಕೆಯು ದೇಶೀಯ ಕರೆನ್ಸಿಯ 100 ಯೂನಿಟ್‌ಗಳಷ್ಟು ಇದೆ ಎಂದು ಭಾವಿಸಿಕೊಳ್ಳೋಣ. ಆದರೆ, ಅಲ್ಲಿ ಹಣದ ಪೂರೈಕೆಯು 90 ಯೂನಿಟ್‌ಗಳಷ್ಟು ಮಾತ್ರ ಇದೆ ಎಂದುಕೊಳ್ಳೋಣ. ಆಗ, ಕಡಿಮೆ ಬಿದ್ದ ದೇಶೀಯ ಕರೆನ್ಸಿಯ 10 ಯೂನಿಟ್‌ಗಳನ್ನು ಆ ದೇಶದ ಕೇಂದ್ರ ಬ್ಯಾಂಕ್ ನಿರ್ಭಯವಾಗಿ ಮುದ್ರಿಸಬಹುದು. ಹೀಗೆ 10 ಕರೆನ್ಸಿ ಯೂನಿಟ್‌ಗಳನ್ನು ಹೆಚ್ಚುವರಿಯಾಗಿ ಮುದ್ರಿಸಿದಾಗ, ಡಾಲರ್ ಸಂಬಂಧವಾಗಿ ಆ ದೇಶವು ಹೊಂದಿರುವ ವಿನಿಮಯ ದರ ನಿಗದಿಯ ಕಾರಣದಿಂದಾಗಿ ವಿದೇಶಿ ವಿನಿಮಯ ವ್ಯವಸ್ಥೆಗೆ ಧಕ್ಕೆಯಾಗುವುದಿಲ್ಲ. ಆದರೆ, "ಡಾಲರ್"ಗಳನ್ನು ಮಾತ್ರವೇ ತನ್ನ ಕರೆನ್ಸಿಯಾಗಿ ಬಳಸುವ ಅರ್ಥವ್ಯವಸ್ಥೆಯ ಸಂದರ್ಭದಲ್ಲಿ, ಡಾಲರ್‌ಗಳ ಮೇಲಿನ ಬೇಡಿಕೆಯು ಬೆಲೆಗಳು, ಬಡ್ಡಿ ದರ ಮತ್ತು ಒಟ್ಟು ಜಿಡಿಪಿ ಇವುಗಳ ಒಂದು ನಿರ್ದಿಷ್ಟ ಮಟ್ಟದಲ್ಲಿ, ಪೂರೈಕೆಯ ಮಟ್ಟಕ್ಕಿಂತಲೂ ಅಧಿಕವಾಗಿದ್ದರೆ, ಆಗ, ಕಡಿಮೆ ಬಿದ್ದ ಡಾಲರ್‌ಗಳನ್ನು ಮುದ್ರಿಸುವ ಪ್ರಶ್ನೆಯೇ ಇಲ್ಲ. ಏಕೆಂದರೆ, ಡಾಲರ್‌ಗಳನ್ನು ಮುದ್ರಿಸುವ ಅಧಿಕಾರವನ್ನು ಈ ಡಾಲರ್‌ಗಳನ್ನು ನೀಡಿಕೆ(issue) ಮಾಡಿದ ಅಮೆರಿಕದ ಕೇಂದ್ರ ಬ್ಯಾಂಕ್ ಮಾತ್ರ ಹೊಂದಿದೆಯಲ್ಲದೆ, ರದ್ದು ಮಾಡಿದ ತನ್ನ ಕರೆನ್ಸಿಯ ಸ್ಥಾನದಲ್ಲಿ ಅಮೆರಿಕಾದ ಡಾಲರ್‌ಗಳನ್ನೇ ಕರೆನ್ಸಿಯಾಗಿ ಬದಲಾವಣೆ ಮಾಡಿಕೊಂಡ ದೇಶವು ಡಾಲರ್‌ಗಳನ್ನು ಮುದ್ರಿಸುವ ಅಧಿಕಾರವನ್ನು ಹೊಂದಿಲ್ಲ. ಅಷ್ಟಕ್ಕೂ





ಈ ದೇಶವು ಅದಾಗಲೇ ತನ್ನ ಕೇಂದ್ರ ಬ್ಯಾಂಕನ್ನು ರದ್ದು ಮಾಡಿಯಾಗಿರುತ್ತದೆ. ಅಂತಹ ಒಂದು ಸಂದರ್ಭದಲ್ಲಿ, ಇಂಥಹ ಒಂದು ದೇಶಕ್ಕೆ ಲಭ್ಯವಿರುವ ಏಕೈಕ ಆಯ್ಕೆ ಎಂದರೆ: ಜಿಡಿಪಿಯ ಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ, ಸಾಧ್ಯವಿರುವ ಎಲ್ಲ ವಿಧಾನಗಳಿಂದ (ವಿದೇಶದಿಂದ ಸಾಲ ಪಡೆಯುವ ಮೂಲಕ ಅಥವಾ ದೇಶದ ಆಸ್ತಿಯನ್ನು ಮಾರಾಟ ಮಾಡುವ ಮೂಲಕ) ಡಾಲರ್‌ಗಳನ್ನು ಪಡೆದುಕೊಳ್ಳಬಹುದು. ಅಥವಾ ಡಾಲರ್‌ಗಳ ಮೇಲಿನ ಬೇಡಿಕೆಯು ಅದರ ಪೂರೈಕೆಗೆ ಸಮನಾಗುವವರೆಗೆ ಜಿಡಿಪಿಯನ್ನು ಮೊಟಕುಗೊಳಿಸಬಹುದು. ಅಥವಾ, ಈ ಎರಡು ಆಯ್ಕೆಗಳನ್ನೂ ಭಾಗಶಃ ಬೆರಸಿ ಬಳಕೆ ಮಾಡಿಕೊಳ್ಳಬಹುದು. ಆದರೆ, ಕೇಂದ್ರ ಬ್ಯಾಂಕನ್ನು ಬಳಸಿಕೊಂಡು ಕರೆನ್ಸಿಯ ದೊಡ್ಡ ಪ್ರಮಾಣದ ಪೂರೈಕೆಯನ್ನು ಹೊಂದುವ ಆಯ್ಕೆಯನ್ನು ಮಾತ್ರ ಮರೆಯಲೇಬೇಕಾಗುತ್ತದೆ.

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಆದಾಯಕ್ಕಿಂತ ಹೆಚ್ಚು ಖರ್ಚು (ಸಾಮಾನ್ಯ ಸಂದರ್ಭಗಳಲ್ಲಿ ಪಾವತಿ ಶೇಷದ ಅಂಶವು ಚಾಲ್ತಿ ಖಾತೆ ಕೊರತೆಯಲ್ಲಿ ವ್ಯಕ್ತವಾಗುತ್ತದೆ) ಮಾಡುವುದರಿಂದ ಮಾತ್ರವಲ್ಲ, ಚಲಾವಣೆಯ ಮಾಧ್ಯಮ ಅಥವಾ ಕರೆನ್ಸಿಯ ಮೇಲಿನ ಬೇಡಿಕೆಯು ಅದರ ಪೂರೈಕೆಗೆ ಹೋಲಿಸಿದರೆ ಹೆಚ್ಚಾದಾಗಲೂ ಸಹ ಒಂದು ದೇಶದ ಬಾಹ್ಯ ಋಣಭಾರ ಹೆಚ್ಚುತ್ತದೆ ಅಥವಾ ವಿದೇಶಿಯರಿಗೆ ಮಾರಾಟವಾಗುವುದರಿಂದ ದೇಶದ ಭೌತಿಕ ಸಂಪತ್ತು ಕಡಿಮೆಯಾಗುತ್ತದೆ.

ಇಮ್ಮಡಿ ಹಿಂಡಿಕೆ

ಬಾಹ್ಯ ಸಾಲದ ಮಟ್ಟವು ಏರಿಕೆಯಾಗಬಾರದು ಎಂದಾದರೆ, ಅರ್ಥವ್ಯವಸ್ಥೆಯ ಕುಗ್ಗುವ ಗಾತ್ರವು ದುಪ್ಪಟ್ಟಾಗುತ್ತದೆ. ಅರ್ಥವ್ಯವಸ್ಥೆಯು ಸಮತೋಲದಲ್ಲಿದೆ ಎಂದು ಭಾವಿಸೋಣ. ನಂತರ, ಒಂದು ನಿರ್ದಿಷ್ಟ ಅವಧಿಯಲ್ಲಿ ಅದರ ರಫ್ತುಗಳು \$10ರಷ್ಟು ಏರಿಕೆಯಾಗಿವೆ. ಅದರ ಆಮದುಗಳು ಜಿಡಿಪಿಯ ಶೇ. 10ರಷ್ಟಿದ್ದರೆ, ಬಾಹ್ಯ ಸಾಲದ ಹೆಚ್ಚಳದ ಅಗತ್ಯವಿಲ್ಲದೇ, ಅದರ ಜಿಡಿಪಿಯು \$100ರಷ್ಟು ಮಾತ್ರ ಏರಿಕೆಯಾಗಬಹುದು. ಇದು ಅರ್ಥವ್ಯವಸ್ಥೆಯು ಕುಗ್ಗುವಲ್ಲಿ ಮೊದಲ ಒತ್ತಡವಾಗುತ್ತದೆ. ಅಂದರೆ, ದೇಶದ ಬಾಹ್ಯ ಖಾತೆಯನ್ನು ಸಮತೋಲದಲ್ಲಿ ಇಟ್ಟುಕೊಳ್ಳುವ ಸಲುವಾಗಿ ಅದರ ಜಿಡಿಪಿಯ ಏರಿಕೆಯನ್ನು ಕುಂಠಿತಗೊಳಿಸಬೇಕಾಗುತ್ತದೆ. ಆದರೆ, ಜಿಡಿಪಿಯ ಪರಿಚಲನೆಗೆ ಬೇಕಾಗುವ ಕರೆನ್ಸಿಯ (ಇದನ್ನು ಮೀಸಲು ಹಣ ಎಂದು ಕರೆಯುತ್ತಾರೆ) ಅನುಪಾತವು ಒಂದು ವೇಳೆ ಜಿಡಿಪಿಯ ಶೇ. 10ರಷ್ಟಿದ್ದರೆ, 100ರಷ್ಟು ಜಿಡಿಪಿಯ ಹೆಚ್ಚಳವನ್ನು ಉಳಿಸಿಕೊಳ್ಳಲು, ಅಧಿಕವಾಗಿ 10 ಡಾಲರ್‌ಗಳ ಅಗತ್ಯವಿರುತ್ತದೆ. ಈ ಅಧಿಕ 10 ಡಾಲರ್‌ಗಳನ್ನು ದೇಶೀಯವಾಗಿ ಮುದ್ರಿಸಲಾಗದುದರಿಂದ, ಬಾಹ್ಯ ಸಾಲವನ್ನು ಹೆಚ್ಚಿಸಿಕೊಳ್ಳದೆ ಜಿಡಿಪಿಯಲ್ಲಿ \$100ರ ಹೆಚ್ಚಳವನ್ನು ಉಳಿಸಿಕೊಳ್ಳಲಾಗದು.

ಈ ಉದಾಹರಣೆಯಲ್ಲಿ ಜಿಡಿಪಿಯು ಐವತ್ತು ಡಾಲರ್‌ನಷ್ಟು ಮಾತ್ರ ಹೆಚ್ಚಬಹುದು. ಆಗ ಮಾತ್ರ ಅಧಿಕ ಡಾಲರ್‌ಗಳ ಬೇಡಿಕೆಯು, ಆಮದುಗಳಿಗೆ 5 ಮತ್ತು ಜಿಡಿಪಿಯ ಪರಿಚಲನೆಗಾಗಿ 5, ರಫ್ತುಗಳ ಮೂಲಕ ಗಳಿಸಿದ ಡಾಲರ್ ಮೊತ್ತಕ್ಕೆ ಸಮನಾಗಿರುತ್ತದೆ. ಇದು ಜಿಡಿಪಿಯ ಪರಿಚಲನಾ ಮಾಧ್ಯಮದ ಅಗತ್ಯದಿಂದಾಗಿ ಅರ್ಥವ್ಯವಸ್ಥೆಯು ಕುಗ್ಗುವಲ್ಲಿ ಉದ್ಭವಿಸಿದ ಎರಡನೆಯ ಒತ್ತಡವಾಗುತ್ತದೆ. ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ದೇಶದ ಡಾಲರ್ ಗಳಿಕೆಯು, ಈಗ ಅದರ ಆಮದುಗಳಿಗೆ ಮತ್ತು ಪರಿಚಲನಾ ಮಾಧ್ಯಮದ ಅಗತ್ಯಗಳು ಈ ಎರಡು ಪಾವತಿಗಳಿಗೂ ಬಳಕೆಯಾಗುತ್ತದೆ. ದೇಶೀಯ ಕರೆನ್ಸಿಯನ್ನು ಸಂಪೂರ್ಣವಾಗಿ ರದ್ದುಪಡಿಸಿದ್ದರಿಂದಾಗಿ ಮತ್ತು ಚಲಾವಣಾ ಮಾಧ್ಯಮದ ಅಗತ್ಯದ ಪೂರೈಕೆಗಾಗಿ ಈ ದೇಶೀಯ ಕರೆನ್ಸಿಯನ್ನು ಕೇಂದ್ರ ಬ್ಯಾಂಕ್ ಮುದ್ರಿಸುವ ಸಾಧ್ಯತೆಯನ್ನು ರದ್ದುಪಡಿಸಿದ್ದರಿಂದಾಗಿ, ವಿದೇಶಿ ಕರೆನ್ಸಿಯನ್ನು ತನ್ನ ಚಲಾವಣೆಯ ಮಾಧ್ಯಮವಾಗಿ ಒಪ್ಪಿಕೊಂಡಿರುತ್ತದೆ. ಆದರೆ, ಚಲಾವಣಾ ಮಾಧ್ಯಮದ ಹೆಚ್ಚಿದ ಅಗತ್ಯವನ್ನು ಪೂರೈಸಲು ಬೇಕಾಗುವ ವಿದೇಶಿ ಕರೆನ್ಸಿಯನ್ನು ಮುದ್ರಿಸಲು ಈ ವಿದೇಶಿ ಕರೆನ್ಸಿಯನ್ನು ನೀಡಿಕೆ ಮಾಡಿದ ಕೇಂದ್ರ ಬ್ಯಾಂಕ್ ಬಾಧ್ಯವಲ್ಲ. ಹಾಗಾಗಿ, ನಾವು ದೇಶದ ಜಿಡಿಪಿಯ ಮೇಲಿನ ಹಿಂಡಿಕೆಯನ್ನು ದ್ವಿಗುಣಗೊಳಿಸಬೇಕಾಗುತ್ತದೆ.

ಜಿಡಿಪಿಯ ಮೇಲಿನ ಈ ರೀತಿಯ ಇಮ್ಮಡಿ ಹಿಂಡಿಕೆಯನ್ನು ಕಲ್ಯಾಣ ವೆಚ್ಚಗಳ ಕಡಿತ, ಸರ್ಕಾರಿ ಅಧಿಕಾರಿಗಳ ಸಂಬಳ ಕಡಿತ, ಪಿಂಚಣಿಗಳ ಕಡಿತ, ಕಾರ್ಮಿಕರ ವೇತನದ ಕಡಿತ ಮತ್ತು ಉದ್ಯೋಗಗಳ ಸಹಜ ಕಡಿತ ಮುಂತಾದ ಕಡಿತಗಳ ಮೂಲಕ ಮಾಡಬೇಕಾಗುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ರಫ್ತುಗಳ ಮೂಲಕ ಮಾತ್ರವೇ (ಬಾಹ್ಯ ಸಾಲದ ಮಟ್ಟವು ಹೆಚ್ಚಾಗಬಾರದು ಅಥವಾ ದೇಶೀಯ ಆಸ್ತಿಗಳನ್ನು ವಿದೇಶಿಯರಿಗೆ ಮಾರಾಟ ಮಾಡಬಾರದು ಎಂದಾದರೆ) ಗಳಿಸುವ ಡಾಲರ್‌ಗಳನ್ನು ಹೊರತುಪಡಿಸಿ, ಡಾಲರ್‌ಗಳ ಪೂರೈಕೆಯ ಮೇಲೆ ನಿಯಂತ್ರಣವನ್ನು ಹೊಂದದ ಮತ್ತು ವಿದೇಶದಲ್ಲಿ ಮುದ್ರಿಸುವ ಡಾಲರ್ ಅನ್ನು ದೇಶದ ಕರೆನ್ಸಿಯಾಗಿ ಅಳವಡಿಸಿಕೊಳ್ಳುವ ಕ್ರಮವು ಅಗತ್ಯವಾಗಿ ದೇಶದ ಜನತೆಗೆ ತೀವ್ರತರದ ದುಃಖವನ್ನು ತರುತ್ತದೆ. ಜನತೆಯ ಜೀವನದ ಮೇಲೆ ದಾಳಿ ಮಾಡುವ ಈ ಮಿತವ್ಯಯ ವಿಧಾನಗಳನ್ನು ತಕ್ಷಣವೇ ಜಾರಿ ಮಾಡದಿದ್ದರೆ ಡಾಲರ್‌ಗಳನ್ನು ವಿದೇಶದಿಂದ ಸಾಲ ಪಡೆಯಬೇಕಾಗುತ್ತದೆ. ಈ ಕ್ರಮವು ಜನತೆಯ ಮೇಲಿನ ದಾಳಿಯನ್ನು ಮುಂದೂಡುತ್ತದೆ; ಅದು ದಾಳಿಯನ್ನು ತಪ್ಪಿಸುವುದಿಲ್ಲ.

ಇಂತಹ ಅಸಂಬದ್ಧ ಕ್ರಮ ಏಕೆ?

ಹಾಗಾದರೆ, ಒಂದು ಸರ್ಕಾರವು ತನ್ನದೇ ಸ್ವಂತ ದೇಶೀಯ ಕರೆನ್ಸಿಯನ್ನು ಅಮೆರಿಕಾದ ಡಾಲರ್‌ನೊಂದಿಗೆ ಬದಲಾಯಿಸುವ ಇಂತಹ ಅಸಂಬದ್ಧ ಕ್ರಮವನ್ನು ಅವಲಂಬಿಸುತ್ತದೆಯಾದರೂ ಏಕೆ? ಅರ್ಜೆಂಟೀನಾದ ಸಂದರ್ಭದಲ್ಲಿ ತೋರುವ ಕಾರಣವೆಂದರೆ, ಅತಿ ಹೆಚ್ಚಿನ ವಾರ್ಷಿಕ ಸುಮಾರು 150% ಹಣದುಬ್ಬರವೇ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಣದುಬ್ಬರಕ್ಕೆ ಲಭ್ಯವಿರುವ ಏಕೈಕ ಮದ್ದು (ಅದನ್ನು ಒಪ್ಪುವ ಅಥವಾ ಒಪ್ಪದಿರುವ ವಿಷಯವೇ ಬೇರೆ) ಎಂದರೆ, ನಿರುದ್ಯೋಗದ ಸೃಷ್ಟಿ ಮತ್ತು ವೇತನ ಕಡಿತವೇ. ಈ ಮದ್ದನ್ನು ಜೇವಿಯರ್ ಮಿಲೀ ಉಗ್ರ ರೀತಿಯಲ್ಲಿ ಬಳಸುತ್ತಿದ್ದಾರೆ. ಈ ಕುತರ್ಕವನ್ನು ಬಯಲುಗೊಳಿಸಬೇಕಿದೆ.

ಹಿಂದಿನ ಬಲಪಂಥೀಯ ಅಧ್ಯಕ್ಷ ಮ್ಯಾಕ್ರಿ ಅರ್ಜೆಂಟೀನಾದ ಪಾವತಿ ಶೇಷದ ಸಮಸ್ಯೆಯನ್ನು ನಿರ್ವಹಿಸುವ ಸಲುವಾಗಿ ವಿದೇಶಿ ಸಾಲವನ್ನು ಒಂದು ಬೃಹತ್ ಪ್ರಮಾಣದಲ್ಲಿ ತೆಗೆದುಕೊಂಡಿದ್ದರು. ಅದರಲ್ಲಿ ಒಂದು ಬಹು ದೊಡ್ಡ ಭಾಗವು ಆ ದೇಶದಿಂದ ಹೊರ ಹೋದ ಖಾಸಗಿ ಬಂಡವಾಳಕ್ಕೆ ಹಣ ಒದಗಿಸಲು ಬಳಸಲ್ಪಟ್ಟಿತು. ವಿದೇಶಿ ಸಾಲವನ್ನು ತೀರಿಸುವ ಸಮಯ ಬಂದಾಗ, ಪಾವತಿ ಶೇಷದ ಸಮಸ್ಯೆಯು ಬಿಗಡಾಯಿಸಿತು. ಅರ್ಜೆಂಟೀನಾದ ಶ್ರೀಮಂತರು ಕೈಗೊಂಡ ಬಂಡವಾಳದ

ಪುಟ 15 ಕ್ಕೆ

ಗಾಜಾ ನರಮೇಧ: ಇಸ್ರೇಲನ್ನು ವಿಶ್ವ ಕೋರ್ಟಿಗೆಳೆದ ದ.ಆಫ್ರಿಕಾ

ಜನವರಿ 11 ರಂದು, ದಕ್ಷಿಣ ಆಫ್ರಿಕಾ ತನ್ನ ಐತಿಹಾಸಿಕ ಪ್ರಕರಣದಲ್ಲಿ (ವಿಶ್ವ ಕೋರ್ಟ್ ಎಂದು ಕರೆಯಲಾಗುವ) ಅಂತರರಾಷ್ಟ್ರೀಯ ನ್ಯಾಯಾಲಯದ (ಐಸಿಜೆ) ಮುಂದೆ ತನ್ನ ವಾದಗಳನ್ನು ಮಂಡಿಸಿತು, ಇಸ್ರೇಲ್ ಗಾಜಾ ಪ್ರದೇಶದಲ್ಲಿ ನರಮೇಧವನ್ನು ಮಾಡಿದೆ ಎಂದು ಆರೋಪಿಸಿತು. ಅಂದು ಬೆಳಿಗ್ಗೆ ವಿಚಾರಣೆ ಪ್ರಾರಂಭವಾಗುತ್ತಿದ್ದಂತೆ, ಹಾಲೆಂಡಿನಲ್ಲಿರುವ ಹೇಗ್ ನ ನ್ಯಾಯಾಲಯದ ಹೊರಗೆ ನೂರಾರು ಜನರು ಜಮಾಯಿಸಿ, "ನಿಲ್ಲಿಸಿ, ನರಮೇಧವನ್ನು ನಿಲ್ಲಿಸಿ" ಮತ್ತು "ನಾವೆಲ್ಲರೂ ಪ್ಯಾಲೆಸ್ಟೀನಿಯನ್ನರು" ಎಂದು ನೂರಾರು ಜನರು ಸೇರಿ ಪ್ರತಿಭಟನೆ ನಡೆಸಿದರು.

ದಕ್ಷಿಣ ಆಫ್ರಿಕಾದ ಪರವಾಗಿ ವಾದಗಳನ್ನು ಆರು ವಕೀಲರ ತಂಡವು ಮಂಡಿಸಿತು. ಐಸಿಜೆ 15 ಸದಸ್ಯರ ನ್ಯಾಯಾಧೀಶರ ಸಮಿತಿಯನ್ನು ಹೊಂದಿದೆ, ಪ್ರತಿಯೊಬ್ಬರೂ ವಿವಿಧ ದೇಶಗಳವರು ಮತ್ತು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಮತ್ತು ಭದ್ರತಾ ಮಂಡಳಿ ಗಳಿಂದ ಒಂಬತ್ತು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ. ಈ ಪ್ರಕರಣದ ತೀರ್ಪಿಗೆ ಸಹಾಯಕವಾಗುವಂತೆ (ನಿಯಮಾನುಸಾರ) ಇಸ್ರೇಲ್ ಮತ್ತು ದಕ್ಷಿಣ ಆಫ್ರಿಕಾ ತಲಾ ಒಬ್ಬರು ತಾತ್ಕಾಲಿಕ ನ್ಯಾಯಾಧೀಶರನ್ನು ನಾಮಕರಣ ಮಾಡಿವೆ.

"ಪ್ಯಾಲೇಸ್ಟಿನಿಯನ್ನರ ವಿರುದ್ಧ ವರ್ಣಭೇದ ನೀತಿ, ಜನತೆಯ ಉಚ್ಚಾಟನೆ, ಜನಾಂಗೀಯ ಶುದ್ಧೀಕರಣ, ಅತಿಕ್ರಮಣ, ತಾರತಮ್ಯ ಎಸಗುತ್ತಿರುವ ಮತ್ತು ಅವರ ಸ್ವ-ನಿರ್ಣಯದ ಹಕ್ಕನ್ನು ನಿರಂತರವಾಗಿ ನಿರಾಕರಿಸುತ್ತಿರುವ ಹಿನ್ನೆಲೆಯಲ್ಲಿ ಅಕ್ಟೋಬರ್ 7, 2023 ರಿಂದ, ನರಮೇಧವನ್ನು ತಡೆಗಟ್ಟುವಲ್ಲಿ ವಿಫಲವಾಗಿದೆ ಮತ್ತು ನರಮೇಧಕ್ಕೆ ನೇರ ಪ್ರಚೋದನೆಯನ್ನು ವಿಚಾರಣೆಗೆ ಒಳಪಡಿಸುವಲ್ಲಿ ಇಸ್ರೇಲ್, ವಿಫಲವಾಗಿದೆ" ಎಂದು ದಕ್ಷಿಣ ಆಫ್ರಿಕಾ ವಾದಿಸಿದೆ.

ಇದು 1948 ರ "ನರಮೇಧದ ಅಪರಾಧ ತಡೆಗಟ್ಟುವಿಕೆ ಮತ್ತು ಶಿಕ್ಷೆಯ ಒಪ್ಪಂದ"ದ ಭಾಗವಾಗಿ ಇಸ್ರೇಲ್ ನ ಬಾಧ್ಯತೆಗಳ ಉಲ್ಲಂಘನೆಯಾಗಿದೆ ಎಂದು ಅರ್ಜಿ ವಾದಿಸುತ್ತದೆ.

ಐಸಿಜೆಯನ್ನು ಉದ್ದೇಶಿಸಿ ಮಾತನಾಡುತ್ತಾ, ನೆದರ್ಲೆಂಡ್ಸ್ ನಲ್ಲಿ ದಕ್ಷಿಣ ಆಫ್ರಿಕಾದ ರಾಯಭಾರಿ "1948 ರಿಂದ ಇಸ್ರೇಲ್ ವಸಾಹತೀಕರಣದ ಮೂಲಕ ಪ್ಯಾಲೇಸ್ಟಿನಿಯನ್ ಜನರ ಮೇಲೆ ನಡೆಯುತ್ತಿರುವ ನಕ್ಬಾವನ್ನು ಗುರುತಿಸಿದೆ" ಮತ್ತು ಈಗಿನ ನರಮೇಧದ ಕೃತ್ಯಗಳು 1948ರಿಂದ ಸತತವಾಗಿ ನಡೆಯುತ್ತಿರುವ ಕಾನೂನುಬಾಹಿರ ಕೃತ್ಯಗಳ ಭಾಗವಾಗಿದೆ, ಎಂದು ಹೇಳಿದರು. ಇದನ್ನೇ ದ.ಆಫ್ರಿಕಾದ ನ್ಯಾಯ ಮಂತ್ರಿ ರೊನಾಲ್ಡ್ ಲಾಮೋಲಾ ಅವರು ಪ್ರತಿಧ್ವನಿಸಿದರು,

ಇಸ್ರೇಲ್ ತನ್ನ "ಸತತ ಮಿಲಿಟರಿ ಕಾರ್ಯಾಚರಣೆಯನ್ನು ಹೆಚ್ಚಿಸುತ್ತಿರುವ, ಮತ್ತಷ್ಟು ಹೆಚ್ಚಿಸಲು ಬೆದರಿಕೆ ಹಾಕುತ್ತಿರುವ" ಹಿನ್ನೆಲೆಯಲ್ಲಿ ಪ್ಯಾಲೇಸ್ಟಿನಿಯರನ್ನು "ಮತ್ತಷ್ಟು, ತೀವ್ರವಾದ ಮತ್ತು ಸರಿಪಡಿಸಲಾಗದ ಹಾನಿ" ಗಳಿಂದ ರಕ್ಷಿಸುವ ಸಲುವಾಗಿ "ತುರ್ತು ತಾತ್ಕಾಲಿಕ ಕ್ರಮಗಳನ್ನು" ಸೂಚಿಸಲು ದಕ್ಷಿಣ ಆಫ್ರಿಕಾ ಐಸಿಜೆಗೆ ಕರೆ ನೀಡಿದೆ, ಗಾಜಾದಲ್ಲಿ ತನ್ನ ಮಿಲಿಟರಿ ಕಾರ್ಯಾಚರಣೆಯನ್ನು ತಕ್ಷಣವೇ ನಿಲ್ಲಿಸುವಂತೆ ಮತ್ತು ಜನಾಂಗೀಯ ಹತ್ಯಾಕಾಂಡದ ಅಡಿಯಲ್ಲಿ ನರಮೇಧ ಎಂದು ವ್ಯಾಖ್ಯಾನಿಸಲಾದ ಯಾವುದೇ ಮತ್ತು ಎಲ್ಲಾ ಕೃತ್ಯಗಳನ್ನು ಮಾಡದಂತೆ ತಡೆಯಲು ಇಸ್ರೇಲಿಗೆ ಆದೇಶಿಸಬೇಕೆಂದೂ ಅರ್ಜಿ ಒತ್ತಾಯಿಸಿದೆ.

ಗಾಜಾದಲ್ಲಿ ಇಸ್ರೇಲ್ ನರಮೇಧವನ್ನು ಆರೋಪಿಸಿರುವ ದಕ್ಷಿಣ ಆಫ್ರಿಕಾದ ಐತಿಹಾಸಿಕ ಪ್ರಕರಣದ ಬಗ್ಗೆ ಅಂತರರಾಷ್ಟ್ರೀಯ ನ್ಯಾಯಾಲಯವು ಜನವರಿ 11 ರಂದು ವಿಚಾರಣೆಯನ್ನು ಪ್ರಾರಂಭಿಸಿತು. 23,000 ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯಾದ ಜನರನ್ನು ಕೊಂದ ಇಸ್ರೇಲಿನ ಮಿಲಿಟರಿ ಆಕ್ರಮಣವನ್ನು ತಡೆಯಲು ತುರ್ತು ಕ್ರಮಗಳನ್ನು ಕೈಗೊಳ್ಳಲು ದಕ್ಷಿಣ ಆಫ್ರಿಕಾ ಒತ್ತಾಯಿಸಿದೆ. ಈ ಪ್ರಕರಣವನ್ನು ಇಡೀ ಜಗತ್ತು ಆಸಕ್ತಿ, ಆಶಾಭಾವನೆಗಳಿಂದ ಗಮನಿಸುತ್ತಿದೆ. ಐಸಿಜೆ ನರಮೇಧದ ಆಪಾದನೆ ಮನ್ನಿಸಿ ತುರ್ತು ತಾತ್ಕಾಲಿಕ ಕ್ರಮಗಳಿಗೆ ಆದೇಶ ಕೊಡುತ್ತಾ? ಅದನ್ನು ಇಸ್ರೇಲ್ ಪುರಸ್ಕರಿಸುತ್ತಾ? ಎಂಬ ಪ್ರಶ್ನೆ ಗಳಿಗೆ ಉತ್ತರ ಸ್ಪಷ್ಟವಿಲ್ಲ. ಆದರೆ ಐಸಿಜೆ ಪ್ರಕರಣದ ಪ್ರಕ್ರಿಯೆ ಇಸ್ರೇಲನ್ನು ಪ್ರತ್ಯಕ್ಷ ಪರೋಕ್ಷವಾಗಿ ಬೆಂಬಲಿಸುತ್ತಿರುವ ಯು.ಎಸ್, ಯುರೋ ಕೂಟದ ದೇಶಗಳಿಗೆ ಇರುಸು ಮುರುಸು ಉಂಟು ಮಾಡಿ ಇಸ್ರೇಲಿನ ಮೇಲೆ ಕಡಿವಾಣ ಹಾಕುವ ಸಾಧ್ಯತೆಯಂತೂ ದಟ್ಟವಾಗಿದೆ.

ನರಮೇಧಕ್ಕೆ ಸಾಕ್ಷ್ಯ ಇಲ್ಲಿದೆ!

ಇಸ್ರೇಲ್ ನ ಭೀಕರ ಕೃತ್ಯಗಳು ನರಮೇಧದ ಲಕ್ಷಣಗಳನ್ನು ಹೊಂದಿದೆ ಏಕೆಂದರೆ ಅವು "ಪ್ಯಾಲೇಸ್ಟಿನಿಯನ್ ರಾಷ್ಟ್ರೀಯ, ಜನಾಂಗೀಯ ಮತ್ತು ಜನಾಂಗೀಯ ಗುಂಪ" ನ್ನು ಇಡಿಯಾಗಿ ಅಥವಾ ಗಣನೀಯ ಭಾಗವನ್ನು ನಾಶಪಡಿಸುವ ಉದ್ದೇಶವನ್ನು ಹೊಂದಿವೆ, ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

"ಗಾಜಾದಲ್ಲಿ ಪ್ಯಾಲೆಸ್ಟೀನಿಯರನ್ನು ಕೊಲ್ಲುವ, ಅವರಿಗೆ ಗಂಭೀರ ದೈಹಿಕ ಮತ್ತು ಮಾನಸಿಕ ಹಾನಿ ಉಂಟುಮಾಡುವ ಮತ್ತು ಅವರ ದೈಹಿಕ ವಿನಾಶವನ್ನು ತರುವ ಜೀವನದ ಪರಿಸ್ಥಿತಿಗಳನ್ನು ಅವರ ಮೇಲೆ ಹೇರುವ" ಇಸ್ರೇಲಿ ಕೃತ್ಯಗಳ ವಿವರ ಮತ್ತು ಪುರಾವೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಇಸ್ರೇಲ್ ನ ಕ್ರಮಗಳು "ಒಂದು ವ್ಯವಸ್ಥಿತ ನಡವಳಿಕೆಯನ್ನು ತೋರಿಸುತ್ತವೆ, ಮತ್ತು ಇದರಿಂದ ನರಮೇಧವನ್ನು ಊಹಿಸಬಹುದು" ಎಂದು ವಾದಿಸಲಾಯಿತು.

ಆಕ್ರಮಿತ ಪ್ಯಾಲೇಸ್ಟಿನಿಯನ್ ಪ್ರದೇಶಗಳ ಒಂದು ಘಟಕವಾಗಿ ಗಾಜಾದ ಪ್ರಾದೇಶಿಕ ನೀರು, ಭೂ ದಾಟುವಿಕೆ, ವಿದ್ಯುತ್ ಮತ್ತು ಕೆಲವು ಪ್ರಮುಖ ಸರ್ಕಾರಿ ಕಾರ್ಯಗಳ ಮೇಲೆ ಇಸ್ರೇಲ್ ನಿಯಂತ್ರಣವನ್ನು ಮುಂದುವರೆಸಿದೆ ಎಂದು ಎತ್ತಿ ತೋರಿಸಲಾಯಿತು.

ಆಧುನಿಕ ಯುದ್ಧದ ಇತಿಹಾಸದಲ್ಲೇ "ಅತ್ಯಂತ ಭಾರೀ ಸಾಂಪ್ರದಾಯಿಕ ಬಾಂಬ್ ದಾಳಿ" ಗೆ ಪ್ಯಾಲೆಸ್ಟೀನಿಯರನ್ನು ಒಳಪಡಿಸಲಾಗಿದೆ. ಜನವರಿ 11 ರ ಹೊತ್ತಿಗೆ, ಗಾಜಾದಲ್ಲಿ 23,400 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ನವಜಾತ ಶಿಶುಗಳನ್ನೂ ಬಿಡದ ಈ ಉದ್ದೇಶಪೂರ್ವಕ ಸಾಮೂಹಿಕ ಹತ್ಯೆ ಪ್ಯಾಲೇಸ್ಟಿನಿಯನ್ ಜೀವದ ವಿನಾಶವೇ ಎಂದು ಪ್ರಬಲವಾಗಿ ವಾದಿಸಲಾಯಿತು.

ಪ್ಯಾಲೇಸ್ಟಿನಿಯನ್ ಪಟ್ಟಣಗಳ ನಾಶ, ಇಸ್ರೇಲ್ ಹೊರಿಸಿರುವ ದಿಗ್ಬಂಧನ, ಸಾಕಷ್ಟು ಸಹಾಯ ತಲುಪಿಸಲು ಅನುಮತಿಯ ನಿರಾಕರಣೆ ಮತ್ತು ಬಾಂಬುಗಳು ಬೀಳುವಾಗ ಈ ಸೀಮಿತ ಸಹಾಯವನ್ನು ವಿತರಿಸುವ ಅಸಾಧ್ಯತೆ – ಇವೆಲ್ಲವುಗಳ ಪರಿಣಾಮವಾಗಿ ಗಾಜಾದ ಪ್ಯಾಲೆಸ್ಟೀನಿಯನ್ನರು ಹಸಿವು, ನಿರ್ಜಲೀಕರಣ ಮತ್ತು ರೋಗದಿಂದ ಸಾವಿನ ತಕ್ಷಣದ ಅಪಾಯದಲ್ಲಿದ್ದಾರೆ. ಇಸ್ರೇಲ್ ನ ನಡವಳಿಕೆಗಳು ಜೀವನಕ್ಕೆ ಅಗತ್ಯ ವಸ್ತುಗಳನ್ನು ನಿರಾಕರಿಸಿವೆ. ಉದ್ದೇಶಪೂರ್ವಕವಾಗಿ ಜೀವವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲದ ಮತ್ತು ಪ್ಯಾಲೇಸ್ಟಿನಿಯನ್ನರ ವಿನಾಶವನ್ನು ತರುವ ಪರಿಸ್ಥಿತಿಗಳನ್ನು ಉಂಟು ಮಾಡಲಾಗಿದೆ ಎಂಬುದರತ್ತ ಕೋರ್ಟಿನ ಗಮನ ಸೆಳೆಯಲಾಯಿತು.



ಜಗದ ಸುತ್ತ

ವಸಂತರಾಜ ಎನ್.ಕೆ.

ನಾಗರಿಕರು ಉತ್ತರದಿಂದ ಗಾಜಾದ ದಕ್ಷಿಣಕ್ಕೆ ಹೋಗಲು ಇಸ್ರೇಲ್ ಹೊರಡಿಸಿದ ಮೊದಲ ಬಲವಂತ ಸ್ಥಳಾಂತರದ ಆದೇಶವು ಸ್ವತಃ ನರಮೇಧವಾಗಿದೆ. ಎಲ್ಲ ಪ್ರದೇಶಗಳಿಂದಲೂ ಸ್ಥಳಾಂತರ ಕ್ಕೆ ಆದೇಶ ಹೊರಡಿಸಲಾಗುತ್ತಿದೆ. ಎಲ್ಲೆಡೆ ಬಾಂಬ್ ದಾಳಿ ನಡೆಯುತ್ತಿದ್ದು ಎಲ್ಲೂ ಸುರಕ್ಕಿತ ಪ್ರದೇಶವಿಲ್ಲ. ಎಲ್ಲೆಡೆ ಮನೆಮಾರು, ಆಸ್ಪತ್ರೆ, ಜೀವನಾವಶ್ಯಕ ವ್ಯವಸ್ಥೆಗಳ ವಿನಾಶದ ಪ್ರಮಾಣವನ್ನು ಗಮನಿಸಿದರೆ .ಈ ಸ್ಥಳಾಂತರವು ಅನಿವಾರ್ಯವಾಗಿ ಶಾಶ್ವತವಾಗಿರುತ್ತದೆ, ಎಂದು ನರಮೇಧದ ಉದ್ದೇಶವನ್ನು ಮತ್ತು ವಿಧಾನಗಳನ್ನು ಅರ್ಜಿ ಎತ್ತಿ ತೋರಿಸಿದೆ.

"ನರಮೇಧಗಳನ್ನು ಎಂದಿಗೂ ಮುಂಚಿತವಾಗಿ ಘೋಷಿಸಲಾಗುವುದಿಲ್ಲ, ಆದರೆ ಈ ನ್ಯಾಯಾಲಯದ ಮುಂದೆ ಕಳೆದ 13 ವಾರಗಳ ಸಾಕ್ಷ್ಯಗಳಿವೆ. ಅವು ನಿರ್ವಿವಾದವಾಗಿ ನರಮೇಧದ ಕೃತ್ಯಗಳ ನಡವಳಿಕೆಯ ಮಾದರಿ ಮತ್ತು ಸಂಬಂಧಿತ ಉದ್ದೇಶಕ್ಕೆ ಪುರಾವೆ ಒದಗಿಸುತ್ತವೆ" ಎಂದು ದ.ಆಫ್ರಿಕಾದ ನ್ಯಾಯವಾದಿಗಳು ಐಸಿಜೆ ಮುಂದೆ ಪ್ರಬಲವಾಗಿ ವಾಧಿಸಿದರು.

ನರಮೇಧದ ಅಧಿಕೃತ ಉದ್ದೇಶ

ನಿರ್ದಿಷ್ಟವಾಗಿ, ವಿಶಾಲ ಪ್ಯಾಲೇಸ್ಟಿನಿಯನ್ ರಾಷ್ಟ್ರೀಯ, ಜನಾಂಗೀಯ ಮತ್ತು ಜನಾಂಗೀಯ ಗುಂಪಿನ ಭಾಗವಾಗಿ ಗಾಜಾದ ಪ್ಯಾಲೆಸ್ಟೀನಿಯರನ್ನು ನಾಶಮಾಡುವ ಉದ್ದೇಶವು, ನರಮೇಧದ ಪ್ರಕರಣಗಳಲ್ಲಿ ಬೇಕಾದ "ನಿರ್ದಿಷ್ಟ ಅಗತ್ಯ ಉದ್ದೇಶ" ಆಗಿದೆ, ಇವು ಅಕ್ಟೋಬರ್ 7 ರಿಂದ ಗಾಜಾದಲ್ಲಿ ಇಸ್ರೇಲಿನ ಕ್ರಮಗಳನ್ನು ಪ್ಯಾಲೇಸ್ಟಿನಿಯನ್ನರ ವಿರುದ್ಧ ಮಾಡಿದ ಹಿಂದಿನ ಇತರ ಅಪರಾಧಗಳಿಂದ ಪ್ರತ್ಯೇಕಿಸುತ್ತದೆಯೆಂಬುದು ದ.ಆಫ್ರಿಕಾ ಹೂಡಿರುವ ಪ್ರಕರಣದ ವಿಶಿಷ್ಟತೆ.

ಈ ನರಮೇಧದ ಉದ್ದೇಶ ಇಸ್ರೇಲ್ ಮಿಲಿಟರಿ ದಾಳಿಯನ್ನು ನಡೆಸುತ್ತಿರುವ ವಿಧಾನದಿಂದ ಸ್ಪಷ್ಟವಾಗಿದೆ... ಇದು ಅದರ ವ್ಯವಸ್ಥಿತ ಲಕ್ಷಣ ಮತ್ತು ರೂಪಗಳಲ್ಲಿ ಕಾಣುತ್ತದೆ... ಗಾಜಾದ ಪ್ಯಾಲೇಸ್ಟಿನಿಯನ್ ಜನಸಂಖ್ಯೆಯ ಒಂದು ಶೇಕಡಾವನ್ನು ವ್ಯವಸ್ಥಿತವಾಗಿ ನಾಶಪಡಿಸಲಾಗಿದೆ, ಮತ್ತು ಇತರ ನಾಲ್ವರಲ್ಲಿ ಒಬ್ಬರು ಗಾಯಗೊಂಡಿದ್ದಾರೆ.

"ಇಸ್ರೇಲ್ ನ ರಾಜಕೀಯ ನಾಯಕರು, ಮಿಲಿಟರಿ ಕಮಾಂಡರ್ ಗಳು ಮತ್ತು ಅಧಿಕೃತ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳು ವ್ಯವಸ್ಥಿತವಾಗಿ ಮತ್ತು ಸ್ಪಷ್ಟವಾಗಿ ತಮ್ಮ ಜನಾಂಗೀಯ ಉದ್ದೇಶವನ್ನು ಘೋಷಿಸಿದ್ದಾರೆ. ಪ್ಯಾಲೆಸ್ಟೀನಿನ್ನರ ಮತ್ತು ಗಾಜಾದ ಭೌತಿಕ ಮೂಲಸೌಕರ್ಯಗಳ ವಿನಾಶಗಳಲ್ಲಿ ತೊಡಗಿರುವಾಗ ಈ ಹೇಳಿಕೆಗಳನ್ನು ಸೈನಿಕರು ಪುನರಾವರ್ತಿಸುತ್ತಾರೆ."

"ನರಮೇಧಧ ಉದ್ದೇಶ"ವನ್ನು ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸುವ ಇಸ್ರೇಲಿನ ರಾಜಕೀಯ ಮತ್ತು ಮಿಲಿಟರಿ ನಾಯಕತ್ವ ನೀಡಿದ ಹೇಳಿಕೆಗಳು ಮತ್ತು ಭಾಷಣಗಳ ಏಳು ಪುಟಗಳ ದಾಖಲಾತಿಗಳನ್ನು ಅರ್ಜಿ ಒದಗಿಸಿದೆ, ಇವರಲ್ಲಿ ಸ್ವತಃ ಇಸ್ರೇಲಿನ ಅಧ್ಯಕ್ಷರು, ಪ್ರಧಾನಿ, ಸಚಿವರು, ಆಳುವ ಕೂಟದ ನಾಯಕರು, ಪಾರ್ಲಿಮೆಂಟ್ ಸದಸ್ಯರು, ಗಾಜಾವನ್ನು "ಒರೆಸಿ ಹಾಕಬೇಕು, ನೆಲಸಮಗೊಳಿಸಬೇಕು, ಅಳಿಸಬೇಕು ಮತ್ತು ಪುಡಿಮಾಡಬೇಕು" ಎಂದು ಹೇಳಿದ್ದಾರೆ. ಈ ಹೇಳಿಕೆಗಳಲ್ಲಿ ಮತ್ತು ಗಾಜಾವನ್ನು "ಕಸಾಯಿಖಾನೆ" ಆಗಿ ಪರಿವರ್ತಿಸಬೇಕೆಂದು ಪತ್ರಕರ್ತರು ಮತ್ತು ವ್ಯಾಖ್ಯಾನಕಾರರು ಪದೇ ಪದೇ ನೀಡಿದ ಕರೆಗಳಲ್ಲಿ "ವ್ಯವಸ್ಥಿತ ಅಮಾನವೀಯ ಭಾಷೆ" ಯನ್ನು ಎತ್ತಿ ತೋರಿಸುವ ಹಲವಾರು ದಾಖಲಾತಿಗಳನ್ನು ಅರ್ಜಿ ಉಲ್ಲೇಖಿಸಿದೆ.

"ಇಸ್ರೇಲಿನ ನರಮೇಧದ ಉದ್ದೇಶವು ವಾಸ್ತವವಾಗಿ ಶತ್ರು ಕೇವಲ ಹಮಾಸ್ ನ ಮಿಲಿಟರಿ ವಿಭಾಗವಲ್ಲ ಅಥವಾ ಇಡಿಯಾಗಿ ಹಮಾಸ್ ಮಾತ್ರ ಅಲ್ಲ, ಬದಲಿಗೆ ಗಾಜಾದ ಇಡೀ ಪ್ಯಾಲೇಸ್ಟಿನಿಯನ್ ಜೀವನದ ಹೆಣಿಗೆಯೇ ಶತ್ರು ಎಂದು ನಂಬಿದೆ" ಎಂದು ದಾಖಲಾತಿಗಳು ಸ್ಪಷ್ಟವಾಗಿ ತೋರಿಸುತ್ತವೆ.

ಪ್ರಧಾನಿ ಮತ್ತಿತರ ಅಧಿಕಾರಸ್ಥ ರಾಜಕೀಯ ನಾಯಕರು, ಮಿಲಿಟರಿ ಕಮಾಂಡರ್ ಗಳ ಹೇಳಿಕೆಗಳು ಪ್ರಾಯೋಗಿಕವಾಗಿ ನೆಲದಲ್ಲಿ ಇಸ್ರೇಲಿ ಸೈನಿಕರ ಭೀಕರ ವಿನಾಶಕಾರಿ ನರಮೇಧಧ ಕೃತ್ಯಗಳಿಗೆ ಕಾರಣವಾಗಿವೆ. ಈ ಹೇಳಿಕೆಗಳನ್ನು ಸೈನಿಕರು "ಅಧಿಕೃತ ನೀತಿ" ಮತ್ತು "ಆದೇಶ"ವೆಂದು ಪರಿಗಣಿಸಿದ್ದಾರೆ ಎಂಬುದಕ್ಕೆ ಡಿಸೆಂಬರ್ 7, 2023 ರಂದು ಇಸ್ರೇಲಿ ಸೈನಿಕರು ಪ್ಯಾಲೆಸ್ಟೀನ್ ನಾಗರಿಕರ ದೌರ್ಜನ್ಯ ಎಸಗುತ್ತಿರುವುದರ ಬರ್ಬರ ವೀಡಿಯೊಗಳನ್ನು ಅವರೇ ಮಾಡಿ ಹಂಚಿಕೊಂಡಿರುವ ದಾಖಲಾತಿಯನ್ನು ಅರ್ಜಿ ಉಲ್ಲೇಖಿಸಿದೆ,

"ಇಂತಹ ನರಮೇಧದ ಪ್ರಚೋದನೆಯನ್ನು ಖಂಡಿಸಲು, ತಡೆಯಲು ಮತ್ತು ಶಿಕ್ಷಿಸಲು ಇಸ್ರೇಲ್ ಉದ್ದೇಶಪೂರ್ವಕವಾಗಿ ವಿಫಲವಾದದ್ದು ಸ್ವತಃ ನರಮೇಧ ಒಪ್ಪಂದದ ಗಂಭೀರ ಉಲ್ಲಂಘನೆಯಾಗಿದೆ." ಎಂದು ಅರ್ಜಿ ವಾದಿಸುತ್ತದೆ.

ಗಾಜಾ ಜನರನ್ನು ಈಗಲೇ ರಕ್ಷಿಸಿ!

ಗಾಜಾದಲ್ಲಿನ ನರಮೇಧದ ಕೃತ್ಯಗಳು ಮತ್ತು ಅವುಗಳ ಹಿಂದಿರುವ ಉದ್ದೇಶವನ್ನು ಸ್ಪಷ್ಟವಾಗಿ ವಿವರಿಸಿದ ದಕ್ಷಿಣ ಆಫ್ರಿಕಾದ ಅರ್ಜಿ, "ನರಮೇಧದ ಒಪ್ಪಂದ"ದ ಅಡಿಯಲ್ಲಿ ಸಹಿ ಹಾಕಿದ ದೇಶಧ ಸರಕಾರವು "ಜನಾಂಗೀಯ ಕೃತ್ಯಗಳಿಂದ ದೂರವಿರುವುದು ಮಾತ್ರವಲ್ಲದೆ ಅವುಗಳನ್ನು ತಡೆಯಲು ಸಹ ಬಾಧ್ಯವಾಗಿದೆ" ಎಂಬ ➚

ಅರ್ಜೆಂಟಿನಾದ ಕರೆನ್ಸಿಯ "ಡಾಲರೀಕರಣ'.... ಪುಟ 13 ರಿಂದ

ಪಲಾಯನವು ಅದಾಗಲೇ ಬಿಗಡಾಯಿಸಿದ ಪಾವತಿ ಶೇಷದ ಸಮಸ್ಯೆಯನ್ನು ಉಲ್ಬಣಗೊಳಿಸಿತು. ಬಂಡವಾಳದ ಈ ಪಲಾಯನದ ಪರಿಣಾಮವಾಗಿ ಉಂಟಾದ ಕರೆನ್ಸಿಯ ಅಪ ಮೌಲ್ಯವು, ಆಮದುಗಳನ್ನು ವಿಪರೀತ ದುಬಾರಿಯಾಗಿಸಿತು ಮತ್ತು ಒಂದು ವೆಚ್ಚ-ತಳ್ಳಿಕೆಯ ಹಣದುಬ್ಬರವನ್ನು ಉಂಟುಮಾಡಿತು. ಅಂತಿಮವಾಗಿ ಇದು ಸರಕುಗಳ ಬೆಲೆಗಳಿಗೆ ವರ್ಗಾಯಿಸಲ್ಪಟ್ಟಿತು.

ಸಾಮಾನ್ಯವಾಗಿ ಸಂಘಗಳ ಮೂಲಕ ಬಲವಾಗಿ ಸಂಘಟಿತರಾಗುವ ಕಾರ್ಮಿಕರ ವೇತನವು ಬೆಲೆ ಸೂಚ್ಯಂಕದೊಂದಿಗೆ ಜೋಡಣೆಯಾಗಿರುವ ಸಮಾಜದಲ್ಲಿ, ಆರ್ಥಿಕ ಸಂಕಷ್ಟಗಳನ್ನು ಕಡಿಮೆ ಮಾಡುವ ವ್ಯವಸ್ಥೆ ಇಲ್ಲದಿರುವ ಪರಿಸ್ಥಿತಿಯನ್ನು ಅಸಂಘಟಿತ ಕಾರ್ಮಿಕರ ವಿಶಾಲ ಪಡೆಯ ಒದಗಿಸುವ ಕಾರಣದಿಂದಾಗಿ, ಈಗ ಸಣ್ಣ ಪ್ರಮಾಣದ ಹಣದುಬ್ಬರ ಉಂಟಾದರೂ ಅದು ತಕ್ಷಣವೇ ಬೆಲೆಗಳ ತೀಕ್ಷ್ಣ ಏರಿಕೆಗೆ ಕಾರಣವಾಗುತ್ತದೆ. ಹಾಗಾಗಿ, ಒಂದು ಬಲು ಸಣ್ಣ ಕಾಲಾವಧಿಯಲ್ಲಿಯೇ ಹಣದುಬ್ಬರವು ಅರ್ಜೆಂಟೀನಾದಲ್ಲಿ ವೇಗ ಪಡೆದುದರಲ್ಲಿ ಆಶ್ಚರ್ಯವೇನಿಲ್ಲ.

ಕಾರ್ಮಿಕ ವರ್ಗದ ಮೇಲೆ ಅತ್ಯಂತ ಕೆಟ್ಟ ದಾಳಿಯ ಸೂಚನೆ

ಈ ಹಣದುಬ್ಬರವನ್ನು ನಿಯಂತ್ರಿಸುವ ಸಲುವಾಗಿ ಬಂಡವಾಳದ ಪಲಾಯನದ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಸ್ತಾಪವನ್ನು ಮಿಲೀ ಸರ್ಕಾರ ಮಾಡುವುದಿಲ್ಲ. ವಿದೇಶಿ ವಿನಿಮಯ ಕೊರತೆಯನ್ನು ನೀಗಿಸಿಕೊಳ್ಳುವ ಸಲುವಾಗಿ ಸೂಕ್ತ ವ್ಯಾಪಾರ ನಿಯಂತ್ರಣಗಳನ್ನು ಜಾರಿ ಮಾಡುವ ಮೂಲಕ ವಿನಿಮಯ ದರವನ್ನು ಸ್ಥಿರಗೊಳಿಸುವ ಪ್ರಸ್ತಾಪವನ್ನು ಮಿಲೀ ಸರ್ಕಾರ ಮಾಡುವುದಿಲ್ಲ. ಬೆಲೆಗಳನ್ನು ನೇರವಾಗಿ ನಿಯಂತ್ರಿಸುವ ಮೂಲಕವಾದರೂ ಹಣದುಬ್ಬರವನ್ನು ನಿಯಂತ್ರಿಸುವ ಕಾರ್ಯವನ್ನು ಮಿಲೀ ಸರ್ಕಾರ ಮಾಡುವುದಿಲ್ಲ. ಅರ್ಜೆಂಟೀನಾದ ಕಾರ್ಮಿಕ ವರ್ಗದ ಮೇಲೆ ಮತ್ತು ಅದರ ಕಾರ್ಮಿಕ ಸಂಘಗಳ ಮೇಲೆ ಬೃಹತ್ ದಾಳಿಯನ್ನು ಪ್ರಾರಂಭಿಸುವ ಮೂಲಕ ಮಿಲೀ ಸರ್ಕಾರವು ಹಣದುಬ್ಬರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಮಿಲೀ ಸರ್ಕಾರದ ನೀತಿ-ಪ್ರಸ್ತಾಪವು ಆ ದೇಶದ ಕಾರ್ಮಿಕ ವರ್ಗದ ಮೇಲೆ ನಡೆಸುವ ಅತ್ಯಂತ ಕೆಟ್ಟ ರೂಪದ ದಾಳಿಯ ಸೂಚನೆಯಾಗಿದೆ. ಅರ್ಜೆಂಟೀನಾದ ಶ್ರೀಮಂತರು ಆ ದೇಶದಿಂದ ಮೆಟ್ರೋಪಾಲಿಟನ್ ಕೇಂದ್ರಗಳಿಗೆ ಸಂಪತ್ತನ್ನು ವರ್ಗಾಯಿಸಿದ ಹೊರೆಯನ್ನು ಕಾರ್ಮಿಕ ವರ್ಗವು ಹೊರುವಂತೆ ಮಾಡಲಾಗಿದೆ.

ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಮುನ್ನೆಲೆಗೆ ಬರುತ್ತಿರುವ ನವ-ಫ್ಯಾಸಿಸ್ಟ್ ಆಡಳಿತಗಾರರ ಪಟ್ಟಿಗೆ ಜೇವಿಯರ್ ಮಿಲೀ ಇತ್ತೀಚಿನ ಸೇರ್ಪಡೆಯಾಗಿದ್ದಾರೆ. ನವ-ಫ್ಯಾಸಿಸಂನ ಈ ಏರಿಕೆಯು ನವ-ಉದಾರವಾದದ ಬಿಕ್ಕಟ್ಟಿನ ಒಂದು ಪ್ರತಿಬಿಂಬವಾಗಿದೆ, ಈ ಸನ್ನಿವೇಶದಲ್ಲಿ ಹಿರಿಯ ಬೂರ್ಜ್ವಾಗಳು ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಮತ್ತು ಕಾರ್ಮಿಕ ವರ್ಗದ ಮೇಲೆ ತಮ್ಮ ದಾಳಿಯನ್ನು ಮುಂದುವರೆಸಲು ಫ್ಯಾಸಿಸ್ಟ್ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿವೆ. ನವ-ಫ್ಯಾಸಿಸ್ಟ್ ಆಡಳಿತಗಾರರು ಮೇಲೆ ಬರುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ, ಅರ್ಜೆಂಟೀನಾದಲ್ಲಿ ಪ್ರಸ್ತಾಪವಾಗುತ್ತಿರುವರೀತಿಯಲ್ಲಿ,ಹಣದುಬ್ಬರದಿಂದ ಹಿಡಿದು ನಿರುದ್ಯೋಗದ ಹೇರಿಕೆ ಮತ್ತು ಕಾರ್ಮಿಕರ ಆದಾಯದ ಹಿಂಡುವಿಕೆಯವರೆಗೆ, ಬಿಕ್ಕಟ್ಟಿನ ಸ್ವರೂಪವನ್ನು ಬದಲಾಯಿಸಬಹುದೇ ವಿನಃ ಬಿಕ್ಕಟ್ಟನ್ನು ಪರಿಹರಿಸುವುದು ಸಾಧ್ಯವಿಲ್ಲ.

ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದಂತೆ ಮತ್ತು ರಫ್ತು ಬೆಳವಣಿಗೆಯ ದರವು ಅರ್ಜೆಂಟೀನಾದಂತಹ ದೇಶಗಳಿಗೆ ಇನ್ನಷ್ಟು ನಿಧಾನವಾಗುತ್ತಿದ್ದಂತೆ, ಅರ್ಜೆಂಟೀನಾದ ನವ-ಫ್ಯಾಸಿಸ್ಟ್ ಕಾರ್ಯತಂತ್ರವು ಹೆಚ್ಚಿದ ನಿರುದ್ಯೋಗ ಮತ್ತು ಕುಗ್ಗಿದ ವರಮಾನದ ರೂಪದಲ್ಲಿ ಕಾರ್ಮಿಕರ ಮೇಲೆ ಹೊರೆಯನ್ನು ಹೆಚ್ಚಿಸುತ್ತದೆ: ಮೇಲೆ ಉಲ್ಲೇಖಿಸಿದ ಇಮ್ಮಡಿ ಹಿಂಡಿಕೆ ಜನರಿಗೆ ಇನ್ನಷ್ಟು ಉಸಿರುಗಟ್ಟುವಂತಹ ಪರಿಸ್ಥಿತಿಯನ್ನೇ ತರುತ್ತದೆ. ಆದ್ದರಿಂದ, ನಿಜವಾಗಿಯೂ ಬಿಕ್ಕಟ್ಟಿಗೆ ಇರುವ ಪರಿಹಾರ ಎಂದರೆ, ನವ-ಉದಾರವಾದಿ ವ್ಯವಸ್ಥೆಯನ್ನೇ ಮೀರುವುದು.

ಪಿಎಂ ಕೇರ್ಸ್ ನಿಧಿಗೆ ಬಂದ ಸಹಸ್ರಾರು ಕೋಟಿ.... ಪುಟ 11 ರಿಂದ

ಸಾರ್ವಜನಿಕ ಚಾರಿಟಬಲ್ ಟ್ರಸ್ಟ್ ಆಗಿದ್ದು, ಯಾವುದೇ ಸಾರ್ವಜನಿಕ ನಿಧಿಯನ್ನು ಒಳಗೊಂಡಿರುವುದಕ್ಕಿಂತ ಹೆಚ್ಚಾಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಸ್ವಯಂಪ್ರೇರಿತ ಕೊಡುಗೆಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ, ಇದನ್ನು ಸಿಎಜಿ ಆಡಿಟ್ ಮಾಡುವ ಅಗತ್ಯವಿಲ್ಲ ಮತ್ತು ಬದಲಿಗೆ ಖಾಸಗಿ ಅಕೌಂಟೆಂಟ್ ಮೂಲಕ ಆಡಿಟ್ ಮಾಡಬಹುದು." ಎಂದು ಹೇಳಿ ಈ ಅರ್ಜಿಯನ್ನು 2020ರ ಆಗಸ್ಟ್ 18 ರಂದು ವಜಾಗೊಳಿಸಿತು.

ಸರ್ಕಾರಿ ನಿಧಿಯಲ್ಲ: ಮಾಹಿತಿಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ!!

2023ರ ಜನವರಿಯಲ್ಲಿ, ಮಾಹಿತಿ ಹಕ್ಕು ಕಾಯಿದೆ, 2005 ರ ಅಡಿಯಲ್ಲಿ ಮಾಹಿತಿ ಕೇಳಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರಧಾನ ಮಂತ್ರಿ ಕಚೇರಿಯು (PMO) ದೆಹಲಿ ಹೈಕೋರ್ಟ್‌ಗೆ ತಿಳಿಸಿದ್ದು ಹೀಗೆ: "ಪಿಎಂ ಕೇರ್ಸ್ ನಿಧಿಯು ಭಾರತದ ಸಂವಿಧಾನದ 12 ನೇ ವಿಧಿಯ ಅಡಿಯಲ್ಲಿ 'ಸಾರ್ವಜನಿಕ ಪ್ರಾಧಿಕಾರ' ಅಲ್ಲ, ಈ ನಿಧಿಯನ್ನು ಭಾರತ ಸರ್ಕಾರವು ನಿಯಂತ್ರಿಸುವುದಿಲ್ಲ. ಟ್ರಸ್ಟ್ ಯಾವುದೇ ಸರ್ಕಾರಿ ಹಣವನ್ನು ಸ್ವೀಕರಿಸುವುದಿಲ್ಲ ಮತ್ತು ಅದರ ಕಾರ್ಯಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಗೆ ಉತ್ತರಿಸಲಾಗುವುದಿಲ್ಲ."

ಪಿಎಂ ಕೇರ್ಸ್ ನಿಧಿಯು ಸಂವಿಧಾನದಡಿಯಲ್ಲಿ 'ರಾಜ್ಯ' (State) ಅಲ್ಲ ಎಂದು ಕಂಡುಬಂದರೆ, 'gov' ಎಂಬ ಡೊಮೇನ್ ಹೆಸರು, ಪ್ರಧಾನಿಯವರ ಭಾವಚಿತ್ರ, ರಾಜ್ಯ ಲಾಂಛನ ಇತ್ಯಾದಿಗಳ ಬಳಕೆಯನ್ನು ನಿಲ್ಲಿಸಬೇಕು. ನಿಧಿಯ ಟ್ರಸ್ಟಿಗಳು ಪ್ರಧಾನ ಮಂತ್ರಿ, ರಕ್ಷಣಾ ಸಚಿವರು, ಗೃಹ ಸಚಿವರು ಮತ್ತು ಹಣಕಾಸು ಸಚಿವರು ಮತ್ತು ನಿಧಿ ರಚನೆಯಾದ ತಕ್ಷಣ, ಕೇಂದ್ರವು ತನ್ನ ಉನ್ನತ ಸರ್ಕಾರಿ ಅಧಿಕಾರಿಗಳ ಮೂಲಕ ನಿಧಿಯನ್ನು ಸ್ಥಾಪಿಸಿ ಸರ್ಕಾರವು ನಿರ್ವಹಿಸುತ್ತಿದೆ ಎಂದು ಪ್ರತಿನಿಧಿಸುತ್ತದೆ ಎಂದು ಗಂಗ್ವಾಲ್ ಅವರ ವಕೀಲರ ತಂಡ ತಮ್ಮ ಮನವಿಯಲ್ಲಿ ದೆಹಲಿ ಹೈಕೋರ್ಟ್‌ಗೆ ತಿಳಿಸಿದರು.

ಏಕೆ ಇಂತಹ ಮುಚ್ಚುಮರೆ?

ಪಿಎಂ ಕೇರ್ಸ್ ನಿಧಿ ಪಾರದರ್ಶಕವಾಗಿದ್ದರೆ, ಇದರ ಹಣವನ್ನು ಬಿಜೆಪಿ, ಸಂಘಪರಿವಾರ ಅಥವಾ ಬೇರೆ ಯಾವುದೇ ಸಂಘಟನೆ/ವ್ಯಕ್ತಿಗಳಿಂದ ದುರುಪಯೋಗ ಆಗುತ್ತಿಲ್ಲ ಎನ್ನುವುದಾದರೆ, ಇದರಲ್ಲಿ ಕಪ್ಪು ಹಣ ದಾನವಾಗಿ ಬರುವುದಿಲ್ಲ ಎನ್ನುವುದಾದರೆ, ಚೀನಾ ಸೇರಿದಂತೆ ವಿದೇಶಗಳಿಂದ, ವಿದೇಶಿ ಕಂಪನಿಗಳಿಂದ ಬರುವ ದಾನವು ದೇಶದ ಆಂತರಿಕ ಭದ್ರತೆಗೆ ಅಪಾಯ ಇಲ್ಲ ಎನ್ನುವುದಾದರೆ, ಇದರ ಲೆಕ್ಕ ಪತ್ರಗಳನ್ನು ಸಾರ್ವಜನಿಕರಿಗೆ ತಿಳಿಸಲು ಮುಂದಾಗುವುದರಲ್ಲಿ ತಪ್ಪೇನೂ ಇರುವುದಿಲ್ಲ ಅಲ್ಲವೇ? ಮೋದಿ ಸರ್ಕಾರ ಈ ಲೆಕ್ಕ ಪತ್ರಗಳನ್ನು ಮುಚ್ಚಿಡುವುದರಲ್ಲೇ ಪಿಎಂ ನಿಧಿಯ ಹಣದ ಪಾರದರ್ಶಕತೆಯ ಬಗ್ಗೆ ಬಹಳಷ್ಟು ಸಂಶಯಗಳು ಹುಟ್ಟಿಕೊಳ್ಳುತ್ತವೆ.

ಪ್ರಮುಖ ಕಟ್ಟುಪಾಡನ್ನು ಒತ್ತಿ ಹೇಳಿದೆ.

ಈ ಪ್ರಕರಣವನ್ನು ದಾಖಲಿಸುವ ಮೊದಲು, ದಕ್ಷಿಣ ಆಫ್ರಿಕಾ ಸರಕಾರವು ಇಸ್ರೇಲಿ ರಾಯಭಾರ ಕಚೇರಿಗೆ ಇಸ್ರೇಲಿನ ಕ್ರಮಗಳು ನರಮೇಧಕ್ಕೆ ಸಮನಾಗಿವೆ ಎಂಬ ಅಭಿಪ್ರಾಯವನ್ನು ಒಳಗೊಂಡ ರಾಜತಾಂತ್ರಿಕ ಟಿಪ್ಪಣಿಯನ್ನು ಕಳುಹಿಸಿತ್ತು. ಆದಾಗ್ಯೂ ಇಸ್ರೇಲ್ ಟಿಪ್ಪಣಿ ತೋರಿಸಿದ "ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿದೆ" ಮತ್ತು ಈ ವಿವಾದದ ಅಸ್ತಿತ್ವವನ್ನು ದೃಢೀಕರಿಸಿಯೂ ಇಲ್ಲ ಅಥವಾ ನಿರಾಕರಿಸಿಯೂ ಇಲ್ಲ". ಎಂದು ಐಸಿಜೆ ವ್ಯಾಪ್ತಿಗೆ ಈ ಪ್ರಕರಣ ಬರುತ್ತದೆ ಎಂಬ ವಾದದ ಭಾಗವಾಗಿ ದಕ್ಷಿಣ ಆಫ್ರಿಕಾ ತಿಳಿಸಿದೆ.

"ಗಾಜಾದಲ್ಲಿ ಈಗ ನಡೆಯುತ್ತಿರುವುದು ಎರಡು ಪಕ್ಷಗಳ ನಡುವಿನ ಸರಳ ಸಂಘರ್ಷ ಅಲ್ಲ. ಇವು ಇಸ್ರೇಲ್, ಅತಿಕ್ರಮಣ ಮಾಡಿದ ಶಕ್ತಿಯಾಗಿ ಮಾಡಿರುವ ವಿನಾಶಕಾರಿ ಕೃತ್ಯಗಳು." ಎಂದು ನ್ಯಾಯವಾದಿಗಳು ಒತ್ತಿ ಹೇಳಿದರು.

"ಗಾಜಾದಿಂದ ನಮ್ಮ ಮೊಬೈಲ್ ಫೋನ್, ಕಂಪ್ಯೂಟರ್ ಮತ್ತು ಟೆಲಿವಿಷನ್ ಪರದೆಗಳಿಗೆ ನೇರ ಪ್ರಸಾರವಾಗುತ್ತಿರುವ, ಪ್ಯಾಲೇಸ್ಟಿನಿಯನ್ ಜನರ ನರಮೇಧದ ಭಯಾನಕತೆಯ ಹೊರತಾಗಿಯೂ, ಇತಿಹಾಸದಲ್ಲಿ ಮೊದಲ ಬಾರಿ ನರಮೇಧವೊಂದನ್ನು ಅದರ ಬಲಿಪಶುಗಳು ಲೈವ್ ಆಗಿ ಪ್ರಸಾರ ಮಾಡುತ್ತಿದ್ದಾರೆ, ಜಗತ್ತು ಏನನ್ನಾದರೂ ಮಾಡಬಹುದೆಂಬ ವ್ಯರ್ಥ ಭರವಸೆಯಲ್ಲಿ ಅವರು ಇದನ್ನು ಮಾಡುತ್ತಿದ್ದಾರೆ. ಗಾಜಾ ನಮ್ಮೆಲ್ಲರ ಪೂರ್ಣ ನೈತಿಕ ವೈಫಲ್ಯ" ಎಂದು ನ್ಯಾಯವಾದಿಗಳು ತಿಳಿಸಿದರು.

ಪ್ಯಾಲೇಸ್ಟಿನಿಯನ್ ಜನರ ಪರವಾಗಿ ದಕ್ಷಿಣ ಆಫ್ರಿಕಾ ಕೋರಿದ ತಾತ್ಕಾಲಿಕ ಕ್ರಮಗಳ ಬಗ್ಗೆ ವಿವರಿಸುತ್ತಾ ನರಮೇಧ ಒಪ್ಪಂದದ ಅಡಿಯಲ್ಲಿ ಇಸ್ರೇಲ್ ತನ್ನ ಜವಾಬ್ದಾರಿಗಳಿಗೆ ವಿರುದ್ಧವಾಗಿ ವರ್ತಿಸಿದೆ ಅಥವಾ ಇಲ್ಲವೇ ಎಂಬುದನ್ನು ಐಸಿಜೆ ತಕ್ಷಣ ನಿರ್ಧರಿಸುವ ಅಗತ್ಯವಿಲ್ಲ. ಬದಲಾಗಿ, "ನ್ಯಾಯಾಲಯದ ಅಂತಿಮ ನಿರ್ಧಾರ ಬರುವ ಮೊದಲು ತಾತ್ಕಾಲಿಕ ಕ್ರಮಗಳು ಯಾವುವು ಎಂಬ ಪ್ರಶ್ನೆ ತುರ್ತಿನದು ಎಂದು ಹೇಳಿದರು.

ಅಕ್ಟೋಬರ್ 7ರಂದ ಇಸ್ರೇಲ್ ವಾದಿಸುತ್ತಿರುವಂತೆ ಆತ್ಮರಕ್ಷಣೆಯ ಹಕ್ಕಿನ ನೆಪವೊಡ್ಡಿ "ನರಮೇಧದ ಒಪ್ಪಂದ"ದ ಕಟ್ಟುಪಾಡುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆಕ್ರಮಿಸಿಕೊಂಡಿರುವ ಭೂಪ್ರದೇಶದಲ್ಲಿ ಆತ್ಮರಕ್ಷಣೆಯ ಹಕ್ಕಿನ ಪ್ರಶ್ನೆ ಬರುವುದಿಲ್ಲ. ವಿಶ್ವಸಂಸ್ಥೆಯ ಚಾರ್ಟರ್ ನ ಕಲಮು 51 ರ ಅಡಿಯಲ್ಲಿ ಬರುವ ಆತ್ಮರಕ್ಷಣೆಯ ನೀತಿ ಸಹ ದಾಳಿ ಅಥವಾ ಪ್ರಚೋದನೆ ಎಷ್ಟೇ ಅತಿರೇಕದ್ದು ಅಥವಾ ಭಯಾನಕವಾಗಿದ್ದರೂ, ನರಮೇಧವು ಎಂದಿಗೂ ಕಾನೂನುಬದ್ಧ ಪ್ರತಿಕ್ರಿಯೆಯಾಗುವುದಿಲ್ಲ. ಎಂದು ದ.ಆಫ್ರಿಕಾದ ನ್ಯಾಯವಾದಿಗಳು ಸ್ಪಷ್ಟೀಕರಿಸಿದ್ದಾರೆ.

"ನ್ಯಾಯಾಲಯವು ಕೈಕಟ್ಟಿ ಕುಳಿತು ಮೌನವಾಗಿರಲು ಇದು ಸಮಯವಲ್ಲ. ಅದು ತನ್ನ ಅಧಿಕಾರವನ್ನು ಪ್ರತಿಪಾದಿಸುವುದು ಅವಶ್ಯಕ ಮತ್ತು ನರಮೇಧ ಒಪ್ಪಂದದ ಅಡಿಯಲ್ಲಿರುವ ಕಟ್ಟುಪಾಡುಗಳನ್ನು ಅನುಸರಿಸಲು ಆದೇಶಿಸ ಬೇಕು ಎಂದು ದ.ಆಫ್ರಿಕಾದ ನ್ಯಾಯವಾದಿಗಳು ಪ್ರಬಲವಾಗಿ ಒತ್ತಾಯಿಸಿದರು.

ಜಗತ್ತು ಆಸಕ್ತಿ ಆಶಾಭಾವನೆಗಳಿಂದ ಗಮನಿಸುತ್ತಿದೆ


ಈ ನಡುವೆ ಐಸಿಜೆ ನಲ್ಲಿ ಗಾಜಾ ನರಮೇಧ ಪ್ರಕರಣವನ್ನು ಒಯ್ದ ದ.ಆಫ್ರಿಕಾದ ಐತಿಹಾಸಿಕ ಕಾರ್ಯವನ್ನು ಇಡೀ ಜಗತ್ತು ಆಸಕ್ತಿ, ಆಶಾಭಾವನೆಗಳಿಂದ ಗಮನಿಸುತ್ತಿದೆ. ಹಮಾಸ್ ವಕ್ತಾರರು, ಪ್ಯಾಲೇಸ್ಟಿನಿಯನ್ನರು ಈ ಪ್ರಕರಣವನ್ನು ಬಹಳ ಕಾಳಜಿ ಮತ್ತು ಆಸಕ್ತಿಯಿಂದ ಅನುಸರಿಸುತ್ತಿದ್ದಾರೆ. ಎಲ್ಲಾ ಒತ್ತಡಗಳನ್ನು ತಿರಸ್ಕರಿಸಲು ಗಾಜಾದ ಮೇಲಿನ ಆಕ್ರಮಣವನ್ನು ನಿಲ್ಲಿಸುವಂತೆ ನಾವು ಐಸಿಜೆ ಯನ್ನು ಕೋರುತ್ತೇವೆ ಎಂದಿದ್ದಾರೆ.

"ಪ್ರಗತಿಪರ ಅಂತರರಾಷ್ಟ್ರೀಯ" ಐಸಿಜೆ ಹೊರಗೆ ಸಾರ್ವಜನಿಕ ಸಭೆ ನಡೆಸಿತು, ಹಿರಿಯ ಯುಕೆ ಸಮಾಜವಾದಿ ರಾಜಕಾರಣಿ ಜೆರೆಮಿ ಕಾರ್ಬಿನ್ ಮತ್ತು ವರ್ಕರ್ಸ್' ಪಾರ್ಟಿ ಆಫ್ ಬೆಲ್ಜಿಯಂನ ನಾಯಕ ಪೀಟರ್ ಮೆರ್ಟೆನ್ಸ್ ಸೇರಿದಂತೆ ಭಾಷಣಕಾರರು, ಈ ಪ್ರಕರಣದ ವಿಚಾರಣೆ "ಪ್ಯಾಲೇಸ್ಟೀನಿಯನ್ನರಿಗೆ ಮಾತ್ರವಲ್ಲ ಇಡೀ ಮನುಕುಲಕ್ಕೆ ಸಂಬಂಧಿಸಿದ ವಿಷಯ" ಎಂದು ಹೇಳಿದ್ದಾರೆ.

ಹಿಂದೆ ಇಸ್ರೇಲ್ ಜೊತೆಗಿನ ಸಂಬಂಧವನ್ನು ಕಡಿತಗೊಳಿಸಿಸ ಸ್ಪೈನ್ ನ ನಗರ ಬಾರ್ಸಿಲೋನಾದ ಮಾಜಿ ಮೇಯರ್ ಅದಾ ಕೊಲಾವ್, "ಇಂದು ನಾವು ಮಾನವ ಹಕ್ಕುಗಳನ್ನು ರಕ್ಷಿಸಲು ಇಲ್ಲಿದ್ದೇವೆ. ಈ ಉಪಕ್ರಮಕ್ಕಾಗಿ ದಕ್ಷಿಣ ಆಫ್ರಿಕಾಕ್ಕೆ ಧನ್ಯವಾದಗಳು ಹಾಗೂ ತಕ್ಷಣದ ಮತ್ತು ಶಾಶ್ವತ ಕದನ ವಿರಾಮವನ್ನು ಕೋರುತ್ತೇವೆ." ಎಂದಿದ್ದಾರೆ.

ದಕ್ಷಿಣ ಆಫ್ರಿಕಾದ ಪ್ರಕರಣಕ್ಕೆ ಬ್ರೆಜಿಲ್ ಅಧ್ಯಕ್ಷ ಲುಲಾ, ಕೊಲಂಬಿಯ ಅಧ್ಯಕ್ಷ ಪೆಟ್ರೊ ಮತ್ತು ಅರಬ್ ಲೀಗ್ ಬೆಂಬಲ ವ್ಯಕ್ತಪಡಿಸಿವೆ.

ಐಸಿಜೆ ನರಮೇಧದ ಆಪಾದನೆ ಮನ್ನಿಸಿ ತುರ್ತು ತಾತ್ಕಾಲಿಕ ಕ್ರಮಗಳಿಗೆ ಆದೇಶ ಕೊಡುತ್ತಾ? ಅದನ್ನು ಇಸ್ರೇಲ್ ಪುರಸ್ಕರಿಸುತ್ತಾ ? ಎಂಬ ಪ್ರಶ್ನೆಗಳಿಗೆ ಉತ್ತರ ಸ್ಪಷ್ಟವಿಲ್ಲ. ಆದರೆ ಐಸಿಜೆ ಪ್ರಕರಣದ ಪ್ರಕ್ರಿಯೆ ಇಸ್ರೇಲನ್ನು ಪ್ರತ್ಯಕ್ಷ ಪರೋಕ್ಷವಾಗಿ ಬೆಂಬಲಿಸುತ್ತಿರುವ ಯು.ಎಸ್, ಯುರೋ ಕೂಟದ ದೇಶಗಳಿಗೆ ಇರುಸು ಮುರುಸು ಉಂಟು ಮಾಡಿ ಇಸ್ರೇಲಿನ ಮೇಲೆ ಕಡಿವಾಣ ಹಾಕುವ ಸಾಧ್ಯತೆಯಂತೂ ದಟ್ಟವಾಗಿದೆ.



ಇಸ್ರೇಲ್ ತನ್ನ ಮೌಖಿಕ ವಾದಗಳನ್ನು ಐಸಿಜೆ ಜನವರಿ 12 ರಂದು ಮಂಡಿಸಲಿದೆ. ಐಸಿಜೆ ಪ್ರಕರಣಕ್ಕೆ ಪ್ರತಿಕ್ರಿಯಿಸುತ್ತಾ ಇಸ್ರೇಲ್ ಮಿಲಿಟರಿ ಕಾರ್ಯಾಚರಣೆ ಅಕ್ಟೋಬರ್ 7ರ ಹಮಾಸ್ ದಾಳಿಗೆ ಪ್ರತಿಕ್ರಿಯೆ ಮಾತ್ರ, ಯುದ್ಧವನ್ನು ಅಂತರರಾಷ್ಟ್ರೀಯ ಕಾನೂನು ಮತ್ತು ಒಪ್ಪಂದಕ್ಕೆ ಅನುಗುಣವಾಗಿ ನಡೆಸಲಾಗುತ್ತಿದೆ ಎಂಬ ತನ್ನ ಎಂದಿನ ಧೋರಣೆಯನ್ನು ಪುನರುಚ್ಚರಿಸಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 15-21, 2024 Price: Rs. 10/- Date of Publication: 12 January 2024 RNI No. KARKAN /2006/17926 Posted on 16-01-2024
Posted at BG PSO, BG - 560026 **Posted at Periodical Rate -** Rs. 2



ಅಮೃತ ಸೋಮೇಶ್ವರ ಮತ್ತು ಅವರ ಕೃತಿಗಳ ಪ್ರಸ್ತುತತೆ

ವಾಸುದೇವ ಉಚ್ಚಿಲ್

ಸಾಹಿತಿ, ಸಂಶೋಧಕ ಅಮೃತ ಸೋಮೇಶ್ವರ ಅವರು 6-1-2024 ರಂದು ತಮ್ಮ 88ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಅಮೃತ ಸೋಮೇಶ್ವರರದ್ದು ಶಿವರಾಮ ಕಾರಂತರ ಹಾಗೆ ಬಹುಮುಖ ಪ್ರತಿಭೆ. 1957 ರಿಂದ ಕವನ ಸಂಕಲನ, ಕಥಾಸಂಕಲನಗಳ ಮೂಲಕ ಕನ್ನಡದಲ್ಲಿ ಸೃಜನಶೀಲರಾಗಿ ಸಾಗಿದ ಅವರ ಸಾಹಿತ್ಯಕ ಪಯಣ, ಮುಂದೆ ತುಳು ಭಾಷೆ ಮತ್ತು ಜಾನಪದ, ಯಕ್ಷಗಾನ ಸಂಶೋಧನೆ ಮತ್ತು ಕೃತಿರಚನೆ, ಮಾತೃಭಾಷೆ ಮೋಯಮಲಯಾಳ-ಕನ್ನಡ ಪದಗಳ ನಿಘಂಟು, ಮೋಯ ಮಲಯಾಳಿಗಳ ಆರಾಧನೆ-ಆಚರಣೆ ಇವುಗಳತ್ತಲೂ ವಿಸ್ತರಿಸಿದ್ದಲ್ಲದೆ, ಕನ್ನಡ ತುಳುಗಳಲ್ಲಿ ನಾಟಕ, ನೃತ್ಯ ರೂಪಕ, ಧ್ವನಿಸುರುಳಿಗಳು, ಅಲ್ಲದೆ ಯಕ್ಷ ವೇಷಭೂಷಣಗಳ ಸೃಜನಾತ್ಮಕ ಪರಿಷ್ಕರಣೆ-ಹೀಗೆ ಅಮೃತರ ಸಾಧನೆಗಳು ವಿಸ್ತಾರವಾದುದು. 65 ವರ್ಷಗಳನ್ನೂ ಮೀರಿದ ಅವಧಿಯಲ್ಲಿ ಅವರ ಮುದ್ರಿತ ಪುಸ್ತಕಗಳ ಸಂಖ್ಯೆ 150ನ್ನೂ ಮೀರಿದೆ.

ಈ ದೀರ್ಘ ಕಾಲಾವಧಿಯಲ್ಲಿ ಅಮೃತರ ಸಾಹಿತ್ಯ ರಚನೆ ಕನ್ನಡದ ನವೋದಯ ಘಟ್ಟದಲ್ಲೇ ಆರಂಭವಾಯಿತು. ಬಳಿಕದ ನವ್ಯ, ದಲಿತ-ಬಂಡಾಯದ ಸಾಹಿತ್ಯ ರಚನೆಗಳನ್ನು ಕುತೂಹಲದಿಂದ ಗಮನಿಸುತ್ತಲೇ, ಅವುಗಳ ಸತ್ವವನ್ನು ತಮ್ಮ ಸಾಹಿತ್ಯಕ ರಚನೆಯಲ್ಲಿ (ಯಕ್ಷಗಾನ ಪ್ರಸಂಗ ರಚನೆಯನ್ನೂ ಸೇರಿ) ಅಂತರ್ಗತ ಮಾಡಿಕೊಂಡರು. ನವೋದಯ ಸಾಹಿತ್ಯದ ಬಹಿರಂಗ ಶಿಲ್ಪಸ್ವರೂಪ ಅವರ ಕಥೆ, ಕಾವ್ಯ, ನಾಟಕ, ಯಕ್ಷಗಾನ, ಧ್ವನಿಸುರುಳಿಗಳ ಸಾಹಿತ್ಯದಲ್ಲಿ ಕಾಣಿಸಿಕೊಂಡರೂ, ನವ್ಯ, ದಲಿತ, ಬಂಡಾಯಗಳ ಆಂತರಿಕ ಆಶಯಗಳು ಅವರ ಸೃಜನಶೀಲ ಕೃತಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸಾಮಾಜಿಕ ಹಾಗೂ ರಾಜಕೀಯ ಚಿಂತನೆಗಳಲ್ಲಿ ಗಾಂಧೀವಾದದೊಂದಿಗೆ ಅಂಬೇಡ್ಕರ್ ಹಾಗೂ ಎಡಚಿಂತನೆಗಳೂ ನೇಯ್ಗೆಗೊಂಡುದಲ್ಲದೆ, ಕೊನೆಯವರೆಗೂ ಮತೀಯವಾದವನ್ನು ನಿರಾಕರಿಸುವ ಕಟಿಬದ್ಧತೆ ಅವರಲ್ಲಿ ಸ್ಪಷ್ಟವಾಗಿತ್ತು.

ಕಳೆದ 15 ವರ್ಷಗಳಲ್ಲಿ ಕನಿಷ್ಟ ವರ್ಷಕ್ಕೊಂದು ಬಾರಿಯಾದರೂ ನಾನು ಅವರ ಮನೆಗೆ ಹೋಗಿ ಮಾತುಕತೆ ನಡೆಸುತ್ತಿದ್ದೆ. ಏಳೆಂಟು ವರ್ಷಗಳ ಹಿಂದೆ ನಾನು ಹೋಗಿದ್ದಾಗ, ಅವರು ಕುವೆಂಪು ಅವರ "ಕಾನೂರು ಹೆಗ್ಗಡಿತಿ" ಕಾದಂಬರಿಯನ್ನು ಓದುತ್ತಿದ್ದರು. ನಾನು ಈ ಬಗ್ಗೆ ಪ್ರಶ್ನಿಸಿದಾಗ, ತಾನು ವರ್ಷಕ್ಕೆ ಒಂದು ಬಾರಿಯಾದರೂ "ಹೆಗ್ಗಡಿತಿ" ಯನ್ನು ಓದದೆ ಇರುವುದಿಲ್ಲ ಎಂದರು. ಅವರಿಗೆ "ಮದುಮಗಳು" ಗಿಂತ "ಹೆಗ್ಗಡಿತಿ" ಶ್ರೇಷ್ಠ ಕೃತಿ ಎನಿಸಿತ್ತು. ದೇಶದ ಸಾಹಿತ್ಯದಲ್ಲಿ ಅನೇಕ ಪ್ರಗತಿಪರ ಚಳುವಳಿಗಳು ಪಡಿಮೂಡಿ ಅವು ಅಮೃತರನ್ನು ಪ್ರಭಾವಿಸಿದ್ದರೂ, "ಹೆಗ್ಗಡಿತಿ"ಯ ಹೂವಯ್ಯನ ಆದರ್ಶಗಳು, ಅಧ್ಯಾತ್ಮ, ಜನಪರತೆ-ಇವುಗಳ ಸೈದ್ಧಾಂತಿಕ ನೆಲೆಯಾಗಿ ಗಾಂಧೀವಾದ-ಇವು ಅಮೃತರ ವ್ಯಕ್ತಿತ್ವವನ್ನು ಮತ್ತು ಸಾಹಿತ್ಯ ಸೃಷ್ಟಿಯನ್ನು ರೂಪಿಸಿದವು ಎಂದು ನಾನು ತಿಳಿದುಕೊಂಡಿದ್ದೇನೆ.

1979 ರಿಂದ 1997ರ ವರೆಗೆ ಉಡುಪಿಯ ಗೋವಿಂದ ಪೈ ಸಂಶೋಧನ ಸಂಸ್ಥೆ ತುಳು ಭಾಷಾ ನಿಘಂಟನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಅಮೃತರನ್ನೂ ಒಳಗೊಂಡು ನಾಡಿನ ಅನೇಕ ತುಳು ವಿದ್ವಾಂಸರನ್ನು ಬಳಸಿಕೊಂಡಿತ್ತು. ಈ ವಿದ್ವಾಂಸರ ಬಳಗ ಆಗಾಗ್ಗೆ ಮೂರ್‍ನಾಲ್ಕು ದಿನ ಉಡುಪಿಯಲ್ಲಿ ಸಂಸ್ಥೆಯ ಆವರಣದಲ್ಲಿ ತಂಗಿ, ಸಂವಾದ, ಚರ್ಚೆ, ಬರೆವಣಿಗೆ ಮಾಡುತ್ತಿದ್ದರು. ಏರ್ಯ ಲಕ್ಷ್ಮೀನಾರಾಯಣ ಆಳ್ವ ಅವರೂ ದೊಡ್ಡ ತುಳು ಜಾನಪದ ವಿದ್ವಾಂಸರೇ. ಅವರು ವಿಶ್ವ ಹಿಂದೂ ಪರಿಷತ್ತಿನ ಪ್ರಮುಖ ಜಿಲ್ಲಾ ಸಲಹೆಗಾರರೋ ಸಂಚಾಲಕರೋ ಆಗಿದ್ದರು. ರಾಮಜನ್ಮಭೂಮಿ ಚಳುವಳಿ ತೀವ್ರವಾಗಿದ್ದ ಕಾಲಘಟ್ಟದಲ್ಲಿ ರಾತ್ರಿ ಉಡುಪಿಯಲ್ಲಿ ತಂಗುತ್ತಿದ್ದ ದಿನಗಳಲ್ಲಿ ಆಳ್ವರಿಗೂ ಅಮೃತರಿಗೂ ದೊಡ್ಡ ವಾಗ್ವಾದಗಳೇ ನಡೆಯುತ್ತಿದ್ದವು. ಈ ಬಗ್ಗೆ ನನ್ನಲ್ಲಿ ಅಮೃತರು ಒಮ್ಮೆ ಹೇಳಿದ್ದರು. ಈ ವಾಗ್ವಾದಗಳು ರಾತ್ರಿ ಹೊತ್ತು ತಾರಕಕ್ಕೇರಿದರೂ, ಹಗಲು ನಿಘಂಟು ಕುರಿತಾದ ಕೆಲಸಗಳು ಯಾವ ಮನಃಕಷಾಯಕ್ಕೂ ಎಡೆಗೊಡದೆ ಸ್ನೇಹ ಸಲುಗೆಗಳಿಂದ ಮುನ್ನಡೆಯುತ್ತಿದ್ದವು. ಅಮೃತರ ಸ್ವಭಾವವೇ ಅಂತಹದು. ಇದರಿಂದಾಗಿ ವೈಚಾರಿಕವಾಗಿ ತೀರಾ ವಿರುದ್ಧವಾಗಿರುವವರೂ ಕೂಡಾ ಅವರೊಂದಿಗೆ ಹಗೆಯಿಲ್ಲದೆ ಮಾತನಾಡುವ ಒಂದು ಮನೋಸ್ವಾಸ್ಥ್ಯಕ್ಕೆ ಎಡೆಯಾಗುತ್ತಿತ್ತು. ಹೀಗಾಗಿಯೇ ಅಮೃತರ ಸಾಮೀಪ್ಯಕ್ಕೆ ಬಂದ ಜಿಜ್ಞಾಸುಗಳು ಮತ್ತೆ ಮತ್ತೆ ಅವರನ್ನು ಕಾಣಲು ಬಯಸುತ್ತಿದ್ದರು. ಕರಾವಳಿ ಕರ್ನಾಟಕದಲ್ಲಿ ಏಕೆ ಕರ್ನಾಟಕದಲ್ಲಿಯೇ ಇಂಥ ಸ್ನೇಹಪರ, ವಿನಯಶೀಲ ಮೇರು ಸಾಹಿತಿಯೊಬ್ಬರನ್ನು ನಾವು ಕಾಣಲಾರೆವು. ಇಲ್ಲಿ ನಾವು ಕಾಣುವುದು ಕೂಡಾ ಅವರ ಗಾಂಧೀವಾದವನ್ನೇ.

ಇನ್ನೊಂದು ಪ್ರಸಂಗವನ್ನು ಈಗಲೇ ಹೇಳಿ ಬಿಡಬೇಕು. ಬಾಬರಿ ಮಸೀದಿ-ರಾಮಜನ್ಮಭೂಮಿ ವಿವಾದದಲ್ಲಿ ಉತ್ತರ ಪ್ರದೇಶದ ಹೈಕೋರ್ಟೊಂದು ಒಂದು ಹಂತದಲ್ಲಿ ವಿವಾದಕ್ಕೊಳಗಾದ ಭೂಮಿಯನ್ನು 3 ಭಾಗ ಮಾಡಿ ಹಿಂದೂಗಳಿಗೆ ಒಂದು ಭಾಗ, ಮುಸ್ಲಿಮರಿಗೆ ಒಂದು ಭಾಗ, ರಾಮಲಲ್ಲಾನಿಗೆ ಒಂದು ಭಾಗ ಎಂದು ವಿಭಜಿಸಿ ನೀಡುವ ತೀರ್ಪು ನೀಡಿತು. ಅದಾದ ಒಂದೆರಡು ದಿನಗಳಲ್ಲಿ ಅಮೃತರನ್ನು ಆಕಸ್ಮಿಕವಾಗಿ ಭೇಟ್ಟಿ ಮಾಡಿದೆ. "ಈ ತೀರ್ಪು ಒಳ್ಳೆಯದೇ ಆಯಿತಲ್ಲ. ಮುಂದೆ ಸಂಘರ್ಷ ಕೊನೆಯಾಗಿ ಶಾಂತಿ ನೆಲೆಸಬಹುದಲ್ಲ" ಎಂದು ಕೇಳಿದರು. ಅದು ನ್ಯಾಯಯುತವಾಗಿಲ್ಲ ಎಂದು ನಾನು ವಿವರಿಸಿದೆ. ಆದರೆ ಅಮೃತರ ಕಳಕಳಿ ದೇಶದಲ್ಲಿ ಶಾಂತಿ, ನೆಮ್ಮದಿ ಎಂದು ಹೇಗೆ ಆದೀತು ಎಂಬುದೇ ಆಗಿತ್ತು.

ಇಷ್ಟೆಲ್ಲ ಹೇಳಿದ ಮೇಲೆ ಅವರ ಸಾಹಿತ್ಯಕ ಸಾಧನೆಗಳನ್ನು ಕೆಲವು ಮಾತುಗಳಲ್ಲಾದರೂ ಹೇಳಬೇಕಷ್ಟೆ. 1962ರಲ್ಲೇ ಪ್ರಕಟಗೊಂಡ "ತುಳು ಪಾಡ್ದನದ ಕಥೆಗಳು", ಮುಂದೆ ಹಂಪಿ ವಿ.ವಿ. ಪ್ರಕಟಿಸಿದ 16 ಪಾಡ್ದನಗಳನ್ನೊಳಗೊಂಡ "ತುಳು ಪಾಡ್ದನ ಸಂಪುಟ" ಹಾಗೂ ಹಲವು ಪ್ರಬಂಧ ಸಂಕಲನಗಳಲ್ಲಿ ಹಂಚಿಹೋಗಿರುವ ತುಳುವಿನ ಕುರಿತಾದ ಸಂಶೋಧನಾ ಬರಹಗಳು ಪ್ರಥಮ ದರ್ಜೆಯವಾಗಿವೆ. ಯಕ್ಷಗಾನ ಕುರಿತಾದ ಸಂಶೋಧನಾ ಬರಹಗಳೂ ಹೀಗೆ ಹಲವು ಸಂಕಲನಗಳಲ್ಲಿ ಹಂಚಿಹೋಗಿವೆ. 13 ಪ್ರಸಂಗಗಳಿರುವ "ಯಕ್ಷಗಾನ ಕೃತಿ ಸಂಪುಟ" ಅಲ್ಲದೆ ಇತರ ಹತ್ತು ಮೀರಿದ ಯಕ್ಷಗಾನ ಪ್ರಸಂಗಗಳಿವೆ. ನವ್ಯ ಸಾಹಿತ್ಯದಲ್ಲಿ ಅಲ್ಲದೆ ಪ್ರಾಚೀನ ಕನ್ನಡ ಕಾವ್ಯಗಳಲ್ಲೂ ಕಾಣಿಸುವ ವಿಶೇಷ ಬಗೆಯ ಪಾತ್ರ ನಿರ್ಮಾಣ ಅವರ ಯಕ್ಷಗಾನ ಪ್ರಸಂಗಗಳದ್ದು. ಇವುಗಳು ನಿಜವಾಗಿ ಅಮೃತರದ್ದೇ ಆದ ಅಪೂರ್ವ ಕಾವ್ಯಶೈಲಿಯನ್ನು ನಿರ್ಮಾಣ ಮಾಡಿರುವ ಕೃತಿಗಳು. ಇವು ಯಕ್ಷಗಾನ ಪ್ರಸಂಗಗಳಾಗಿರುವುದರಿಂದ ಬಹುಶಃ ಆಧುನಿಕ ಕನ್ನಡ ಕಾವ್ಯ ವಿಮರ್ಶಕರು ಅವುಗಳನ್ನು ಕಾವ್ಯ ವಿಮರ್ಶೆಯ ಪರಿಭಾಷೆಯಲ್ಲಿ ವಿಶ್ಲೇಷಿಸುವ ಕೆಲಸ ಮಾಡಿಲ್ಲವಾಗಿ, ಅಮೃತರ ಬಹುಮುಖ್ಯ ಸೃಜನಾತ್ಮಕ ಕೃತಿಗಳಾದ ಯಕ್ಷಗಾನ ಪ್ರಸಂಗಗಳು ವಿಮರ್ಶಕರ ಅವಗಣನೆಗೆ ತುತ್ತಾಗಿವೆ. ಯಕ್ಷಗಾನದ ಅಭಿಮಾನಿಗಳಾದ ಕರಾವಳಿ ಹಾಗೂ ಮಲೆನಾಡಿನ ರಸಿಕರು ಇವನ್ನು ಗುರುತಿಸಿದ್ದಾರೆ ಹಾಗೂ ಅವರನ್ನು "ಅಭಿನವ ಪಾರ್ತಿಸುಬ್ಬ" ನೆಂಬಂತೆ ಗೌರವಿಸಿದ್ದಾರೆ. ಆಧುನಿಕ ಸಂವೇದನೆಯ ಕಾಯಕಲ್ಪ, ಸಹಸ್ರ ಕವಚಮೋಕ್ಷ, ಮಹಾಶೂರ ಭೌಮಾಸುರ, ಗಂಗಾವತರಣ, ತ್ರಿಪುರದಹನ, ಮಹಾಕಲಿ ಮಗಧೇಂದ್ರ, ಅಮರವಾಹಿನಿ ಮೊದಲಾದ ಪ್ರಸಂಗಗಳು ಕೇವಲ ಓದುಗಬ್ಬವಾಗಿರದೆ, ರಂಗದಲ್ಲೂ ಪ್ರದರ್ಶನಗೊಂಡು, ಪುರಾಣೇತಿಹಾಸಗಳ ರೂಪದಲ್ಲಿ ಯಶಸ್ವಿಯಾಗಿರುವ ಆಧುನಿಕ ಕನ್ನಡ ನಾಟಕಗಳಿಗೆ ಸಮದಂಡಿಯಾಗಿ ಮೂಡಿ ಬಂದಿರುವುದನ್ನು ನಾಟಕ ವಿಮರ್ಶಕರೂ ಗಮನಿಸದೇ ಹೋಗಿದ್ದಾರೆ. ಅಮೃತರ ಯಕ್ಷಗಾನ ಪ್ರಸಂಗಗಳು ಆಧುನಿಕ ಕಾವ್ಯವೂ ಹೌದು, ಆಧುನಿಕ ನಾಟಕವೂ ಹೌದು. ತುಳು ಪಾಡ್ದನದ ಕಥೆಗಳನ್ನು ತುಳು ಭಾಷೆಯಲ್ಲಿಯೇ ಪ್ರಸಂಗಗಳಾಗಿ ಬರೆದವರಲ್ಲಿ ಅಮೃತರೇ ಮೊದಲಿಗರು.

ಅಮೃತರ ಮನೆ ಮಾತು ಮೋಯ ಮಲಯಾಳ. "ಮೋಯ ಮಲಯಾಳ-ಕನ್ನಡ ಪದಕೋಶ" ಅವರ ಒಂದು ವಿದ್ವತ್ಪೂರ್ಣ ನಿಘಂಟು. ಮೋಯ (ಬೆಸ್ತ) ಸಮುದಾಯದ ಆರಾಧನೆ ಹಾಗೂ ಆಚರಣೆಗಳ ಭಾರೀ ಸಂಗ್ರಹ ಹಾಗೂ ಶಾಸ್ತ್ರೀಯ ವಿಶ್ಲೇಷಣೆಗಳನ್ನೊಳಗೊಂಡ ಅವರ ಸಂಶೋಧನಾ ಗ್ರಂಥ "ಭಗವತೀ ಆರಾಧನೆ" (ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ) ಒಂದು ಅಪೂರ್ವ ಅಧ್ಯಯನ ಗ್ರಂಥ. 7 ತುಳು ನಾಟಕಗಳ ಸಂಪುಟ, ಕನ್ನಡ ನಾಟಕಗಳು, ತುಳು ಮತ್ತು ಕನ್ನಡಗಳಲ್ಲಿ 9 ಕವನ ಸಂಕಲನಗಳು, 4 ಕಥಾ ಸಂಕಲನಗಳು, 1 ಕಾದಂಬರಿ, ಕನ್ನಡ ಮತ್ತು ತುಳುವಿನ ವಿದ್ಯಮಾನಗಳಿಗೆ ಕಾಲಕಾಲಕ್ಕೆ ಅವರು ಪ್ರತಿಕ್ರಿಯಿಸಿದ ಬರಹಗಳು, ಸಂಕಲನಗಳು, ಅನುವಾದಗಳು-ಹೀಗೆ ನೂರಾರು ಕೃತಿಗಳನ್ನು ತಮ್ಮ ಕೊನೆಗಾಲದವರೆಗೂ ನೀಡುತ್ತಾ ಬಂದಿದ್ದಾರೆ.

ಹಲವಾರು ಪ್ರಶಸ್ತಿಗಳು, ಗೌರವಗಳು

ಅಮೃತ ಸೋಮೇಶ್ವರ ಅವರಿಗೆ ಹಲವಾರು ಪ್ರಶಸ್ತಿಗಳು, ಗೌರವಗಳು ಸಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ "ತುಳು ಭಾಷಾ ಸಮ್ಮಾನ್ ಪ್ರಶಸ್ತಿ"ಯನ್ನು ನೀಡಿ ಗೌರವಿಸಿದೆ. ಪುತ್ತೂರಿನ ಕಾಲೇಜೊಂದರಲ್ಲಿ ದೀರ್ಘಕಾಲ ಕನ್ನಡ ಪ್ರಾಧ್ಯಾಪಕರಾಗಿದ್ದ ಅವರು, ನಿವೃತ್ತಿಯ ಅನಂತರದಲ್ಲಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಅವರನ್ನು ಹಾಗೂ ಅವರ ಕೃತಿಗಳನ್ನು ಕುರಿತು ಎರಡು ಪಿ.ಎಚ್.ಡಿ ಪ್ರಬಂಧಗಳು ಬಂದಿವೆ. ನವೋದಯರಿಂದ ಇಂದಿನವರೆಗಿನ ಕನ್ನಡ ಸಾಹಿತ್ಯವನ್ನೂ, ಆಧುನಿಕ ಸ್ವಾತಂತ್ರ್ಯೋತ್ತರ ಭಾರತವನ್ನೂ ಸಮಗ್ರೀಕರಿಸಿಕೊಂಡ ಸಾಹಿತಿ ಅವರಾಗಿದ್ದಾರೆ. ಯಕ್ಷಗಾನ ಪ್ರಸಂಗ ರಚನೆ ಮತ್ತಿತರ ಅವರ ಕೃತಿಗಳಲ್ಲಿ ಅವರ ಶ್ರೇಷ್ಠ ಕಲೆಗಾರಿಕೆ ವ್ಯಕ್ತವಾಗಿದೆ. ಆ ಕಲೆಗಾರಿಕೆಯ ಮೂಲಕವೇ ಅವರು ಇಂದಿನ ದುರಿತ ಕಾಲದ ಸವಾಲನ್ನು ಎದುರಿಸಿದ್ದಾರೆ ಮತ್ತು ಗೆದ್ದಿದ್ದಾರೆ. ಗಾಂಧೀವಾದ ಈ ಕಲೆಗಾರಿಕೆಯ ಅಂತಃಸ್ರೋತವಾಗಿದೆ. ನಾವುಗಳು ಅವರನ್ನು ಸರಿಯಾಗಿ ಗ್ರಹಿಸಿ ಅರ್ಥೈಸುವುದರಲ್ಲಿ ಸ್ವಲ್ಪ ಹಿಂದೆ ಬಿದ್ದಿರಬಹುದು ಅಷ್ಟೆ.

ಜನಶಕ್ತಿ ಶ್ರದ್ಧಾಂಜಲಿ

ಹಿರಿಯ ವಿದ್ವಾಂಸ ಡಾ ಅಮೃತ ಸೋಮೇಶ್ವರ ಅವರ ಅಗಲಿಕೆಗೆ ಜನಶಕ್ತಿ ಕನ್ನಡ ವಾರಪತ್ರಿಕೆಯ ಸಂಪಾದಕೀಯ ಮಂಡಳಿಯು ಅತೀವ ದುಃಖವನ್ನು ವ್ಯಕ್ತಪಡಿಸಿದೆ. ಸಮಾನತೆ, ಸಾಮಾಜಿಕ ಕಳಕಳಿ ಇದ್ದ ಅವರ ಅಗಲಿಕೆ ನಾಡಿನ ವಿದ್ವತ್ ಲೋಕಕ್ಕೆ, ಸಾಮಾಜಿಕ ಚಳುವಳಿಗಳಿಗೂ ಆದ ಅಪಾರ ಹಾನಿ ಎಂದು ತಿಳಿಸಿದ್ದು ಹಿಂದೆ ಐಕ್ಯರಂಗ, ಜನಶಕ್ತಿ ವಾರಪತ್ರಿಕೆಯೊಂದಿಗಿನ ಅವರಜೊತೆಗಿನ ಒಡನಾಟವನ್ನು ನೆನಪಿಸಿಕೊಂಡು ಗೌರವಪೂರ್ವಕ ಶ್ರದ್ಧಾಂಜಲಿ ಸಲ್ಲಿಸಿದೆ. ಅವರ ಕುಟುಂಬ ಹಾಗೂ ಬಂಧು ಮಿತ್ರರಿಗೆ ಸಂತಾಪವನ್ನು ತಿಳಿಸಿದೆ.

-ಸಂ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**